ಸಂಪುಟ: 06 ಸಂಚಿಕೆ: 43 ಪುಟಗಳು: 08 ಸೋಮವಾರ 27 ಏಪ್ರಿಲ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ಮತ್ತೊಬ್ಬರ ಜೀವನ ಕಂಡು ಅಸೂಯೆ ಪಟ್ಟು ಹುಸಿ ನಗುವುದಕ್ಕಿಂತ ಅವರ ಆತ್ಮವನ್ನು ಅರಿತು ಆನಂದ ಪಟ್ಟರೆ ಅತ್ಯುತ್ಸಾಹ ಬರುವುದು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರಾಜ್ಯದ ಆರೋಗ್ಯ ಇಲಾಖೆ ಅನಾರೋಗ್ಯ ಪೀಡಿತವಾಗಿದೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಆರೋಗ್ಯ ಇಲಾಖೆ ಅನಾರೋಗ್ಯ ಪೀಡಿತವಾಗಿದೆ, ಸರ್ಕಾರಿ ಆಸ್ಪತ್ರೆಗಳು ಕೋಮ ಸ್ಥಿತಿಯಲ್ಲಿವೆ ಎಂದು ನಾನು ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿದಾಗ ಎಲ್ಲವೂ ಸರಿಯಿದೆ ಎಂದು ತಿಪ್ಪೆ ಸಾರಿಸುವ ಮಾತಾಡಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಕಾರ್ಯವೈಖರಿಗೆ ಈಗ ಮಾಧ್ಯಮಗಳೇ ಕನ್ನಡಿ ಹಿಡಿದಿವೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ. ಆಸ್ಪತ್ರೆಗಳಲ್ಲಿ ಔಷಧಗಳ ದಾಸ್ತಾನಿಲ್ಲ, ಖಾಲಿ ಇರುವ ವೈದ್ಯರು, ಶುಶ್ರೂಷಕರ ಹುದ್ದೆಗಳ ಭರ್ತಿ ಇಲ್ಲ, ಸ್ಕ್ಯಾನಿಂಗ್ ಸೇವೆ ಒದಗಿಸುವ ಕಂಪನಿಗಳ ಬಾಕಿ ಪಾವತಿ ಮಾಡದೇ ಸ್ಕ್ಯಾನಿಂಗ್ ಸೇವೆಯಿಲ್ಲ, ಹೀಗೆ ಸಾಲು ಸಾಲು ಸಮಸ್ಯೆಗಳಿಂದ ರಾಜ್ಯಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ಥವಾಗಿದೆ ಎಂದು ಹೇಳಿದ್ದಾರೆ. ಆಂತರಿಕ ಕಚ್ಚಾಟ, ರಾಜಕೀಯ ಮೇಲಾಟ, ಬಣ ಬಡಿದಾಟ ಇವುದರಲ್ಲೇ ಮುಳುಗಿರುವ ಕಾಂಗ್ರೆಸ್ ಸರ್ಕಾರ, ಆರೋಗ್ಯ ಇಲಾಖೆಯನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿ ಸರ್ಕಾರಿ ಆಸ್ಪತ್ರೆಗಳನ್ನು ಅಧೋಗತಿಗೆ ತಳ್ಳಿದೆ. ಈಗಲಾದರೂ ಎಚ್ಚೆತ್ತುಕೊಂಡು ಆರೋಗ್ಯ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ, ಜನ ಕಾಂಗ್ರೆಸ್ ಸರ್ಕಾರದ ವಿರುದ್ಧ ದಂಗೆ ಏಳುವ ದಿನ ಬಹಳ ದೂರವಿಲ್ಲ ಎಂದು ಎಚ್ಚರಿಸಿದ್ದಾರೆ.

## ಯಾವಾಗ ಏನು ಆಗಬೇಕೋ ಆಗುತ್ತೆ, ಪಕ್ಷದ ಮೇಲೆ ವಿಶ್ವಾಸವಿದೆ

• ಉದಯವಾಹಿನಿ, ಬೆಂಗಳೂರು

'ಯಾವಾಗ ಏನು ಆಗಬೇಕೋ ಅದು ಆಗುತ್ತದೆ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. 'ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ' ಎಂದರು.

ದೆಹಲಿ ಪ್ರವಾಸದ ಬಗ್ಗೆ ಕೇಳಿದಾಗ, ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಏನೇನೂ ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ ಎಂದು ಸ್ಪಷ್ಟಪಡಿಸಿದರು. 'ಪಕ್ಷದಲ್ಲಿ ಗೊಂದಲಗಳು ಇವೆ' ಎಂಬ ಸಚಿವ ಸತೀಶ ಜಾರಕಿಹೊಳಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ತಿಳಿಸಿದರು. ನಾಯಕತ್ವ ಬದಲಾವಣೆ ವಿಚಾರವಾಗಿ ಕೇಳಿದಾಗ, 'ನಿಮಗೆ ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತು ಚರ್ಚೆ ಮಾಡಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಆವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಮತ್ತು ಮುಖ್ಯಮಂತ್ರಿ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ತಿಳಿಸಿದರು.

## ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ 27ರಂದು ಶಿಕ್ಷೆ ಪ್ರಮಾಣ ಪ್ರಕಟ

• ಉದಯವಾಹಿನಿ, ಬೆಂಗಳೂರು

ಮಂಗಳೂರಿನಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಅಪರಾಧಿ ಮೊಹಮ್ಮದ್ ಶಾರೀಕ್ ಸಲ್ಲಿಸಿದ್ದ ತಪ್ಪೊಪ್ಪಿಗೆ ಅರ್ಜಿಯನ್ನು ರಾಷ್ಟ್ರೀಯ ತನಿಖಾ ದಳದ ವಿಶೇಷ ನ್ಯಾಯಾಲಯವು ಮಾನ್ಯ ಮಾಡಿದ್ದು, ಏಪ್ರಿಲ್ 27ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಿದೆ. ನ್ಯಾಯಾಲಯದಲ್ಲಿ ಶನಿವಾರವೂ ಪ್ರಕರಣದ ವಿಚಾರಣೆ ನಡೆಯಿತು.

ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಅವರು, ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸುವಂತೆ ನ್ಯಾಯಾಧೀಶರಲ್ಲಿ ಕೋರಿದರು. ಮೂರು ತಿಂಗಳ ಹಿಂದೆ ಶಾರೀಕ್, ಕೃತ್ಯ ಎಸಗಿದ್ದಾಗಿ ತಪ್ಪೊಪ್ಪಿಕೊಂಡು ಎನ್ಐಎ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಈ ಅರ್ಜಿಯನ್ನು ನ್ಯಾಯಾಲಯ ಪುರಸ್ಕರಿಸಿತ್ತು.

2022ರ ನ.19ರಂದು ಸಂಜೆ 4.40ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಟೋದಲ್ಲಿ ಶಾರೀಖ್ ತೆರಳುವಾಗ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಬಾಂಬ್ ಸ್ಫೋಟ ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್ ವಿರುದ್ಧ ನ್ಯಾಯಾಲಯಕ್ಕೆ ಎನ್ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

## ಶಾಲೆಗಳಲ್ಲಿ ಕನ್ನಡ ಪತ್ರಿಕೆ ಓದು ಕಡ್ಡಾಯ: ಶಿಕ್ಷಣ ಇಲಾಖೆ ಸೂಚನೆ

• ಉದಯವಾಹಿನಿ, ಬೆಂಗಳೂರು


ಶಾಲೆಗಳಲ್ಲಿ ಪ್ರತಿ ದಿನ 10 ನಿಮಿಷ ಕನ್ನಡ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ. ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆಯ ನಂತರ ವಿದ್ಯಾರ್ಥಿಗಳು ಕನ್ನಡ ಪತ್ರಿಕೆಗಳನ್ನು ಓದಬೇಕು. ಶಾಲೆಗಳಲ್ಲಿ ಪ್ರತಿದಿನ ಕನಿಷ್ಠ 10ರಿಂದ 15 ನಿಮಿಷ ಪತ್ರಿಕೆಗಳನ್ನು ಓದುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿ ಸಹಾಯವಾಗುತ್ತದೆ. ಪ್ರಸ್ತುತ ಘಟನೆಗಳ ಕುರಿತು ಸಾಮಾನ್ಯ ಜ್ಞಾನ ಹೆಚ್ಚುತ್ತದೆ. ಪದಸಂಪತ್ತು, ಭಾಷೆ ಹಾಗೂ ಬರವಣಿಗೆ ಕೌಶಲಗಳೂ ಉತ್ತಮವಾಗುತ್ತವೆ ಎಂದು ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ತಿಳಿಸಿದ್ದಾರೆ.

# ಡೊಂಕು ಬಾಲದ ದೊಡ್ಡಣ್ಣ ಟ್ರಂಪ್‌ಗೆ ಗ್ರಹಣ









### ಶ್ವೇತಭವನದ ಔತಣಕೂಟದಲ್ಲಿ ಗುಂಡಿನ ಸದ್ದು

### ಡೊನಾಲ್ಡ್ ಟ್ರಂಪ್ ಸ್ಥಳಾಂತರ

### ಶಂಕಿತನ ಫೋಟೋ ಬಿಡುಗಡೆ ಮಾಡಿದ ಟ್ರಂಪ್

### ವರ್ಷದೊಳಗೆ 3ನೇ ಬಾರಿ ಟ್ರಂಪ್ ಹತ್ಯೆ ಯತ್ನ

• ಉದಯವಾಹಿನಿ, ಬೆಂಗಳೂರು

ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಯ ಹಿಲ್ಟನ್ ಹೋಟೆಲ್‌ನಲ್ಲಿ ನಡೆದ ಹೈಪ್ರೊಫೈಲ್ ವರದಿಗಾರರ ಔತಣಕೂಟದ ವೇಳೆ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇಲೆ ಹತ್ಯೆ ಯತ್ನ ನಡೆದಿದೆ ಎಂಬ ಆರೋಪದ ಹಿನ್ನೆಲೆ ಕೋಲ್ ಥಾಮಸ್ ಅಲೆನ್ ಎಂಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವರದಿಯಾಗಿದೆ. ಲಭ್ಯ ಮಾಹಿತಿಯ ಪ್ರಕಾರ, ಬಂಧಿತ ಕೋಲ್ ಅಲೆನ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ 2017ರಲ್ಲಿ ಪದವಿ ಪಡೆದಿದ್ದು, ನಂತರ ಸ್ನಾತಕೋತ್ತರ ಪದವಿಯನ್ನೂ ಪೂರ್ಣಗೊಳಿಸಿದ್ದಾನೆ. ಅವನು ಸಿ2 (ಅ2) ಎಂಬ ಶೈಕ್ಷಣಿಕ ಸಂಸ್ಥೆಯಲ್ಲಿ ಪಾರ್ಟ್ ಟೈಮ್ ಬೋಧಕನಾಗಿ ಕಾರ್ಯನಿರ್ವಹಿಸುತ್ತಿದ್ದು, 2024ರಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನೂ ಪಡೆದಿದ್ದಾನೆ ಎಂದು ತಿಳಿದುಬಂದಿದೆ. ಜೊತೆಗೆ 2014ರಲ್ಲಿ ನಾಸಾ ಜೆಟ್ ಪ್ರೊಪಲ್ಸನ್ ಲ್ಯಾಬೊರೇಟರಿ (ಜೆಪಿಎಲ್) ಬೇಸಿಗೆ ಸಂಶೋಧನಾ ಫೆಲೋಶಿಪ್ ಕಾರ್ಯಕ್ರಮದಲ್ಲೂ ಭಾಗವಹಿಸಿದ್ದಾನೆ ಎಂಬ ಮಾಹಿತಿ ಇದೆ. ಇದಲ್ಲದೆ, ಅಲೆನ್ ವಿಡಿಯೋ ಗೇಮ್ ಡೆವಲಪರ್ ಆಗಿಯೂ ಕೆಲಸ ಮಾಡಿದ್ದಾನೆ ಎಂದು ಹೇಳಲಾಗಿದ್ದು, ಯುದ್ಧ ಹಾಗೂ ಆಕ್ಷನ್ ಗೇಮ್‌ಗಳ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದ್ದನೆಂದು ವರದಿಗಳು ತಿಳಿಸಿವೆ.

2024ರಲ್ಲಿ ಡೆಮೊಕ್ರಟಿಕ್ ಪಕ್ಷದ ನಾಯಕಿ ಕಮಲಾ ಹ್ಯಾರಿಸ್ ಅವರಿಗೆ 25 ಡಾಲರ್ ದೇಣಿಗೆಯನ್ನೂ ನೀಡಿದ್ದಾನೆ ಎಂಬುದೂ ಮಾಹಿತಿ ಲಭ್ಯವಾಗಿದೆ.ಘಟನೆ ನಡೆದ ದಿನ, ವಾಷಿಂಗ್ಟನ್ ಡಿ.ಸಿ.ಯ ಹಿಲ್ಟನ್ ಹೋಟೆಲ್‌ನಲ್ಲಿ ಸುಮಾರು 2,500 ಮಂದಿ ಗಣ್ಯರು ಹಾಜರಿದ್ದರು. ಟ್ರಂಪ್, ಅವರ ಪತ್ನಿ ಮೆಲಾನಿಯಾ ಟ್ರಂಪ್ ಹಾಗೂ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪೊಲೀಸ್ ಮಾಹಿತಿ ಪ್ರಕಾರ, ಅಲೆನ್ ಭದ್ರತಾ ತಪಾಸಣೆ ದಾಟಿ ಬಾಲ್‌ರೂಮ್ ಒಳಗೆ ನುಗ್ಗಲು ಯತ್ನಿಸಿದಾಗ ಭದ್ರತಾ ಸಿಬ್ಬಂದಿ ಅವನನ್ನು ತಕ್ಷಣ ವಶಕ್ಕೆ ಪಡೆದಿದ್ದಾರೆ. ಆತನನ್ನು ಹಿಡಿದ ನಂತರ ಶಸ್ತ್ರಾಸ್ತ್ರಗಳ ಪರಿಶೀಲನೆ ನಡೆಸಲಾಗಿದ್ದು, ಶಾಟ್‌ಗನ್, ಹ್ಯಾಂಡ್‌ಗನ್ ಹಾಗೂ ಹಲವು ಚಾಕುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಾಷಿಂಗ್ಟನ್ ಡಿ.ಸಿ. ಪೊಲೀಸ್ ಮುಖ್ಯಸ್ಥ ಜೆಫ್ರಿ ಕ್ಯಾರೋಲ್ ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಅವನನ್ನು ತಡೆಯಲು ಯತ್ನಿಸಿದಾಗ ಅಲೆನ್ ಗುಂಡಿನ ದಾಳಿ ನಡೆಸಿದ್ದಾನೆ ಎಂಬ ಆರೋಪವೂ ಇದೆ. ಆದರೆ ಭದ್ರತಾ ಸಿಬ್ಬಂದಿ ಬುಲೆಟ್‌ಪ್ರೂಫ್ ಜಾಕೆಟ್ ಧರಿಸಿದ್ದರಿಂದ ಯಾವುದೇ ಗಾಯಗಳಾಗಿಲ್ಲ ಎಂದು ಯುಎಸ್ ಅಟಾರ್ನಿ ಜೀನೈನ್ ಪಿರೊ ತಿಳಿಸಿದ್ದಾರೆ.


**ವರ್ಷದಲ್ಲಿ ಮೂರನೇ ಬಾರಿ ಟ್ರಂಪ್ ಹತ್ಯೆಗೆ ಸಂಚು:** ಟ್ರಂಪ್ ಮೇಲೆ ಹತ್ಯೆ ಯತ್ನ ಇದೇ ಮೊದಲಲ್ಲ, ಇದು ಟ್ರಂಪ್ ಮೇಲೆ ಒಂದು ವರ್ಷದ ಅವಧಿಯಲ್ಲಿ ನಡೆದಂತಹ ಮೂರನೇ ಹತ್ಯೆ ಯತ್ನವಾಗಿದ್ದು, ಟ್ರಂಪ್ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಇದಕ್ಕೂ ಮೊದಲು 2024ರ ಜುಲೈ 13ರಂದು ಟ್ರಂಪ್ ಹತ್ಯೆಗೆ ಯತ್ನ ನಡೆದಿತ್ತು. ಪೆನ್ಸಿಲ್ವೇನಿಯಾದ ಬಟ್ಲರ್ ಬಳಿ ನಡೆದ ಸಮಾವೇಶದಲ್ಲಿ ಮಾತನಾಡುತ್ತಿದ್ದಾಗ ಥಾಮಸ್ ಕ್ರೂಕ್ಸ್ ಎಂಬಾತ AR-15-ಶೈಲಿಯ ರೈಫಲ್‌ನಿಂದ ಟ್ರಂಪ್ ಮೇಲೆ ಎಂಟು ಸುತ್ತಿನ ಗುಂಡಿನ ದಾಳಿ ನಡೆಸಿದ ಈ ದಾಳಿಯಲ್ಲಿಯೂ ಟ್ರಂಪ್ ಕೂದಲೆಳೆ ಅಂತರದಲ್ಲಿ ಪಾರಾಗಿದ್ದರು. ಟ್ರಂಪ್ ಬಲಕಿವಿಯ ಪಕ್ಕದಲ್ಲಿ ಗುಂಡು ಹಾದು ಹೋಗಿ ಅವರು ಕಿವಿಗೆ ತುಸು ಗಾಯವಾಗಿತ್ತು. ನಂತರ ನೆಲಕ್ಕೆ ಬಿದ್ದ ಅವರನ್ನು ಅಮೆರಿಕಾದ ಸೀಕ್ರೇಟ್ ಸರ್ವೀಸ್ ಏಜೆಂಟ್‌ಗಳು ರಕ್ಷಿಸಿದ್ದರು.ಇದಾದ ನಂತರ 2024 ರ ಸೆಪ್ಟೆಂಬರ್ 15ರಂದು ಕೂಡ ಟ್ರಂಪ್ ಹತ್ಯೆ ಯತ್ನ ನಡೆದಿತ್ತು. ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಇಂಟರ್ನ್ಯಾಷನಲ್ ಗಾಲ್ಫ್ ಕ್ಲಬ್‌ನಲ್ಲಿ ಟ್ರಂಪ್ ಗಾಲ್ಫ್ ಆಡುತ್ತಿದ್ದಾಗ ಗುಂಡಿನ ದಾಳಿ ನಡೆಸಿ ಅವರನ್ನು ಸಾಯಿಸುವ ಯತ್ನ ನಡೆದಿತ್ತು. ರಯಾನ್ ರೌತ್ ಎಂಬಾತ ಈ ದಾಳಿ ನಡೆಸಿದ್ದ ಆದರೆ ಈ ದಾಳಿಯಲ್ಲೂ ಟ್ರಂಪ್ ಯಾವುದೇ ಹಾನಿ ಇಲ್ಲದೇ ಪಾರಾಗಿದ್ದರು. ಇದರ ನಡುವೆ ಇರಾನ್ ಕೂಡ ಟ್ರಂಪ್ ಹತ್ಯೆಗೆ ಸಂಚು ನಡೆಸಿದೆ ಎಂದು ಅಮೆರಿಕಾದ ಎಫ್‌ಬಿಐ ಆರೋಪಿಸಿದೆ.

**ಶಂಕಿತನ ಫೋಟೋ ಬಿಡುಗಡೆ ಮಾಡಿದ ಟ್ರಂಪ್:** ದಾಳಿಯ ನಂತರ ಅಲ್ಲಿ ಸೇರಿದ ಅತಿಥಿಗಳು ಗುಂಡಿನ ದಾಳಿಯಿಂದ ಭಯಗೊಂಡು ಮೇಜಿನ ಕೆಳಗೆ ಅಡಗಿಕೊಂಡರೆ ಇತ್ತ ರಹಸ್ಯ ಭದ್ರತಾ ಸಿಬ್ಬಂದಿಗಳು ಟ್ರಂಪ್ ಅವರನ್ನು ಗುಂಡಿನ ದಾಳಿ ನಡೆಯುತ್ತಿದ್ದಂತೆ ವೇದಿಕೆಯಿಂದ ಇಳಿಸಿ ಬೇರೆಡೆ ಕರೆದೊಯ್ದು ರಕ್ಷಿಸಿವೆ.ಶ್ವೇತ ಭವನದಲ್ಲಿ ಗುಂಡಿನ ದಾಳಿ ನಡೆಸಿದ ಶಂಕಿತ ಶೂಟರ್‌ನ ಫೋಟೋ ಈಗ ಬಿಡುಗಡೆ ಆಗಿದ್ದು, ವಾಷಿಂಗ್ಟನ್ ಹಿಲ್ಟನ್‌ನ ಮೆಟ್ಟಿಲುಗಳ ಬಳಿ ಕಾನೂನು ಜಾರಿ ಸಂಸ್ಥೆಗಳು ಆತನನ್ನು ಬಂಧಿಸಿರುವುದನ್ನು ತೋರಿಸುತ್ತಿವೆ. ಸ್ವತಃ ಡೊನಾಲ್ಡ್ ಟ್ರಂಪ್, ಸಾಮಾಜಿಕ ಮಾಧ್ಯಮ ವೇದಿಕೆ ಟ್ರೂತ್ ಸೋಶಿಯಲ್‌ನಲ್ಲಿ ಶಂಕಿತ ಶೂಟರ್‌ನ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲಿ ಶಂಕಿತ ಶರ್ಟ್ ಇಲ್ಲದೆ ನೆಲಕ್ಕೆ ಮುಖ ಮಾಡಿ ಬಿದ್ದಿರುವುದು ಹಾಗೂ ಆತನ ಎರಡೂ ಕೈಗಳನ್ನು ಬೆನ್ನಿನ ಹಿಂದೆ ಕಟ್ಟಿರುವುದನ್ನು ಕಾಣಬಹುದು.

### ಯುದ್ಧಕ್ಕೂ ಗುಂಡಿನ ದಾಳಿಗೂ ಸಂಬಂಧ ಗೊತ್ತಿಲ್ಲ

ಗುಂಡಿನ ದಾಳಿಗೂ ಇರಾನ್ ಯುದ್ಧಕ್ಕೂ ಸಂಬಂಧ ಇದೆಯೇ ಎಂಬುದು ನನಗೆ ತಿಳಿದಿಲ್ಲ. ಪ್ರಾಥಮಿಕ ಮಾಹಿತಿ ಆಧಾರದಲ್ಲಿ ಅಂತಹ ಸಾಧ್ಯತೆ ಕಡಿಮೆ ಎಂದು ಟ್ರಂಪ್ ಹೇಳಿದ್ದಾರೆ.ಈ ದಾಳಿಯ ಮೂಲಕ ನಮ್ಮನ್ನು ಎದೆಗುಂದಿಸಲು ಸಾಧ್ಯವಿಲ್ಲ. ಇರಾನ್ ಯುದ್ಧದಿಂದ ಹಿಂಜರಿಯುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಬಂದೂಕುಧಾರಿ ಶಸ್ತ್ರಾಸ್ತ್ರ ಹೊಂದಿದ್ದ ದಾಳಿಕೋರನ ಹಿಂದಿನ ಉದ್ದೇಶದ ಕುರಿತು ತನಿಖೆ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

### ಹಿಂಸಾಚಾರಕ್ಕೆ ಸ್ಥಾನವಿಲ್ಲ: ಮೋದಿ



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲ್ಗೊಂಡಿದ್ದ ಔತಣಕೂಟದಲ್ಲಿ ಗುಂಡಿನ ದಾಳಿ ನಡೆದಿರುವುದನ್ನು ಖಂಡಿಸಿರುವ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ ಎಂದಿದ್ದಾರೆ.ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿಯವರು ವಾಷಿಂಗ್ಟನ್ ಡಿಸಿ ಹೋಟೆಲ್‌ನಲ್ಲಿ ನಡೆದ ಭದ್ರತಾ ಲೋಪದ ಘಟನೆಯ ನಂತರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪತ್ನಿ ಮೆಲಾನಿಯಾ, ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಸುರಕ್ಷಿತವಾಗಿದ್ದಾರೆ ಎಂದು ತಿಳಿದು ನಿರಾಳವಾಗಿದ್ದೇನೆ. ಅವರ ಸುರಕ್ಷತೆ ಹಾಗೂ ಯೋಗಕ್ಷೇಮಕ್ಕಾಗಿ ನಾನು ಹಾರೈಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಹಿಂಸಾಚಾರಕ್ಕೆ ಸ್ಥಾನವಿಲ್ಲ. ಮತ್ತು ಅದನ್ನು ಸ್ಪಷ್ಟವಾಗಿ ಖಂಡಿಸಬೇಕು ಎಂದು ಮೋದಿ ಹೇಳಿದ್ದಾರೆ.ಶಂಕಿತ ದಾಳಿಕೋರರನ್ನು ಬಂಧಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ. ಟ್ರಂಪ್ ಅವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತೇ ಎಂಬುದು ತನಿಖೆಯ ಬಳಿಕವಷ್ಟೇ ತಿಳಿದು ಬರಲಿದೆ ಎಂದು ಅವರು ಹೇಳಿದ್ದಾರೆ.

1. ಶ್ವೇತಭವನದಲ್ಲಿ ಗುಂಡಿನ ದಾಳಿ ಖಂಡಿಸಿದ ಡೊನಾಲ್ಡ್ ಟ್ರಂಪ್.
2. ಇರಾನ್ ಯದ್ಧ ವಿರೋಧಿಸಿ ಶ್ವೇತಭವನದಲ್ಲಿ ಗುಂಡಿನ ದಾಳಿ
3. ಇರಾನ್ ಯುದ್ಧಕ್ಕೂ ಶ್ವೇತಬವನ ದಾಳಿಗೂ ಸಂಬಂಧಿವಿಲ್ಲ ಎಂದ ಡೊನಾಲ್ಡ್ ಟ್ರಂಪ್

### ಇಸ್ಲಾಮಾಬಾದ್‌ಗೆ ನಿಯೋಗ ಕಳುಹಿಸದ ಟ್ರಂಪ್

ಇನ್ನು ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯಬೇಕಿದ್ದ ಅಮೆರಿಕ-ಇರಾನ್ ಮಾತುಕತೆ 2.0 ಬ್ರೇಕಪ್ ಆಗಿದೆ. ಪಾಕಿಸ್ತಾನದ ಅಧಿಕಾರಿಗಳೊಂದಿಗೆ ಮಾತನಾಡಿದ ಬಳಿಕ, ಇಸ್ಲಾಮಾಬಾದ್‌ಗೆ ಬರಬೇಕಿದ್ದ ಅಮೆರಿಕ ನಿಯೋಗವನ್ನು ಭೇಟಿ ಮಾಡದೇ, ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘ್ಚಿ ಅವರು ಟೆಹ್ರಾನ್ ಮರಳಿದರು. ಈ ವಿಷಯ ತಿಳಿದ ಡೊನಾಲ್ಡ್ ಟ್ರಂಪ್, ಇಸ್ಲಾಮಾಬಾದ್ ಪ್ರವಾಸ ಕೈಗೊಳ್ಳದಂತೆ ತಮ್ಮ ನಿಯೋಗಕ್ಕೆ ಸೂಚನೆ ನೀಡಿದ್ದಾರೆ.



# ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ತಡ ಆಗುತ್ತಿರುವುದೇಕೆ?

• ಉದಯವಾಹಿನಿ, ತುಮಕೂರು

ಕರ್ನಾಟಕದಲ್ಲಿ ತಾಲ್ಲೂಕು, ಜಿಲ್ಲಾ ಪಂಚಾಯಿತಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆ ತಡ ಆಗುತ್ತಿರುವುದಕ್ಕೆ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅಚ್ಚರಿಯ ಕಾರಣ ಕೊಟ್ಟಿದ್ದಾರೆ. ಮಾತ್ರವಲ್ಲದೇ, ಸರ್ಕಾರ ಚುನಾವಣಾ ಆಯೋಗಕ್ಕೆ ಹಣ ಬಿಡುಗಡೆ ಮಾಡಿಲ್ಲ. ಹೀಗಾಗಿ, ಸದ್ಯಕ್ಕೆ ಚುನಾವಣೆ ನಡೆಯಲ್ಲ ಎಂದಿದ್ದಾರೆ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸೊರವನಹಳ್ಳಿ ಮತ್ತು ಕುಣಿಗಲ್ ತಾಲ್ಲೂಕಿನ ಮಾದಪ್ಪನಹಳ್ಳಿ ಗ್ರಾಮಗಳಲ್ಲಿ ನೂತನ ದೇವಾಲಯಗಳ ಲೋಕಾರ್ಪಣೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಸಚಿವರು ಮಾತನಾಡಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಿದೆ ಎಂದು ಪುನರುಚ್ಚರಿಸಿದ ಕೇಂದ್ರ ಸಚಿವರು, ಗ್ರೇಟರ್ ಬೆಂಗಳೂರು ಎಲೆಕ್ಷನ್ ಮಾಡುವುದಕ್ಕೂ ಈ ಸರ್ಕಾರಕ್ಕೆ ಹಣವಿಲ್ಲ ಎಂದು ನೇರ ಆರೋಪ ಮಾಡಿದ್ದಾರೆ.

ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಯನ್ನು ಜೂನ್ 30ರ ಬದಲು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಜಾತಿಗಣತಿ ಮತ್ತು ಮತದಾರರ ಪಟ್ಟಿಯ ತಿದ್ದುಪಡಿ ಕಾರ್ಯಗಳಲ್ಲಿ ಸಿಬ್ಬಂದಿ ನಿರತರಾಗಿರುವುದು ಹಾಗೂ ಹಣಕಾಸಿನ ಕೊರತೆ ಇದಕ್ಕೆ ಕಾರಣವಾಗಿದ್ದು, ಆಯೋಗವು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದೆ. ಅಲ್ಲಿಗೆ ರಾಜ್ಯ ಸರ್ಕಾರ ಆರ್ಥಿಕವಾಗಿ ದುರ್ಭರ ಸ್ಥಿತಿಯಲ್ಲಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

**ಪಂಚಾಯಿತಿ ಚುನಾವಣೆ ಸದ್ಯಕ್ಕೆ ನಡೆಯಲ್ಲ:** ರಾಜ್ಯ ಕಾಂಗ್ರೆಸ್ ಸರ್ಕಾರ ಜನರಿಗೆ ಉಚಿತ ಗ್ಯಾರಂಟಿಗಳನ್ನು ನೀಡಿದೆ ಸರಿ, ಆದರೆ ಈ ಗ್ಯಾರಂಟಿಗಳಿಂದ ಖಜಾನೆಯನ್ನು ಖಾಲಿ ಮಾಡಿದೆ. ಈಗಾಗಲೇ ರಾಜ್ಯದ ಒಟ್ಟು 7,26,000 ಲಕ್ಷ ಕೋಟಿ ಮೀರಿದೆ. ಪ್ರತಿ ಕನ್ನಡಿಗನ ಮೇಲೆಯೂ ತಲಾ ಒಂದು ಲಕ್ಷ ರೂಪಾಯಿ ಸಾಲವಿದೆ. ಈ ಸಾಲವನ್ನು ತೀರಿಸುವುದು ಹೇಗೆ? ಇಂತಹ ಸರ್ಕಾರಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದು ಸಾಧ್ಯ ಆಗುತ್ತದೆಯೇ? ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗಳು ನಡೆಯುವುದಿಲ್ಲ. ಗ್ರೇಟರ್ ಬೆಂಗಳೂರು ಎಲೆಕ್ಷನ್ ಕೂಡ ಆಗುವುದಿಲ್ಲ. ಕರ್ನಾಟಕ ರಾಜ್ಯ ಚುನಾವಣಾ ಆಯೋಗವೇ ನ್ಯಾಯಾಲಯಕ್ಕೆ ಈ ಸರ್ಕಾರ ಹಣ ಕೊಡುತ್ತಿಲ್ಲ ಎಂದು ಹೇಳಿದೆ. ಇದಕ್ಕಿಂತ ದುಸ್ಥಿತಿ ಇನ್ನೇನಿದೆ ಎಂದು ಸಚಿವರು ಹೇಳಿದರು.

ಬೆಂಕಿ ರೀತಿಯ ಬೇಸಿಗೆಯನ್ನು ನೋಡುತ್ತಿದ್ದೇವೆ. ಉಷ್ಣಗಾಳಿಗೆ ಜನರು ತತ್ತರಿಸುತ್ತಿದ್ದಾರೆ. ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಜನರ ನೆರವಿಗೆ ಧಾವಿಸುವುದು ಇರಲಿ, ಅವರ ಬಗ್ಗೆ ಕನಿಕರದ ಮಾತನ್ನು ಕೂಡ ಆಡುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

### ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದ್ದಾರೆ

ರಾಜ್ಯದ ಜನರು ಒಂದು ಕಡೆ ಕುಡಿಯುವ ನೀರಿನ ಸಮಸ್ಯೆಗೆ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ಅಕಾಲಿಕ ಮಳೆಯಿಂದ ಭಾರೀ ಬೆಳೆ ನಷ್ಟಕ್ಕೆ ತುತ್ತಾಗಿದ್ದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.



# ಒಳಮೀಸಲಾತಿ ಬಗ್ಗೆ ಅಲೆಮಾರಿಗಳು ಆತಂಕಪಡಬೇಕಾಗಿಲ್ಲ: ಸಚಿವ ಭರವಸೆ

## ಶೇ.4.5 ರಲ್ಲಿ ಪ್ರತಿಶತ 20 ರಷ್ಟು ಮೀಸಲಾತಿಯನ್ನು ಅಲೆಮಾರಿಗಳಿಗೆ ಮೀಸಲಿಡಲಾಗುವುದು

• ಉದಯವಾಹಿನಿ, ಬೆಂಗಳೂರು

ಒಳಮೀಸಲಾತಿ ಬಗ್ಗೆ ಅಲೆಮಾರಿಗಳು ಆತಂಕಪಡುವ ಅಗತ್ಯತೆ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು. ಹಾವೇರಿಯಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣಗೊಳಿಸಿ ಮಾತನಾಡಿದ ಅವರು, ಶೇ. 4.5 ಮೀಸಲಾತಿಯಲ್ಲಿ ಅಲೆಮಾರಿಗಳಿಗೆ ಪ್ರತ್ಯೇಕವಾಗಿ ಮೀಸಲಾತಿ ಇದೆ ಎಂದು ತಿಳಿಸಿದರು.

**ಕೇಂದ್ರದ ಜನಗಣತಿ ಆರಂಭ**

ಶೇ.4.5 ರಲ್ಲಿ ಪ್ರತಿಶತ 20 ರಷ್ಟು ಮೀಸಲಾತಿ ಅಲೆಮಾರಿಗಳಿಗೆ ಮೀಸಲಿಡಲಾಗಿದೆ. ಜನಗಣತಿ ಇನ್ನೂ ಮುಕ್ತಾಯವಾಗಿಲ್ಲ. ಕೇಂದ್ರದ ಜನಗಣತಿ ಆರಂಭವಾಗಿದೆ. ರಾಜ್ಯ ಸರ್ಕಾರ ಜಾತಿಜನಗಣತಿ ಇನ್ನೂ ಮುಗಿದಿಲ್ಲ. ರಾಜ್ಯದಲ್ಲಿನ ಜಾತಿಗಣತಿ ಪೂರ್ಣಪ್ರಮಾಣದಲ್ಲಿ ಮಾಡಲಾಗಿಲ್ಲ. ಇದಕ್ಕೆ ಸಮಯ ಬೇಕಾಗಬಹುದು ಎಂದರು.

ಬಿಜೆಪಿ ಸರ್ಕಾರವಿದ್ದಾಗ ಐದು ಜಾತಿಗಳಿಗೆ ಮಾತ್ರ ಮೀಸಲಾತಿ ನೀಡಿದ್ದರು. ನೀವು 63 ಜಾತಿಗಳಿಗೆ ಮೀಸಲಾತಿ ನೀಡಿದ್ದೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನೀವು ಹೇಳುವುದು ನೋಡಿದರೇ ಅದಕ್ಕೆ ಒಂದು ಸಮಿತಿ ರಚಿಸಬೇಕಾಗುತ್ತದೆಯೋ ಏನು ಎಂದು ಹಾಸ್ಯಚಟಾಕಿ ಹಾರಿಸಿದರು. ನಮಗೆ ಈ ಕುರಿತಂತೆ ಗೊಂದಲವಿದೆ, ಅದನ್ನು ಸರಿಯಾಗಿ ನೋಡುತ್ತೇವೆ ಎಂದು ಹೇಳಿದರು.

ಮೇ 4ರ ನಂತರ ರಾಜ್ಯ ರಾಜಕಾರಣ ಬದಲಾವಣೆ ಕುರಿತಂತೆ ಮಾತನಾಡಿದ ಅವರು, ಈ ಕುರಿತಂತೆ ಈಗಾಗಲೇ ಪ್ರತಿಕ್ರಿಯೆ ನೀಡಿದ್ದೇನೆ. ಸಿಎಂ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ಬೇರೆಯವರು ಹೇಳಿದ್ದಾರೆ ಎಂದರು. ಇದೇ ವೇಳೆ ಮಾತನಾಡಿದ ಮಾಜಿ ಸಚಿವ ರಾಜುಗೌಡ ಮಾತನಾಡಿ, ಒಳಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ದಲಿತರಿಗೆ ಅನ್ಯಾಯ ಮಾಡುತ್ತಿದೆ. ಕಾಂಗ್ರೆಸ್‌ನವರು ಅಹಿಂದ ಸರ್ಕಾರ ಅಂತಾರೆ. ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕಾಂಗ್ರೆಸ್ ವೋಟ್ ಬ್ಯಾಂಕ್ ಹೆಸರಲ್ಲಿ ದಲಿತರಿಗೆ ಮೋಸ ಮಾಡುತ್ತಾರೆ ಎಂದು ಆರೋಪಿಸಿದರು. ದಲಿತರು ಅರ್ಜಿ ಕೊಡುತ್ತಾ ಇರಬೇಕು ಎಂಬುದು ಕಾಂಗ್ರೆಸ್‌ನವರ ಮನೋಭಾವ. ಸಮಾಜ ಯಾವ ಪಕ್ಷ, ನಾಯಕರನ್ನು ನಂಬಿಕೊಂಡು ಇರಬಾರದು. ಎಲ್ಲರೂ ಸ್ವಯಂ ಪ್ರೇರಿತವಾಗಿ ಹೋರಾಟ ಮಾಡಿದರೆ ನ್ಯಾಯ ಸಿಗಲು ಸಾಧ್ಯ. ನಾವು ನಾಯಕರು, ನಮ್ಮ ರಾಜಕೀಯ ಲಾಭಕ್ಕೆ ಹೋರಾಟ ಮಾಡುತ್ತಿರುತ್ತೇವೆ ಎಂದರು.

ಜಾತಿ ಗಣತಿ ಮಂಡನೆ ವಿಚಾರ ಕುರಿತಂತೆ ಮಾತನಾಡಿದ ಅವರು, ಮೀಸಲಾತಿ ಹೆಚ್ಚಳಕ್ಕೆ ಹೋರಾಟ ಮಾಡಿದ ನಾವೆಲ್ಲರೂ ಸೋತೆವು. ನಮ್ಮ ಸಮಾಜಕ್ಕೆ ದೊಡ್ಡ ಅನ್ಯಾಯ ಆಗಿದೆ, ಪಕ್ಷದ ಬದಲಾಗಿ, ಸಮಾಜದ ಜನರು ಸ್ವಯಂಪ್ರೇರಿತ ಹೋರಾಟಕ್ಕೆ ಮುಂದಾಗಬೇಕು ಎಂದು ಅವರು ಕರೆ ನೀಡಿದರು.



### ಸಮಾಜಕ್ಕೆ ಸರ್ಕಾರದ ಮೇಲೆ ಭರವಸೆ ಇಲ್ಲದಾಗಿದೆ

ಸರ್ಕಾರದ ಬಗ್ಗೆ ಸಮಾಜದ ಜನರಿಗೆ ಬೇಸರವಿದೆ, ಅದಕ್ಕಾಗಿ ಇಲ್ಲಿ ಸಮಾಜದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿಲ್ಲ. ಮೇ 9 ರಂದು ಚಿತ್ರದುರ್ಗದಲ್ಲಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅಭಿನಂದನಾ ಸಮಾವೇಶ ಆಯೋಜಿಸಿದ್ದೇವೆ. ದಾವಣಗೆರೆಯಲ್ಲಿ ನಡೆದ ಸಿದ್ದರಾಮೋತ್ಸವ ಬೇರೆ, ಯಡಿಯೂರಪ್ಪ ಕಾರ್ಯಕ್ರಮ ಬೇರೆ. ಸಿದ್ದರಾಮಯ್ಯನವರು ಅಧಿಕಾರಕ್ಕೆ ಬರಲು ಮಾಡಿದ್ದು ಸಿದ್ದರಾಮೋತ್ಸವ. ನಾವು ಯಡಿಯೂರಪ್ಪ ಐದು ದಶಕ ರಾಜಕೀಯ ಜೀವನ ಕಳೆದಿರುವದಕ್ಕೆ ಮಾಡುತ್ತಿದ್ದೇವೆ. ಯಡಿಯೂರಪ್ಪ ಅಭಿನಂದನಾ ಸಮಾವೇಶ ಯಾರ ಶಕ್ತಿ ಪ್ರದರ್ಶನವಲ್ಲ ಎಂದು ಸ್ಪಷ್ಟಪಡಿಸಿದರು.

**ಈ ದಿನದ ದರ** ಪೆಟ್ರೋಲ್: 103.33 ₹/L ಡೀಸೆಲ್ : 91.47 ₹/L ಬಂಗಾರ: ₹15,404/Gram24ct ₹14,120/Gram22ct ಬೆಳ್ಳಿ: ₹260.00/Gram

## ಕೆಂಪೇಗೌಡ ವಿಮಾನ ನಿಲ್ದಾಣ; 18.48 ಕೋಟಿ ಗಾಂಜಾ ಜಪ್ತಿ: ಏಳು ಮಂದಿ ಸೆರೆ

• **ಉದಯವಾಹಿನಿ, ದೇವನಹಳ್ಳಿ**

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ಮತ್ತು ಶುಕ್ರವಾರ ನಡೆದ ಕಸ್ಟಮ್ಸ್ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ 51.06 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆದಿದ್ದಾರೆ. ಐದು ಪ್ರತ್ಯೇಕ ಪ್ರಕರಣಗಳಲ್ಲಿ ಏಳು ಪ್ರಯಾಣಿಕರನ್ನು ಬಂಧಿಸಿ.ಮಾದಕ ವಸ್ತುಗಳ ನಿಯಂತ್ರಣ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ. ನಡೆದ ತಪಾಸಣೆಯಲ್ಲಿ ಒಟ್ಟು ನಾಲ್ಕು ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಬ್ಯಾಂಕಾಂಗ್‌ನಿಂದ ಬಂದ ಪ್ರಯಾಣಿಕರ ಬಳಿ 24.83 ಕೆ.ಜಿ ತೂಕದ 8.67 ಕೋಟಿ ಮೌಲ್ಯದ ಗಾಂಜಾವನ್ನು ಜಪ್ತಿ ಮಾಡಲಾಗಿದೆ.

ಶುಕ್ರವಾರ ನಡೆದ ಕಾರ್ಯಾಚರಣೆಯಲ್ಲಿ ಬ್ಯಾಂಕಾಕ್‌ನಿಂದ ಬಂದ ಮೂವರು ಪ್ರಯಾಣಿಕರಿಂದ 9.81 ಕೋಟಿ ಮೌಲ್ಯದ 26.23 ಕೆ.ಜಿ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆಯಲಾಗಿದೆ.

## ಟರ್ಮಿನಲ್-2ರಲ್ಲಿ ಬೆಂಗಳೂರಿನ ಆತ್ಮ ಶಿಲ್ಪ ಲೋಕಾರ್ಪಣೆ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನ ಸಂಸ್ಕೃತಿ ಮತ್ತು ಸೃಜನಶೀಲತೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 'ಬೆಂಗಳೂರಿನ ಆತ್ಮ' ಹೆಸರಿನ ಸುಂದರ ಹಾಗೂ ಬೃಹತ್ ಕಲಾತ್ಮಕ ಶಿಲ್ಪವನ್ನು ಲೋಕಾರ್ಪಣೆಗೊಳಿಸಲಾಯಿತು. ಬಯೋಕಾನ್ ಫೌಂಡೇಷನ್ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಸಹಯೋಗದಲ್ಲಿ ಟರ್ಮಿನಲ್-2ರ ಮುಂಭಾಗದಲ್ಲಿ ಈ ಕಲಾಕೃತಿಯನ್ನು ಸ್ಥಾಪಿಸಲಾಗಿದೆ. ಸ್ಪೇನ್‌ನ ಕಲಾವಿದ ಜೊಮೆ ಪ್ಲೆನ್ಸಾ ಅವರ ಕಲ್ಪನೆಯಲ್ಲಿ ಈ ಶಿಲ್ಪವು ಮೂಡಿ ಬಂದಿದ್ದು, ಪ್ರಯಾಣಿಕರ ಗಮನ ಸೆಳೆಯುತ್ತಿದೆ. ಭಾರತದಲ್ಲಿನ ಸ್ಪೇನ್ ರಾಯಭಾರಿ ಜುವಾನ್ ಅಂಟೋನಿಯೊ ಮಾರ್ಚ್ ಪೂಜೋಲ್ ಅವರು ಈ ಕಲಾಕೃತಿಯನ್ನು ಲೋಕಾರ್ಪಣೆಗೊಳಿಸಿದರು.

**ಕಲಾಕೃತಿಯ ವಿಶೇಷ:** ಬಣ್ಣ ಬಳಿದಿರುವ ಸ್ಟೇನ್‌ಲೆಸ್ ಸ್ಟೀಲ್ ಲೋಹದಿಂದ ಈ ಕಲಾಕೃತಿಯನ್ನು ನಿರ್ಮಿಸಿದ್ದು, ಬೆಂಗಳೂರು ನಗರವು ಸಂಸ್ಕೃತಿ, ನಾವೀನ್ಯತೆ, ಸೃಜನಶೀಲತೆಯ ಸಂಗಮವಾಗಿದೆ ಎಂಬುದನ್ನು ಈ ಕಲಾಕೃತಿ ಪ್ರತಿಬಿಂಬಿಸುತ್ತದೆ.

## ಹೆನ್ನಾಗರದಲ್ಲಿ ದೀಪಾರತಿ ಮೇ 1ಕ್ಕೆ

• **ಉದಯವಾಹಿನಿ, ಜಿಗಣಿ**

ಹೆನ್ನಾಗರದ ಯಲ್ಲಮ್ಮ ದೇವಿ ದೇವಾಲಯದಲ್ಲಿ ಮೇ 1ರಂದು ದೀಪಾರತಿ ನಡೆಯಲಿದ್ದು, 10ಕ್ಕೂ ಗ್ರಾಮಗಳ ಭಕ್ತರು ಒಂದೆಡೆ ಸೇರಿ ದೇವಾಲಯದಲ್ಲಿ ದೀಪಾರತಿ ಬೆಳಗಲಿದ್ದಾರೆ ಎಂದು ದೇವಾಲಯದ ಪ್ರಚಾರ ಸಮಿತಿ ಮುಖ್ಯಸ್ಥರಾದ ಆರ್.ಕೆ.ಕೇಶವರೆಡ್ಡಿ ತಿಳಿಸಿದರು. ಅಂದು ಬೆಳಗ್ಗೆ 10.30ರಿಂದ ಸಂಜೆ 7ರವರೆಗೂ ದೀಪಾರತಿ ಬೆಳಗಲು ಅವಕಾಶ ಕಲ್ಪಿಸಲಾಗಿದೆ. ಜ್ಯೋತಿಲಿಂಗ ಸ್ವಾಮಿ, ಮೈಲಾರ ಲಿಂಸ್ವಾಮಿ, ಯಲ್ಲಮ್ಮ ದೇವಿ ದೇವಾಲಯದಲ್ಲಿ ದೀಪಾರತಿ ಕಾರ್ಯಕ್ರಮ ನಡೆಯಲಿದೆ. ನೂರಾರು ಸಂಖ್ಯೆಯಲ್ಲಿ ಮಹಿಳೆಯರು ದೀಪಾರತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಹೆನ್ನಾಗರ ಗ್ರಾಮದ ಯಲ್ಲಮ್ಮ ದೇವಿಗೆ ಆರಾಧನೆ ಮಾಡುವ ಹೆನ್ನಾಗರ, ಯಾಡಂಹಳ್ಳಿ, ಎಚ್.ಹೊಸಹಳ್ಳಿ, ಕಾಚನಾಯಕನಹಳ್ಳಿ, ಚಂದಾಪುರ, ಬನಹಳ್ಳಿ, ಶ್ರೀರಾಂಪುರ, ಬೆಳ್ಳಂದೂರು, ಅಗರ, ಹಾರಗದ್ದೆ ಗ್ರಾಮಗಳ ಭಕ್ತರು ಭಾಗಿಯಾಗಲಿದ್ದಾರೆ ಎಂದು ಪ್ರಚಾರ ಸಮಿತಿಯ ಮುನಿರಾಜು ತಿಳಿಸಿದ್ದಾರೆ.

## ಜಮೀನು ಮಾರಿದರೆ ನನ್ನ ತಂಗಿನಾ ಎಲ್ಲಿಗೆ ಕರೆದೊಯ್ಯಲಿ?

• **ಉದಯವಾಹಿನಿ, ದೊಡ್ಡಬಳ್ಳಾಪುರ**

ನಾವು ಜಮೀನು ಕೊಟ್ಟರೆ ನಾವು ಎಲ್ಲಿಗೆ ಹೋಗೋಣ. ನನ್ನ ತಂಗಿಯನ್ನ ಎಲ್ಲಿಗೆ ಕರೆದುಕೊಂಡು ಹೋಗಲಿ. ನಾವು ಹಸು ಎಲ್ಲಿ ಮೇಯಿಸೋಣ, ಹಾಲು ಎಲ್ಲಿಂದ ಬರುತ್ತದೆ. ನಿಮ್ಮ ದುಡ್ಡು ಬೇಡ, ನಮ್ಮ ಜಮೀನು ನಾವೇ ಮಡಗಿಕೊಳ್ಳುತ್ತೇವೆ. ಕೆಐಎಡಿಬಿ ಸ್ವಾಧೀನಕ್ಕೆ ಉದ್ದೇಶಿಸಿರುವ ಜಮೀನವೊಂದರ ಕುಟುಂಬದ ಪುಟ್ಟ ಬಾಲಕಿಯ ಮಾತುಗಳಿವು. ನಮ್ಮ ಭೂಮಿ ಯಾರಿಗೂ ಕೊಡುವುದು ಬೇಡ ಎಂದು ತನ್ನ ಅಜ್ಜನ ಎದುರು ಇಂಪನ ಎಂಬ ಪುಟ್ಟ ಬಾಲೆ ಹೇಳುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ತಾಲ್ಲೂಕಿನ ದೊಡ್ಡಬೆಳವಂಗಲ ಸುತ್ತಮುತ್ತ ಕೆಐಎಡಿಬಿ ವತಿಯಿಂದ ನಡೆಯುತ್ತಿರುವ 2,100 ಎಕರೆ ಭೂಸ್ವಾಧೀನ ವಿರೋಧಿಸಿ 15 ದಿನಗಳಿಂದ ನಾಡ ಕಚೇರಿ ಮುಂದೆ ರೈತರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

**ಮನೆ ಮನೆಗೆ ಹೋರಾಟದ ಕಿಚ್ಚು:** ಕೆಐಎಡಿಬಿ ಭೂಸ್ವಾಧೀನ ಪಡಿಸಿಕೊಳ್ಳುತ್ತಿರುವ ದೊಡ್ಡಬೆಳವಂಗಲ, ಚಿಕ್ಕಬೆಳವಂಗಲ, ರಾಂಪುರ, ಸೊಣ್ಣೇನಹಳ್ಳಿ, ನಾರನಹಳ್ಳಿ ಗ್ರಾಮಗಳು ಸೇರಿದಂತೆ ಈ ಭಾಗದ ಇತರೆ ಗ್ರಾಮಗಳಿಗೂ ಹೋರಾಟದ ಮಹತ್ವವನ್ನು ಮುಟ್ಟಿಸುವ ಸಲುವಾಗಿ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿಯಿಂದ ಮನೆ ಮನೆಗೂ ಕರಪತ್ರ ಹಂಚುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಧರಣಿಯಲ್ಲಿ ಭಾಗವಹಿಸುವಂತೆ ಪ್ರಚಾರ ನಡೆಸಲಾಗುತ್ತಿದೆ. ಮನೆ ಮನೆಗೂ ಕರಪತ್ರ ಹಂಚುವ ಅಭಿಯಾನ ಆರಂಭವಾಗಿರುವುದರಿಂದ ಧರಣಿ ಸತ್ಯಾಗ್ರಹಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು, ರೈತ ಮಹಿಳೆಯರು ಭಾಗವಹಿಸುತ್ತಿದ್ದಾರೆ. ಭೂಸ್ವಾಧೀನ ಕೈಬಿಡುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ಹೋರಾಟ ಸಮಿತಿಯ ಪ್ರಭು ಬೆಳವಂಗಲ ತಿಳಿಸಿದ್ದಾರೆ.

## ಬೆಂಗಳೂರು ನಗರವನ್ನು ಮತ್ತಷ್ಟು ಹಸಿರಾಗಿಸುವ ಉದ್ದೇಶ: 15 ಲಕ್ಷ ಸಸಿ ನೆಡುವ ಗುರಿ

• **ಉದಯವಾಹಿನಿ, ಬೆಂಗಳೂರು**

ನಗರವನ್ನು ಮತ್ತಷ್ಟು ಹಸಿರಾಗಿಸುವ ಉದ್ದೇಶದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 15 ಲಕ್ಷ ಸಸಿಗಳನ್ನು ನೆಡುವ ಮಹತ್ವದ ಯೋಜನೆಯನ್ನು ರೂಪಿಸಿದೆ. ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ನೇತೃತ್ವದಲ್ಲಿ ಜೂನ್ 5 ರಂದು ಈ ಯೋಜನೆ ಕಾರ್ಯರೂಪಕ್ಕೆ ಬರಲಿದ್ದು, ನಗರದ ವಿವಿಧ ಸ್ಥಳಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಸಿಗಳನ್ನು ನೆಡಲಾಗುತ್ತದೆ. ತಾಪಮಾನದ ಒತ್ತಡ ತಗ್ಗಿಸಲು, ಸೂಕ್ಷ್ಮ ಹವಾಮಾನ ಮತ್ತು ನಗರದ ಜೀವನ ಗುಣಮಟ್ಟ ಸುಧಾರಿಸುವ ಕಾರ್ಯತಂತ್ರದ ಭಾಗವಾಗಿ ಈ ಯೋಜನೆಯನ್ನು ರೂಪಿಸಿದ್ದು ಗಿನ್ನಿಸ್ ದಾಖಲೆ ನಿರ್ಮಿಸಲು ಬಿಡಿಎ ಉದ್ದೇಶಿಸಿದೆ.

ಸಿಎಸ್‌ಆರ್ ನಿಧಿಯ ಮೂಲಕ ಹದಿನೈದು ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಕಾಲಮಿತಿಯಲ್ಲಿ ಸರ್ಕಾರಿ ಸಂಸ್ಥೆಗಳು, ನಾಗರಿಕ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸ್ವಯಂ ಸೇವಕರು ಮತ್ತು ನಾಗರಿಕರನ್ನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ದೀರ್ಘಕಾಲೀನ ಪರಿಸರ ಸಂರಕ್ಷಣೆಯಲ್ಲಿ ಪಾಲುದಾರಿಕೆಯನ್ನು ಈ ಯೋಜನೆ ಉತ್ತೇಜಿಸುತ್ತದೆ. ಯೋಜನೆ ಕುರಿತು ಮಾತನಾಡಿದ ಅಧ್ಯಕ್ಷ ಎನ್.ಎ. ಹ್ಯಾರಿಸ್, ನಗರವನ್ನು ಹಸಿರಾಗಿಸುವ ಉದ್ದೇಶ ಇದೆ. ಸ್ಥಳೀಯ ಪ್ರಭೇದಗಳಿಗೆ ಆದ್ಯತೆ ನೀಡುವುದರ ಜೊತೆಗೆ ಸಮುದಾಯವನ್ನು ಭಾಗವಹಿಸುವಂತೆ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಹಸಿರು ನಗರ ನಿರ್ಮಿಸಲಾಗುವುದು. ಸಾರ್ವಜನಿಕರ ಭಾಗವಹಿಸುವಿಕೆಯ ಮೂಲಕ ಸಾಧಿಸಲಾಗುವ ಈ ಕಾರ್ಯಕ್ರಮವು ನಗರದ ಪರಿಸರ ಮತ್ತು ಜೀವನದ ಗುಣಮಟ್ಟ ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಸಸಿ ನೆಡುವಿಕೆಯ ಸ್ಥಳಗಳು, ಪಾಲುದಾರಿಕೆಯ ವಿಧಾನ ಮತ್ತು ಭಾಗವಹಿಸುವಿಕೆಯ ಅವಕಾಶಗಳ ಕುರಿತ ವಿವರಗಳನ್ನು ಮುಂಬರುವ ದಿನಗಳಲ್ಲಿ ಹಂಚಿಕೊಳ್ಳಲಾಗುವುದು. ಹಸಿರು ಮತ್ತು ಆರೋಗ್ಯಕರ ನಗರದತ್ತ ಸಾಗಲು ರೂಪಿಸಿರುವ ಈ ಚಳವಳಿಯಲ್ಲಿ ಸಾರ್ವಜನಿಕರು, ಸಂಘ-ಸಂಸ್ಥೆಗಳು, ಪಾಲುದಾರರು ಪಾಲ್ಗೊಳ್ಳಬಹುದು ಎಂದರು.

# ಡಿ ಸುಧಾಕರ್ ಅನಾರೋಗ್ಯ: ಹೆಬ್ಬೆಟ್ಟು ಒತ್ತಿಸಿಕೊಳ್ಳಲು ವಿಷಯ ಮುಚ್ಚಿಡಲಾಗಿದೆಯೇ?

• **ಉದಯವಾಹಿನಿ, ಬೆಂಗಳೂರು**

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಚಿವ ಸುಧಾಕರ್ ಅವರ ಆರೋಗ್ಯದ ಬಗ್ಗೆ ರಾಜ್ಯ ಸರ್ಕಾರ ಸರಿಯಾದ ಮಾಹಿತಿ ನೀಡಬೇಕು ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಒತ್ತಾಯಿಸಿದ್ದಾರೆ. ಮಾತ್ರವಲ್ಲದೇ, ಅವರಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಎಲ್ಲಾ ವಿಷಯಗಳನ್ನು ಮುಚ್ಚಿಡಲಾಗಿದೆಯೇ? ಎಂದು ಗಂಭೀರ ಪ್ರಶ್ನೆ ಮಾಡಿದ್ದಾರೆ.

ಮಂಡಿ ನೋವಿನ ಶಸ್ತ್ರಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿದ್ದ ಸಚಿವ ಡಿ ಸುಧಾಕರ್ ಅವರಿಗೆ ಶ್ವಾಸಕೋಶ ಸೋಂಕು ಕಾಣಿಸಿಕೊಂಡು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಸಚಿವರು, ಸಚಿವ ಸುಧಾಕರ್ ಸಾವು ಬದುಕಿನ ಬಗ್ಗೆ ಹೋರಾಟ ಮಾಡುತ್ತಿದ್ದಾರೆ ಎಂದು ಇವರು ಹೇಳುತ್ತಿದ್ದಾರೆ. ಆದರೆ, ಜನರೇ ಬೇರೆ ಮಾತನಾಡುತ್ತಿದ್ದಾರೆ. ಹಿರಿಯೂರು ಅಥವಾ ಬೇರೆ ಕ್ಷೇತ್ರದ ಬಗ್ಗೆ ಮಾತಾಡಲ್ಲ. ಆದರೆ, ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಆ ವ್ಯಕ್ತಿ ಎಷ್ಟು ನೋವು ಅನುಭವಿಸುತ್ತಿದ್ದಾರೆ, ಯಾವ ಕಾರಣಕ್ಕೆ ಕೆಲ ವಿಷಯಗಳನ್ನು ಮುಚ್ಚಿಟ್ಟಿದ್ದಾರೆ? ಅವರಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಎಲ್ಲಾ ವಿಷಯಗಳನ್ನು ಮುಚ್ಚಿಡಲಾಗಿದೆಯೇ? ಎಂಬುದರ ಬಗ್ಗೆ ರಾಜ್ಯ ಸರ್ಕಾರ ಹೇಳಬೇಕಾಗುತ್ತದೆ ಎಂದು ಅವರು ಹೇಳಿದರು. ನಾನು ಹಲವಾರು ಸಂದರ್ಭಗಳಲ್ಲಿ ನೋಡಿದ್ದೇನೆ. ಯಾವ ಕಾರಣಕ್ಕೆ ಎಲ್ಲವನ್ನು ಮುಚ್ಚಿಡುತ್ತಿದ್ದಾರೆ ಎಂಬುದನ್ನು ಜನತೆಗೆ ಹೇಳುವ ಜವಾಬ್ದಾರಿ ಸರ್ಕಾರದ್ದು. ಇಂಥ ವಿಚಾರಗಳಲ್ಲಿ ನಾನು ಚರ್ಚೆ ಮಾಡಲ್ಲ. ಆದರೆ, ಕೆಲ ವ್ಯಕ್ತಿಗಳು ಇಂಥ ಸಮಯ ದುರ್ಬಳಕೆ ಮಾಡಿಕೊಳ್ಳುವಲ್ಲಿ ಎಕ್ಸ್‌ಪರ್ಟ್ ಗಳಿದ್ದಾರೆ ಎಂದು ಕುಮಾರಸ್ವಾಮಿ ಅವರು ಮಾರ್ಮಿಕವಾಗಿ ಹೇಳಿದರು.



**ಯಾವ ಮುಖ ಇಟ್ಟುಕೊಂಡು ಅಹಿಂದ ಸಮಾವೇಶ?:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಏನೆಲ್ಲಾ ನಡೆಯಿತು ಎಂಬುದನ್ನು ನೋಡಿದ್ದೇವೆ. ಒಂದು ನಿರ್ದಿಷ್ಟ ಸಮುದಾಯವನ್ನು ಕಾಂಗ್ರೆಸ್ ಯಾವ ರೀತಿ ಅಪಮಾನಿಸಿ ಶಂಕಿಸಿ ನೋಡಿತು ಎಂಬುದನ್ನು ಕೂಡ ಕಂಡಿದ್ದೇವೆ. ವಾಸ್ತವ ಸ್ಥಿತಿ ಈಗಿರುವಾಗ ಯಾವ ಮುಖ ಇಟ್ಟುಕೊಂಡು ಕಾಂಗ್ರೆಸ್ ಪಕ್ಷವು ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ಮಾಡುತ್ತದೆ ಎಂದು ಪ್ರಶ್ನಿಸಿದರು. ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ ಮಾಡಲು ಹೊರಟಿದ್ದಾರೆ. ನಮ್ಮ ಭಿಕ್ಷೆಯಿಂದ ಕಾಂಗ್ರೆಸ್‌ಗೆ ಅಧಿಕಾರ ಸಿಕ್ಕಿದೆ ಎಂದು ಅಹಿಂದ ವರ್ಗದ ಜನ ಹೇಳುತ್ತಿದ್ದಾರೆ. ಆಮೇಲೆ, ದಾವಣಗೆರೆಯಲ್ಲಿ ಅದೇ ಅಹಿಂದ ವರ್ಗವನ್ನು ಕಾಂಗ್ರೆಸ್ ಅಪಮಾನಕರವಾಗಿ ನಡೆಸಿಕೊಂಡಿದೆ. ದಿನವೂ ಮಾಧ್ಯಮಗಳಲ್ಲಿ ಅದುವೇ ಸುದ್ದಿ ಆಗುತ್ತಿದೆ. ಈ ಪರಿಸ್ಥಿಯಲ್ಲಿ ಅಹಿಂದ ಸಮಾವೇಶ ಮಾಡುತ್ತಿದ್ದಾರೆ. ದುಡ್ಡು ಖರ್ಚು ಮಾಡಿ ಜನ ಸೇರಿಸುತ್ತಾರೆ ಎಂದು ಕೇಂದ್ರ ಸಚಿವರು ಟೀಕಾಪ್ರಹಾರ ನಡೆಸಿದರು.

**ಜಿಬಿಎ ಚುನಾವಣೆಗೆ ಹಣವಿಲ್ಲ:** ಜಿಬಿಎ ಚುನಾವಣೆಗೆ ಹಣವಿಲ್ಲ, ಸಿಬ್ಬಂದಿತಯೂ ಇಲ್ಲ ಎಂದು ಚುನಾವಣೆ ಆಯೋಗ ಕೋರ್ಟ್‌ಗೆ ತಿಳಿಸಿದೆ. ರಾಜ್ಯ ಸರ್ಕಾರವೇ ಚುನಾವಣೆ ಕಮಿಷನ್ ಮೂಲಕ ನ್ಯಾಯಾಲಯಕ್ಕೆ ತಿಳಿಸಿದೆ. ಕಾಂಗ್ರೆಸ್ ಸರ್ಕಾರ ಬೆನ್ನು ತೋರಿಸಿ ಓಡಿಹೋಗುತ್ತಿದೆ ಎಂದು ಕುಮಾರಸ್ವಾಮಿ ಅವರು ಕಿಡಿಕಾರಿದರು. ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಶುಭ ಕೋರಿದ ಕೇಂದ್ರ ಸಚಿವರು; ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು.

# ನಾಯಕತ್ವಕ್ಕೆ ಡಿಕೆ ಶಿವಕುಮಾರ್ ಬಿಗಿಪಟ್ಟು

## ನಿರ್ಧಾರ ಹೇಳಲು ಮೇ.10ರ ಗಡುವು ಕೊಟ್ಟ ಡಿಕೆ ಬ್ರದರ್ಸ್, ಮಾಸಾಂತ್ಯಕ್ಕೆ ಮಹತ್ವದ ಸಭೆ


• **ಉದಯವಾಹಿನಿ, ಬೆಂಗಳೂರು**

ಪವರ್ ಶೇರಿಂಗ್ ಗೌಪ್ಯತೆಯನ್ನು ಬಹಿರಂಗಪಡಿಸಿ, ತಮ್ಮ ನಾಯಕತ್ವ ಅವಕಾಶದ ಸರದಿ ಬಗ್ಗೆ ಹೈಕಮಾಂಡ್ ನಾಯಕರ ಸ್ಪಷ್ಟ ತೀರ್ಮಾನಕ್ಕಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ಪಟ್ಟು ಹಿಡಿದಿದ್ದಾರೆ. ಮತ್ತೊಂದೆಡೆ ಮೇ 20ಕ್ಕೆ ಮೂರು ವರ್ಷಗಳ ಅಧಿಕಾರಾವಧಿ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟ ಪುನಾರಚನೆಗೆ ಅನುಮತಿ ಕೇಳುವ ಮೂಲಕ ತಮ್ಮ ನಾಯಕತ್ವ ಅಭಾದಿತ ಎಂಬ ಸಂದೇಶ ನೀಡಲು ಸಿಎಂ ಸಿದ್ದರಾಮಯ್ಯ ಅವರು ಪ್ರಯತ್ನ ನಡೆಸಿದ್ದಾರೆ.

ಇದರೊಂದಿಗೆ ಪಂಚರಾಜ್ಯಗಳ ಚುನಾವಣೆ ಫಲಿತಾಂಶದ ಬೆನ್ನಿಗೇ ಮೇ ಮೊದಲ ವಾರದಲ್ಲಿ ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ. ಎರಡೂವರೆ ವರ್ಷಗಳ ಬಳಿಕ ತಮ್ಮ 'ನಾಯಕತ್ವ ಸರದಿ' ನಿರೀಕ್ಷೆಯಲ್ಲಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, 6 ತಿಂಗಳ 'ಗ್ರೇಸ್ ಪೀರಿಯಡ್' ಮುಗಿದ ಬಳಿಕ ನೇರವಾಗಿ ಅಖಾಡಕ್ಕೆ ಇಳಿದಿದ್ದಾರೆ. ಮೂರು ದಿನಗಳಿಂದ ಎಐಸಿಸಿ ಅಂಗಳದಲ್ಲಿ ಮೊಕ್ಕಾಂ ಹೂಡಿರುವ ಅವರು, ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮೇ 10 ರೊಳಗೆ ಎಲ್ಲವೂ ಖುಲ್ಲಂಖುಲ್ಲಾ ಆಗಬೇಕು ಎಂದು ಪಟ್ಟುಹಿಡಿದಿದ್ದಾರೆ. ಹಾಗಾಗಿ ಬಹುಚರ್ಚಿತ ಪವರ್ ಶೇರಿಂಗ್ ವಿಚಾರದಲ್ಲಿ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ಈ ಮಾಸಾಂತ್ಯಕ್ಕೆ ಮಹತ್ವದ ಸಭೆಯನ್ನು ನಿರೀಕ್ಷಿತವಾಗಿದ್ದು, ಆಡಳಿತ ಪಕ್ಷದೊಳಗಿನ 'ಪವರ್ ಗೇಮ್ ಪಾಲಿಟಿಕ್ಸ್' ನಿರ್ಣಾಯಕ ಘಟ್ಟ ತಲುಪುತ್ತಿದೆ.

ಬಜೆಟ್ ಅಧಿವೇಶನ, ವಿಧಾನಸಭೆ ಉಪ ಚುನಾವಣೆ, ಪಂಚ ರಾಜ್ಯಗಳ ಚುನಾವಣೆ ಎಲ್ಲವೂ ಮುಗಿಯುತ್ತಿದ್ದು, ರಾಜ್ಯದಲ್ಲಿ ದೀರ್ಘಾವಧಿ ಅಧಿಕಾರ ನಡೆಸಿದ ದೇವರಾಜ ಅರಸು ದಾಖಲೆಯನ್ನೂ ಸಿಎಂ ಸಿದ್ದರಾಮಯ್ಯ ಅವರು ಮುರಿದಿದ್ದಾಯಿತು. ಬಾಕಿ ಉಳಿದ ಎರಡು ವರ್ಷಗಳ ಅವಧಿಗೆ ತಮ್ಮ ಅವಕಾಶದ ಘೋಷಣೆ ಆಗಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬೇಡಿಕೆ ಮಂಡಿಸಿದ್ದಾರೆ. ಗುರುವಾರ ದಿಲ್ಲಿ ತಲುಪಿದ ದಿನವೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ತಮ್ಮ ಹಕ್ಕೊತ್ತಾಯ ಮಂಡಿಸಿದ ಡಿ.ಕೆ. ಶಿವಕುಮಾರ್ ಅವರು, ಶುಕ್ರವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದಿಲ್ಲಿ ನಿವಾಸದಲ್ಲಿ ಭೇಟಿಯಾಗಿ ಸುಮಾರು ಒಂದೂವರೆ ತಾಸು ಕಾಲ ಸಮಾಲೋಚನೆ ನಡೆಸಿದ್ದಾರೆ. ಈ ಭೇಟಿಯ ಫಲಶ್ರುತಿ ಎಂಬಂತೆ ಮಾಸಾಂತ್ಯಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರನ್ನೂ ದಿಲ್ಲಿಗೆ ಕರೆಸಿಕೊಂಡು ರಾಹುಲ್ ಗಾಂಧಿ ಸಭೆ ನಡೆಸಿ ತೀರ್ಮಾನ ಹೇಳುವ ಸಾಧ್ಯತೆಗಳಿವೆ.

- ಪಂಚರಾಜ್ಯಗಳ ಚುನಾವಣೆ ಫಲಿತಾಂಶದ ಬೆನ್ನಿಗೇ ಮೇ ಮೊದಲ ವಾರದಲ್ಲಿ ರಾಜ್ಯದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಯನ್ನು ನಿರೀಕ್ಷಿಸಲಾಗಿದೆ.
- ಮೂರು ದಿನಗಳಿಂದ ಎಐಸಿಸಿ ಅಂಗಳದಲ್ಲಿ ಮೊಕ್ಕಾಂ ಹೂಡಿರುವ ಅವರು, ಅಧಿಕಾರ ಹಸ್ತಾಂತರ ವಿಚಾರದಲ್ಲಿ ಮೇ 10 ರೊಳಗೆ ಎಲ್ಲವೂ ಖುಲ್ಲಂಖುಲ್ಲಾ ಆಗಬೇಕು ಎಂದು ಪಟ್ಟುಹಿಡಿದಿದ್ದಾರೆ
- ಬಾಕಿ ಉಳಿದ ಎರಡು ವರ್ಷಗಳ ಅವಧಿಗೆ ತಮ್ಮ ಅವಕಾಶದ ಘೋಷಣೆ ಆಗಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಬೇಡಿಕೆ ಮಂಡಿಸಿದ್ದಾರೆ.



**ನೇರಾನೇರ ಹಕ್ಕು ಮಂಡಿಸಿದ ಡಿಕೆ ಬ್ರದರ್ಸ್:** ಸಹೋದರ ಡಿ.ಕೆ. ಸುರೇಶ್ ಜತೆಗಿಟ್ಟುಕೊಂಡು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಎದುರು ಡಿಸಿಎಂ ಡಿ.ಕೆ.ಶಿವಕುಮಾರ್ ನಾಯಕತ್ವಕ್ಕಾಗಿ ನೇರಾನೇರ ಹಕ್ಕು ಮಂಡಿಸಿದ್ದಾರೆ. ಎರಡೂವರೆ ವರ್ಷಗಳ ನಂತರದ 6 ತಿಂಗಳು ಸಹನೆಯಿಂದ ಕಾಲ ದೂಡಿದ ನಮ್ಮ ತಾಳ್ಮೆಯನ್ನು ಮತ್ತೂ ಪರೀಕ್ಷಿಸುವುದು ಬೇಡ ಸರಕಾರ ರಚನೆ ವೇಳೆಯ ಒಪ್ಪಂದವನ್ನು ಬಹಿರಂಗ ಮಾಡಿ, ಪವರ್ ಶೇರಿಂಗ್ ವಿಚಾರದಲ್ಲಿ ತೀರ್ಮಾನ ಹೇಳಿ ಎಂದು ಡಿ.ಕೆ ಸಹೋದರರು ಬಿಗಿಪಟ್ಟು ಹಾಕಿದ್ದಾರೆ. ಇದಕ್ಕೆ ಎಐಸಿಸಿ ನಾಯಕರಿಂದ ಸಿಕ್ಕಿರುವ ಸ್ಪಂದನೆಯು 'ಪವರ್ ಶೇರಿಂಗ್' ಗುಟ್ಟು ಬಹಿರಂಗಕ್ಕೆ ಮುಹೂರ್ತ ಫಿಕ್ಸ್ ಆಗುವ ಸಾಧ್ಯತೆಗಳಿವೆ. ಹಾಗೆಯೇ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಸರಕಾರದ ಸ್ವರೂಪ ಹೇಗಿರಲಿದೆ? ಯಥಾಸ್ಥಿತಿಯೋ ಅಥವಾ ಬೇರೆ ಸೂತ್ರವೋ ಎಂಬ ಚರ್ಚೆ ನಡೆಯಲಿದೆ ಎಂದು ಹೇಳಲಾಗುತ್ತಿದೆ.

### ಹೌದು, ಇಲ್ಲ, ಖಡಕ್ ತೀರ್ಮಾನಕ್ಕೆ ಡಿಕೆ ಸೋದರರ ಪಟ್ಟು

**ಏ. 29ರ 2ನೇ ಹಂತದ ಚುನಾವಣೆ ಹಾಗೂ ಮೇ 4ರ ಫಲಿತಾಂಶ ಈ ಅವಧಿಯಲ್ಲಿ ರಾಹುಲ್ ಗಾಂಧಿ ಸಮ್ಮುಖದಲ್ಲಿ ಸಭೆ ನಡೆಯಬೇಕು. ಮೇ 10 ರೊಳಗೆ ನಾಯಕತ್ವ ಬದಲಾವಣೆ ವಿಚಾರದಲ್ಲಿ ಸ್ಪಷ್ಟ ತೀರ್ಮಾನ ಹೇಳಬೇಕು. ಮುಖ್ಯಮಂತ್ರಿ ಸ್ಥಾನ ಕೊಡುವ ಅಥವಾ ನಿರಾಕರಿಸುವ ಯಾವ ಆಯ್ಕೆಯಾದರೂ ಸರಿ, ತೀರ್ಮಾನ ಬೇಕು ಎಂದು ಡಿಕೆ ಸಹೋದರರು ಖರ್ಗೆ, ವೇಣು ಗೋಪಾಲ್ ಎದುರು ಸ್ವಲ್ಪ ಭಾವುಕರಾಗೇ ವಿನಂತಿಸಿದ್ದಾರೆ ಎನ್ನಲಾಗಿದೆ.**

**ಖರ್ಗೆ ಹೇಳಿದ್ದೇನು?:** ಖಾಸಗಿ ಪ್ರವಾಸದಲ್ಲಿರುವ ರಾಹುಲ್ ಗಾಂಧಿ ಮೇ 28 ರಂದು ದಿಲ್ಲಿಗೆ ವಾಪಸಾದ ಬಳಿಕ ಹಾಗೂ ಮೇ 29ಕ್ಕೆ ಕೊನೆಯ ಹಂತದ ಚುನಾವಣೆ ಮುಗಿದ ಬಳಿಕ ಮುಖ್ಯಮಂತ್ರಿ ಜತೆಗೆ ಸಭೆ ನಿಗದಿ ಮಾಡಲಾಗುವುದು. ತಾವೂ ಬನ್ನಿ. ಚರ್ಚೆ ಮಾಡಿ ತೀರ್ಮಾನ ಮಾಡೋಣ ಎಂದು ಎಐಸಿಸಿ ಅಧ್ಯಕ್ಷರು ಡಿಕೆಶಿಗೆ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

**ಪ್ರತಿತಂತ್ರವೂ ರೆಡಿ:** ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಳಗದಿಂದ ಸಂಪುಟ ಪುನಾರಚನೆ ಪ್ರಸ್ತಾಪ ಮುನ್ನೆಲೆಗೆ ಬಂದಿದೆ. ಮೇ 20ಕ್ಕೆ ಸರಕಾರಕ್ಕೆ ಮೂರು ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಸಂಪುಟ ಸರ್ಜರಿಗೆ ಸಮ್ಮತಿಸುವಂತೆ ವರಿಷ್ಠರನ್ನು ಕೋರಲು ಸಿದ್ಧತೆಯಾಗಿದೆ. ಪ್ರಭಾವಿ ಸಚಿವರೊಬ್ಬರ ಫ್ಲಾಟ್‌ನಲ್ಲಿ ಬುಧವಾರ ರಾತ್ರಿ ಸಿಎಂ ಹಾಗೂ ಆಪ್ತ ಸಚಿವರ ಡಿನ್ನರ್ ಮೀಟಿಂಗ್‌ನಲ್ಲಿ ಈ ಸಂಬಂಧ ತಯಾರಿಯೂ ಆಗಿದೆ ಎನ್ನಲಾಗಿದೆ. ಹಾಗಾಗಿ ಡಿಸಿಎಂ ಬಯಸಿರುವ ನಾಯಕತ್ವ ಬದಲಾವಣೆ ಹಾಗೂ ಸಿಎಂ ಆಪ್ತ ವಲಯದ ಸಚಿವ ಸಂಪುಟ ಪುನಾರಚನೆ ಪೈಕಿ ಯಾವುದಕ್ಕೆ ಹೈಕಮಾಂಡ್ ಮನ್ನಣೆ ಸಿಗಲಿದೆ ಎಂಬ ಕುತೂಹಲವಿದೆ.

ಡಿ.ಕೆ.ಶಿವಕುಮಾರ್, ಎರಡೂವರೆ ವರ್ಷಗಳು ಕಳೆದು ಮೂರು ವರ್ಷ ಆಗುತ್ತಿದೆ. ನಮ್ಮ ಪಕ್ಷನಿಷ್ಠೆಯನ್ನು ಇನ್ನೂ ಪರೀಕ್ಷೆ ಮಾಡುವುದಾದರೆ ಮಾಡಿ. ಇಲ್ಲವಾದರೆ, ತೀರ್ಮಾನವನ್ನು ಹೇಳಿ, ಎಂದು ಖಡಕ್ಕಾಗಿ ಹೇಳಿದ್ದಾರೆ. ಜತೆಗೆ ನಾನಂತೂ ಪಕ್ಷದ ವಿರುದ್ಧ ಹೋಗುವುದಿಲ್ಲ, ಎಂಬ ಭರವಸೆ ಕೊಟ್ಟಿದ್ದಾರೆ ಎಂದು ಹೇಳಲಾಗಿದೆ.

## ಹಕ್ಕಿ ಜ್ವರ; 22 ಗ್ರಾಮಗಳಲ್ಲಿ ನಿಗಾ ಪೂರ್ಣ: ಆರೋಗ್ಯ ಇಲಾಖೆ

• **ಉದಯವಾಹಿನಿ, ಬೆಂಗಳೂರು**

ಹೆಸರಘಟ್ಟದ ಮತ್ತೂರು ಗ್ರಾಮದ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರದಲ್ಲಿ ಹಕ್ಕಿ ಜ್ವರ ಪ್ರಕರಣ ಪತ್ತೆಯಾದ ಕಾರಣ, 22 ಗ್ರಾಮಗಳಲ್ಲಿ ಕೈಗೊಂಡಿದ್ದ ಹತ್ತು ದಿನಗಳ ನಿಗಾ ಅವಧಿ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಈ ಕೇಂದ್ರದ ಕೋಳಿಯಲ್ಲಿ ಎಚ್ 5ಎನ್1 ಸೋಂಕು ಏ.14ರಂದು ದೃಢಪಟ್ಟಿತ್ತು. ಬಳಿಕ ರಾಜ್ಯ ಮತ್ತು ಜಿಲ್ಲಾ ಕ್ಷಿಪ್ರ ಕಾರ್ಯಪಡೆ ತಂಡ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿತ್ತು. ಸೋಂಕಿತ ಪ್ರದೇಶದ 10 ಕಿ.ಮೀ. ವ್ಯಾಪ್ತಿಯೊಳಗಿನ 22 ಗ್ರಾಮಗಳಿಂದ ಒಟ್ಟು 28,172 ಜನರನ್ನು 10 ದಿನಗಳ ನಿಗಾ ವ್ಯವಸ್ಥೆಗೆ ಒಳಪಡಿಸಲಾಗಿತ್ತು. ಅನೇಕ ಸುತ್ತಿನ ನಿಗಾ ಕೈಗೊಂಡ ಬಳಿಕ, ನಿಯಮಾನುಸಾರ ಸ್ವಚ್ಛತಾ ಕ್ರಮಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಇಲಾಖೆ ಹೇಳಿದೆ. ನಿಗಾ ಅವಧಿಯಲ್ಲಿ ಮೊದಲ ಐದು ದಿನಗಳು 10 ಸಿಬ್ಬಂದಿಯ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅವರ ಮಾದರಿಯಲ್ಲಿ ಎಚ್5ಎನ್1 ಸೋಂಕು ಕಾಣಿಸಿಕೊಂಡಿಲ್ಲ. 10ನೇ ದಿನದಂದು ಮತ್ತೊಮ್ಮೆ ಗಂಟಲ ದ್ರವದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆ ಪರೀಕ್ಷೆಗಳ ವರದಿ ಬರಬೇಕಿದೆ ಎಂದು ತಿಳಿಸಿದೆ. ಸೋಂಕಿತ, ನಿಗಾ ವಲಯಗಳಲ್ಲಿ ಯಾವುದೇ ಮಾನವ ಎಚ್5ಎನ್1 ಪ್ರಕರಣ ಪತ್ತೆಯಾಗಿಲ್ಲ. ಮುಂಜಾಗ್ರತಾ ಕ್ರಮವಾಗಿ ಮುಂದಿನ 90 ದಿನಗಳ ಕಾಲ ಈ ಭಾಗದಲ್ಲಿ ಕೋಳಿ ಸಾಕಾಣಿಕೆ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಆದರೆ, ಹಕ್ಕಿ ಜ್ವರದ ಬಗ್ಗೆ ಇಲಾಖೆ ನೀಡಿರುವ ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು ಎಂದು ಹೇಳಿದೆ. ಹಕ್ಕಿ ಜ್ವರದ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಕೋಳಿ ಮಾಂಸ, ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ಸೇವಿಸಬೇಕ.

## ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜನಗಣತಿ ಕರ್ತವ್ಯಕ್ಕೆ ಅಡ್ಡಿ: ಪ್ರಕರಣ

• **ಉದಯವಾಹಿನಿ, ಬೆಂಗಳೂರು**

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಜನಗಣತಿ ವೇಳೆ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ಸಿಬ್ಬಂದಿಗೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ಅವಮಾನಿಸಿದವರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಾರ್ಡ್ ಸಂಖ್ಯೆ 43ರಲ್ಲಿ ಜನಗಣತಿ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಗಣತಿದಾರರಾದ ವೀಣಾ ಅವರು ಏಪ್ರಿಲ್ 20ರಂದು ಆರ್.ಟಿ.ನಗರದ ಸುಲ್ತಾನಪಾಳ್ಯ ಮುಖ್ಯರಸ್ತೆಯ ಸಮೀಪದಲ್ಲಿರುವ ಪೇರಿ ಮೊನಾರ್ಕ್ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದ ವೇಳೆ, ಸಂಬಂಧಿಸಿದ ನಿವಾಸಿ ಯಾವುದೇ ಮಾಹಿತಿ ನೀಡಲು ನಿರಾಕರಿಸಿದರು. ಈ ಸಂಬಂಧ, ಏಪ್ರಿಲ್ 25ರಂದು ಪರಿಶೀಲನೆ ವೇಳೆ ಸರ್ಕಲ್-2 ಮೇಲ್ವಿಚಾರಕರಾದ ರಶ್ಮಿ ಆರ್ ಅವರು ಸ್ಥಳಕ್ಕೆ ಭೇಟಿ ನೀಡಿ ಗಣತಿ ಕಾರ್ಯಕ್ಕೆ ಅಗತ್ಯ ಮಾಹಿತಿಯನ್ನು ಕೇಳಿದಾಗ, ಅಪಾರ್ಟ್‌ಮೆಂಟ್ ನಿವಾಸಿಯು ಸಹಕರಿಸಲು ನಿರಾಕರಿಸಿದ್ದು ಮಾತ್ರವಲ್ಲದೆ, ಗಣತಿ ಕಾರ್ಯಕ್ಕೆ ಅಡ್ಡಿಪಡಿಸಿ ಮಹಿಳಾ ಸಿಬ್ಬಂದಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಈ ಕುರಿತು ಸಂಬಂಧಪಟ್ಟ ವ್ಯಕ್ತಿಯ ವಿರುದ್ಧ, ಜನಗಣತಿ ಕಾಯ್ದೆ, 1948ರ ಸೆಕ್ಷನ್ 11(1), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 223, 79 ಅಡಿಯಲ್ಲಿ ಡಾ. ಲೋಕೇಶ್, ಜನಗಣತಿ ಚಾರ್ಜ್ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ ಎಂದು ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದ್ದಾರೆ.

# ಇಸ್ರೋ ವಿಜ್ಞಾನಿ ಕೆ. ರಾಧಾಕೃಷ್ಣನ್ ಪರಮ್ ಫೌಂಡೇಷನ್‌ನ ವಿಜ್ಞಾನ ವಿಸ್ಮಯಗಳ ಲೋಕ ಪಾರ್ಸೆಕ್ ವೈಟ್‌ಫೀಲ್ಡ್ ಉದ್ಘಾಟನೆ

• **ಉದಯವಾಹಿನಿ, ಬೆಂಗಳೂರು**

ಪರಮ್ ಫೌಂಡೇಷನ್ ಭಾನುವಾರ ಬೆಂಗಳೂರಿನಲ್ಲಿ 30,000 ಚದರ ಅಡಿ ವಿಸ್ತೀರ್ಣದ ಅನುಭವಪೂರ್ವಕ ವಿಜ್ಞಾನ ಮತ್ತು ಆವಿಷ್ಕಾರ ಕೇಂದ್ರ ಪಾರ್ಸೆಕ್ ವೈಟ್‌ಫೀಲ್ಡ್ ಡಾ.ಕೆ. ರಾಧಾಕೃಷ್ಣನ್ (ಇಸ್ರೋ ಮಾಜಿ ಅಧ್ಯಕ್ಷರು ಮತ್ತು ಪರಮ್ ಫೌಂಡೇಷನ್ ಸಲಹಾ ಮಂಡಳಿಯ ಅಧ್ಯಕ್ಷರು) ಮತ್ತು ಕ್ರಿಸ್ ಗೋಪಾಲಕೃಷ್ಣನ್ (ಇನ್ಫೋಸಿಸ್ ಸಹ-ಸಂಸ್ಥಾಪಕರು) ಶಿಕ್ಷಕರು, ವಿಜ್ಞಾನಿಗಳು, ಉದ್ಯಮದ ನಾಯಕರು ಮತ್ತು ಸಾರ್ವಜನಿಕರ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು. ಇದು ನಗರದ ವೃದ್ಧಿಸುತ್ತಿರುವ ವಿಜ್ಞಾನದ ಸಕ್ರಿಯತೆ ಮತ್ತು ಭವಿಷ್ಯ-ಕೇಂದ್ರಿತ ಕಲಿಕಾ ತಾಣಗಳಿಗೆ ಪ್ರಮುಖ ಸೇರ್ಪಡೆಯಾಗಿದೆ. ಅನ್ವೇಷಣೆಗೆ ''ಲಿವಿಂಗ್ ಲ್ಯಾಬ್'' ಎಂಬ ಪರಿಕಲ್ಪನೆಯಲ್ಲಿ ವಿನ್ಯಾಸಗೊಳಿಸಲಾಗಿದೆ.

ವಿಜ್ಞಾನ, ಅನ್ವೇಷಣೆ ಮತ್ತು ಆವಿಷ್ಕಾರಗಳಿಗೆ ವಿಶೇಷ ಸ್ಥಳವನ್ನು ಹೊಂದಿರುವ ಪಾರ್ಸೆಕ್ ವೈಟ್‌ಫೀಲ್ಡ್ ಹೇಗೆ ನಗರವು ವಿಜ್ಞಾನ ಮತ್ತು ಆವಿಷ್ಕಾರವನ್ನು ಸಾಂಪ್ರದಾಯಿಕ ಶೈಕ್ಷಣಿಕ ಗಡಿಗಳ ಆಚೆಗೂ ಅನುಭವಿಸುತ್ತದೆ ಎನ್ನುವುದನ್ನು ಪರಿವರ್ತಿಸುವ ನಿರೀಕ್ಷೆ ಹೊಂದಿದೆ. ಈ ಕೇಂದ್ರವು ವೈಜ್ಞಾನಿಕ ಪರಿಶೋಧನೆಯು ಎಲ್ಲಾ ವಯಸ್ಸಿನ ಶಿಕ್ಷಣಾರ್ಥಿಗಳಿಗೆ ಲಭ್ಯ ಮತ್ತು ಸಕ್ರಿಯವಾಗಿಸುವ ಧ್ಯೇಯವನ್ನು ಬಿಂಬಿಸುತ್ತದೆ.

ವಿಸ್ತಾರ ಸೌಲಭ್ಯದಲ್ಲಿ ಹರಡಿರುವ ಪಾರ್ಸೆಕ್ ವೈಟ್‌ಫೀಲ್ಡ್ ಸಂವಹನೀಯ ಗ್ಯಾಲರಿಗಳು, ಆವಿಷ್ಕಾರಕ ಮೇಕರ್‌ತಾಣಗಳು, ನೇರ ಪ್ರಾತ್ಯಕ್ಷಿಕೆ ವಲಯಗಳು ಮತ್ತು ಕುತೂಹಲ ಉಂಟು ಮಾಡಲು ವಿನ್ಯಾಸಗೊಳಿಸಲಾದ ಸಹಯೋಗದ ಪರಿಸರಗಳನ್ನು ಹೊಂದಿದೆ. ಸಂದರ್ಶಕರು ಕೃತಕ ಬುದ್ಧಿಮತ್ತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ವಿಷಯಗಳಿಂದ ಬೆಳಕು, ಆಪ್ಟಿಕ್ಸ್, ವಿದ್ಯುಚ್ಛಕ್ತಿ, ಕಾಂತೀಯತೆ,



ಉದಯವಾಹಿನಿ ಚಿತ್ರ

ರೇಖಾಗಣಿತ, ಡಿಸೈನ್ ಥಿಂಕಿಂಗ್ ಮತ್ತು ಪ್ರಾಚೀನ ಭಾರತೀಯ ವೈಜ್ಞಾನಿಕ ಜ್ಞಾನ ವ್ಯವಸ್ಥೆಗಳನ್ನು ಅನ್ವೇಷಿಸಬಹುದು.

ಪಾರ್ಸೆಕ್ ವೈಟ್‌ಫೀಲ್ಡ್ ಪ್ರಾರಂಭಿಸುವ ಮೂಲಕ ನಾವು ಬೆಂಗಳೂರನ್ನು ನಿಜಕ್ಕೂ ವಿಜ್ಞಾನ ಸಂಪರ್ಕಿತ ನಗರಿಯನ್ನಾಗಿಸುವ ಭರವಸೆಯನ್ನು ಈಡೇರಿಸುತ್ತಿದ್ದೇವೆ. ನಮ್ಮ ಗುರಿ ವಾರ್ಷಿಕ ಒಂದು ಲಕ್ಷಕ್ಕೂ ಹೆಚ್ಚು ಸಂದರ್ಶಕರನ್ನು ತೊಡಗಿಸುವ ಮೂಲಕ ಕುತೂಹಲವನ್ನು ಸಂಭ್ರಮಿಸುವ ಮತ್ತು ವೈಜ್ಞಾನಿಕ ಮನೋಭಾವವನ್ನು ಪೋಷಿಸುವ ಸಮುದಾಯ ಕೇಂದ್ರವನ್ನು ಸೃಷ್ಟಿಸುವುದು. ಇದು ನಮ್ಮ ಅತ್ಯಂತ ದೊಡ್ಡ ಸೌಲಭ್ಯವಾಗಿದ್ದು ಕುಟುಂಬಗಳು ಮತ್ತು ವಿದ್ಯಾರ್ಥಿಗಳಿಗೆ ಜೀವನಪೂರ್ತಿ ಕಲಿಕೆಗೆ ವೇಗವರ್ಧಕವಾಗಲು ವಿನ್ಯಾಗೊಳಿಸಲಾಗಿದೆ ಎಂದು ಪರಮ್ ಫೌಂಡೇಷನ್ ಎಕ್ಸಿಕ್ಯೂಟಿವ್ ಟ್ರಸ್ಟೀ ಶ್ರೀ ದೇವಾನಂದ ಆರ್. ಗದ್ದಂ ಹೇಳಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಇಸ್ರೋ ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ಅವರು ವಿಜ್ಞಾನವು ಸ್ಮರಣೆಯಲ್ಲಿರಿಸಿಕೊಳ್ಳಬೇಕಾದ ವಿಷಯವಲ್ಲ; ಇದು ಅನುಭವ ಪಡೆದುಕೊಳ್ಳಬೇಕಾದ ಜೀವನ ವಿಧಾನ. ಪಾರ್ಸೆಕ್ ವೈಟ್‌ಫೀಲ್ಡ್ ಒಂದೊಮ್ಮೆ ಉನ್ನತ ಮಟ್ಟದ ಸಂಶೋಧನಾ ಪ್ರಯೋಗಾಲಯಗಳಿಗೆ ಮೀಸಲಾದ ಪರಿಸರವನ್ನು ಒದಗಿಸುತ್ತದೆ. ಈ ಪರಿಕಲ್ಪನೆಗಳನ್ನು ಬೆಂಗಳೂರಿನ ಪ್ರತಿ ಮಗುವಿಗೂ ಲಭ್ಯವಾಗುವಂತೆ ಮಾಡುವ ಮೂಲಕ ನಾವು ಭಾರತದ ಮುಂದಿನ ತಲೆಮಾರಿನ ಬಾಹ್ಯಾಕಾಶ ಪರಿಶೋಧಕರು ಮತ್ತು ಡೀಪ್-ಟೆಕ್ ಅನ್ವೇಷಕರನ್ನು ಬೆಳೆಸಲು ಬೀಜ ಬಿತ್ತುತ್ತಿದ್ದೇವೆ ಎಂದರು.



ಉದಯವಾಹಿನಿ ಚಿತ್ರ

**ಇನ್ಫೋಸಿಸ್ ಸಹ-ಸಂಸ್ಥಾಪಕ ಮತ್ತು ಅಕ್ಸಿಲಾರ್ ವೆಂಚರ್ಸ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಹೇಳಿದ್ದು ಹೀಗೆ:** ''ಬೆಂಗಳೂರಿನ ಬಹುದೊಡ್ಡ ಸಂಪತ್ತೆಂದರೆ ಅದರ ಪ್ರತಿಭೆ, ಆದರೆ ಆ ಪ್ರತಿಭೆಗೆ ನೈಜ ವಿಶ್ವದಲ್ಲಿ ಯಶಸ್ವಿಯಾಗುವ ಮುನ್ನ ಪ್ರಯೋಗ ನಡೆಸಲು ಮತ್ತು ವಿಫಲವಾಗಲು 'ಆಟದ ಮೈದಾನ' ಅಗತ್ಯವಿದೆ. ಈ 30,000 ಚದರ ಅಡಿ ಸೌಲಭ್ಯವು ಬರೀ ವಿಜ್ಞಾನ ಕೇಂದ್ರಕ್ಕಿಂತ ಹೆಚ್ಚಿನದಾಗಿದೆ. ನಮ್ಮ ಆವಿಷ್ಕಾರದ ಅರ್ಥವ್ಯವಸ್ಥೆಗೆ ಇದು ಪ್ರಮುಖ ಮೂಲಸೌಕರ್ಯವಾಗಿದೆ. ನಾವು 'ವಿಜ್ಞಾನ ತಿಳಿಯುವುದರಿಂದ' 'ವಿಜ್ಞಾನ ಮಾಡುವುದರತ್ತ' ಚಲಿಸುತ್ತಿದ್ದೇವೆ ಮತ್ತು ಅಲ್ಲಿಯೇ ನಮ್ಮ ತಂತ್ರಜ್ಞಾನ ಉದ್ಯಮದ ಭವಿಷ್ಯ ಅಡಗಿದೆ'' ಎಂದು ಇನ್ಫೋಸಿಸ್ ಸಹ-ಸಂಸ್ಥಾಪಕ ಮತ್ತು ಅಕ್ಸಿಲಾರ್ ವೆಂಚರ್ಸ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್ ಹೇಳಿದರು.

ಬೆಂಗಳೂರಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಕೇಂದ್ರಗಳಲ್ಲಿ ಒಂದರಲ್ಲಿರುವ ಪಾರ್ಸೆಕ್ ವೈಟ್‌ಫೀಲ್ಡ್ ಅರ್ಥಪೂರ್ಣ ಕಲಿಕೆಯ ಅವಕಾಶಗಳನ್ನು ನಿರೀಕ್ಷಿಸುವ ಯಾರಿಗೇ ಆಗಲಿ ಸಂಪನ್ಮೂಲವಾಗಿ ಕೆಲಸ ಮಾಡುತ್ತದೆ. ಕಾರ್ಯಾಗಾರಗಳು, ಶಿಕ್ಷಕ ತರಬೇತಿ ಉಪಕ್ರಮಗಳು ಮತ್ತು ಆವಿಷ್ಕಾರ-ಪ್ರೇರಿತ ಚಟುವಟಿಕೆಗಳ ಮೂಲಕ ಈ ಸೌಲಭ್ಯವು ನಗರದಾದ್ಯಂತ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ವೈಜ್ಞಾನಿಕ ಮನೋಭಾವ ಉತ್ತೇಜಿಸುತ್ತದೆ.

# ಬೆಂಗಳೂರು - ಮುಂಬೈ ನಡುವೆ 1 ಅಲ್ಲ 2 ಹೊಸ ರೈಲುಗಳು ಸಂಚಾರ

## ಕರ್ನಾಟಕ ರೈಲ್ವೆ ಪ್ರಯಾಣಿಕರಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಿಹಿ ಸುದ್ದಿ, ಒಂದು ಸೂಪರ್ ಫಾಸ್ಟ್, ಇನ್ನೊಂದು ವಂದೇ ಭಾರತ್ ಸ್ಲೀಪರ್

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ರೈಲ್ವೆ ಪ್ರಯಾಣಿಕರಿಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಿಹಿ ಸುದ್ದಿ ನೀಡಿದ್ದಾರೆ. ಬೆಂಗಳೂರು - ಮುಂಬೈ ನಡುವೆ 1 ಅಲ್ಲ 2 ಹೊಸ ರೈಲುಗಳು ಶೀಘ್ರ ಸಂಚಾರ ನಡೆಸಲಿವೆ. ಒಂದು ಸೂಪರ್ ಫಾಸ್ಟ್, ಇನ್ನೊಂದು ವಂದೇ ಭಾರತ್ ಸ್ಲೀಪರ್ ಎಂದು ಸಚಿವರು ತಿಳಿಸಿದ್ದಾರೆ. ಬಿಇಎಂಎಲ್‌ನಲ್ಲಿ ನಿರ್ಮಿಸಲಾಗಿರುವ ಆದಿತ್ಯ ಹೈಸ್ಪೀಡ್ ಬುಲೆಟ್ ರೈಲು ಬಿ28 ಬೋಗಿ ಉತ್ಪಾದನಾ ಕೇಂದ್ರದ ಉದ್ಘಾಟನೆಗೆ ಬೆಂಗಳೂರಿಗೆ ಬಂದಿದ್ದ ಸಚಿವರು ಕರ್ನಾಟಕಕ್ಕೆ ಮುಂಬರುವ ದಿನಗಳಲ್ಲಿ ನೀಡುವ ಹೊಸ ರೈಲುಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಬೆಂಗಳೂರು - ಮುಂಬೈ ಮಾರ್ಗದಲ್ಲಿ 2 ಫಾಸ್ಟ್ ರೈಲುಗಳ ಕಾರ್ಯಾರಂಭ ಪ್ರಗತಿಯಲ್ಲಿದೆ.

ಒಂದು ಹುಬ್ಬಳ್ಳಿ - ಧಾರವಾಡ ಮಾರ್ಗವಾಗಿ ಸಂಚರಿಸಲಿದ್ದು, ಇದು ಸೂಪರ್‌ಫಾಸ್ಟ್ ಸೇವೆಯಾಗಿರಲಿದೆ. ಮತ್ತೊಂದು ವಂದೇ ಭಾರತ್ ಸ್ಲೀಪರ್ ರೈಲು ಸಂಚಾರವನ್ನು ಆರಂಭಿಸಲು ಸಹ ಕ್ರಮ ಕೈಗೊಳ್ಳಲಾಗಿದೆ ಎಂದರು.



ರೈಲುಗಳು ಶೀಘ್ರ ಸಂಚಾರ

**ವಂದೇ ಭಾರತ್ ಸ್ಲೀಪರ್ ಕಲಬುರಗಿ ಮಾರ್ಗ, ನಿಲ್ದಾಣಗಳು:** ವಂದೇ ಭಾರತ್ ಸ್ಲೀಪರ್ ರೈಲು ಬೆಂಗಳೂರು ಮುಂಬೈ ನಡುವೆ ಕಲಬುರಗಿ, ಸೊಲ್ಲಾಪುರ ಮಾರ್ಗವಾಗಿ ಸಂಚಾರ ನಡೆಸಲಿದೆ.

ಈ ರೈಲು ಕನಿಷ್ಠ 16 ರಿಂದ 18 ಗಂಟೆಯೊಳಗೆ ಸಂಚಾರ ನಡೆಸಲಿದೆ. ಕರ್ನಾಟಕದಲ್ಲಿ ಬೆಂಗಳೂರು, ಯಲಹಂಕ, ರಾಯಚೂರು, ಮಂತ್ರಾಲಯ ರಸ್ತೆ, ಯಾದಗಿರಿ, ಕಲಬುರಗಿಯಲ್ಲಿ ನಿಲುಗಡೆಯಾಗಲಿದೆ.

**ಬೆಂಗಳೂರು ಮುಂಬೈ ಸೂಪರ್‌ಫಾಸ್ಟ್ ಹುಬ್ಬಳ್ಳಿ ಮಾರ್ಗ, ನಿಲ್ದಾಣಗಳು:** ಬೆಂಗಳೂರು ಮುಂಬೈ ನಡುವೆ ಸೂಪರ್‌ಫಾಸ್ಟ್ ರೈಲು ಓಡಿಸಲು ರೈಲ್ವೆ ಬೋರ್ಡ್ 2025 ಡಿಸೆಂಬರ್ ಅಂತ್ಯದಲ್ಲಿ ಅನುಮೋದನೆ ನೀಡಿತ್ತು. ಆ ರೈಲು ಆರಂಭಕ್ಕೂ ಮುನ್ನವೇ ವಂದೇ ಭಾರತ್ ಸ್ಲೀಪರ್ ಕೂಡ ಘೋಷಣೆಯಾಗಿದೆ. ಹೀಗಾಗಿ, ಸೂಪರ್‌ಫಾಸ್ಟ್ ಕೈಬಿಡಲಾಗುತ್ತದೆ ಎನ್ನಲಾಗಿತ್ತು. ಆದರೆ, ಕೇಂದ್ರ ಸಚಿವರು ಖಚಿತಪಡಿಸಿದ್ದು, ಸೂಪರ್‌ಫಾಸ್ಟ್ ರೈಲು ಹುಬ್ಬಳ್ಳಿ ಮಾರ್ಗದಲ್ಲಿ ಆರಂಭಿಸಲಾಗುತ್ತದೆ ಎಂದಿದ್ದಾರೆ.

### ಶೀಘ್ರದಲ್ಲೇ ಬೆಂಗಳೂರು ಮಂಗಳೂರು ಮಡಗಾಂವ್ ವಂದೇ ಭಾರತ್

**ಬೆಂಗಳೂರಿನಿಂದ ಮಂಗಳೂರು ಮಾರ್ಗವಾಗಿ ಮಡಗಾಂವ್ ವರೆಗೆ ರೈಲು ಸೇವೆಯನ್ನು ಯೋಜಿಸಲಾಗಿದೆ. ಪ್ರಸ್ತುತ, ಹಾಸನ -ಮಂಗಳೂರು ರೈಲ್ವೆ ಮಾರ್ಗದ ವಿದ್ಯುದ್ದೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ಅತಿ ಶೀಘ್ರದಲ್ಲಿ ವಂದೇ ಭಾರತ್ ರೈಲು ಸಂಚರಿಸಲಿದೆ. ಈ ಮೂಲಕ ಕರಾವಳಿ ಪ್ರದೇಶಕ್ಕೆ ವಂದೇ ಭಾರತ್ ರೈಲು ಸೇವೆ ಲಭಿಸಲಿದೆ ಎಂದು ಸಚಿವರು ತಿಳಿಸಿದರು.**

### ಚೆನ್ನೈ ಬೆಂಗಳೂರು ನಡುವೆ ಕೇವಲ 73 ನಿಮಿಷ ಸಂಚಾರ

**ಕರ್ನಾಟಕದಲ್ಲಿ ಹೈಸ್ಪೀಡ್ ರೈಲುಗಳು ದೊಡ್ಡ ಪರಿವರ್ತನೆ ತರಲಿವೆ. ಈಗಾಗಲೇ ಘೋಷಣೆಯಾಗಿರುವ ಬೆಂಗಳೂರು - ಚೆನ್ನೈ ರೈಲು ಕೇವಲ 73 ನಿಮಿಷದಲ್ಲಿ ಎರಡು ನಗರಗಳ ನಡುವೆ ಸಂಚರಿಸಲಿದೆ ಎಂದು ಸಚಿವರು ತಿಳಿಸಿದರು.**

ಈ ರೈಲು ಸರ್‌ಎಂ ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು - ಲೋಕಮಾನ್ಯ ತಿಲಕ್ ಟರ್ಮಿನಲ್ ಮುಂಬೈ ನಡುವೆ ಸಂಚರಿಸಲಿದೆ.

ಬೆಂಗಳೂರಿನಿಂದ ಮಂಗಳವಾರ ಮತ್ತು ಶನಿವಾರ ರಾತ್ರಿ 8.30 ಕ್ಕೆ ಬೆಂಗಳೂರಿನಿಂದ ಹೊರಟು ಮರುದಿನ ರಾತ್ರಿ, 8.30 ಕ್ಕೆ ಮುಂಬೈ ತಲುಪುತ್ತದೆ. ಅಂತೆಯೇ, ಭಾನುವಾರ, ಬುಧವಾರ ರಾತ್ರಿ 10.30 ಕ್ಕೆ ಮುಂಬೈನಿಂದ ಹೊರಟು ಮರುದಿನ ರಾತ್ರಿ 11.15 ಕ್ಕೆ ಬೆಂಗಳೂರು ತಲುಪಲಿದೆ. ಮಾರ್ಗ ಮಧ್ಯೆ ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮಿರಜ್, ಸಾಂಗ್ಲಿ, ಕರಾಡ, ಸತಾರಾ, ಪುಣೆ, ಲೊನಾವಳ, ಕರ್ಜತ್, ಕಲ್ಯಾಣನಲ್ಲಿ ನಿಲುಗಡೆಯಾಗಲಿದೆ.

# ಮಹಿಳೆಯರ ಸಬಲೀಕರಣಕ್ಕೆ ಕಾಂಗ್ರೆಸ್ ಬದ್ಧ: ಕುಸುಮಾ

• ಉದಯವಾಹಿನಿ, ಮಂಡ್ಯ

ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಶಕ್ತಿ ನೀಡುತ್ತಿರುವ ಕಾಂಗ್ರೆಸ್ ಪಕ್ಷದ ವಿರುದ್ಧ ಬಿಜೆಪಿಯು ಮಹಿಳೆಯರನ್ನು ಎತ್ತಿಕೊಟ್ಟುವ ಕೆಲಸ ಮಾಡುತ್ತಿದೆ' ಎಂದು ಕಾಂಗ್ರೆಸ್ ರಾಜ್ಯ ನಾಯಕಿ ಎಚ್.ಕುಸುಮಾ ಆಕ್ರೋಶ ವ್ಯಕ್ತಪಡಿಸಿದರು. ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಸೋಲಿಗೆ ಕಾಂಗ್ರೆಸ್ ಪಕ್ಷ ಕಾರಣವೆಂದು ಬಿಜೆಪಿಯು ಸುಳ್ಳು ಹೇಳುತ್ತಿದೆ.

ಕಾಂಗ್ರೆಸ್ ಆಡಳಿತದಲ್ಲಿ ಮಹಿಳೆಯರಿಗೆ ಅನುಕೂಲಕರ ಕೊಡುಗೆ ನೀಡಿದೆ. ಲೋಕಸಭಾ ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿಗೂ ಹೆಚ್ಚಾಗಿ ಕ್ಷೇತ್ರ ವಿಂಗಡಣೆಯ ಉದ್ದೇಶ ಇಟ್ಟುಕೊಂಡಿತ್ತು ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು. 2023ರಲ್ಲೇ ಮಹಿಳಾ ಮೀಸಲಾತಿ ಬಿಲ್ ಜಾರಿಗೆ ಎಲ್ಲಾ ಪಕ್ಷಗಳೂ ಸಹಕಾರ ನೀಡಿದ್ದವು. ಆದರೆ ಎನ್‌ಡಿಎ ಸರ್ಕಾರವು 2026ರ ಜನಗಣತಿಯಾಗಿ, ಕ್ಷೇತ್ರವಾರು ವಿಂಗಡಿಸಿ ನಂತರ ಮಹಿಳಾ ಮೀಸಲಾತಿ ಜಾರಿ ಮಾಡುವುದಾಗಿ ಮುಂದೂಡಿ, ಈಗ ತರಾತುರಿಯಲ್ಲಿ ಜಾರಿಗೆ ತರುವ ಉದ್ದೇಶ ಏನಿತ್ತು ಎಂದು ಪ್ರಶ್ನಿಸಿದರು. ಮಹಿಳೆಯರ ಪರ ಕಾಳಜಿಯಿದ್ದರೆ 543 ಕ್ಷೇತ್ರಗಳಲ್ಲೇ ಮಹಿಳಾ ಮೀಸಲಾತಿ ತರಬಹುದಿತ್ತು.

ಮಹಿಳಾ ಮೀಸಲಾತಿ ಬಿಲ್ ವಿಫಲವಾಗಲಿದೆ ಎಂಬುದು ಬಿಜೆಪಿ ಮೊದಲೇ ಗೊತ್ತಿತ್ತು. ಪಶ್ಚಿಮ ಬಂಗಾಳ, ತಮಿಳುನಾಡು ಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂದು ಬಿಂಬಿಸಿ ಚುನಾವಣೆ ಗೆಲ್ಲಲು ಮಹಿಳೆಯರನ್ನ ಕಾಂಗ್ರೆಸ್ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡಿದೆ ಎಂದರು.

ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಡಿ. ಗಂಗಾಧರ, ಮಹಿಳಾ ಘಟಕದ ಅಧ್ಯಕ್ಷೆ ಶುಭದಾಯಿನಿ, ಮುಖಂಡರಾದ ಶಾರದಾ ರಮೇಶ್, ಪಲ್ಲವಿ, ಮಂಗಳಮ್ಮ ಇದ್ದರು.

# ಕಂದವಾರ ಕೆರೆ ಮೀನುಗಳ ಮಾರಣಹೋಮ

## ಸತ್ತ ಮೀನುಗಳು ಕೆರೆ ದಡದ ಸುತ್ತಲೂ ತೇಲಾಡುತ್ತಿರುವುದು ಸಾರ್ವಜನಿಕ ವಲಯದಲ್ಲಿ ಆತಂಕ

• ಉದಯವಾಹಿನಿ, ಚಿಕ್ಕಬಳ್ಳಾಪುರ


ಉದಯವಾಹಿನಿ ಚಿತ್ರ

ಎಚ್‌ಎನ್, ಕೆಸಿ ವ್ಯಾಲಿ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸಿ ಜಿಲ್ಲೆಯಲ್ಲಿನ ಕೆರೆಗಳಿಗೆ ಹರಿಸಬೇಕೆಂಬ ಹೋರಾಟಗಳು ತೀವ್ರಗೊಂಡಿರುವ ನಡುವೆಯೇ ಎಚ್‌ಎನ್ ವ್ಯಾಲಿ ನೀರು ಹರಿಯುವ ಕಂದವಾರ ಕೆರೆಯಲ್ಲಿ ಸಾವಿರಾರು ಮೀನುಗಳು ಮೃತಪಟ್ಟಿವೆ. ಸತ್ತ ಮೀನುಗಳು ಕೆರೆ ದಡದ ಸುತ್ತಲೂ ತೇಲಾಡುತ್ತಿರುವುದು ಸಾರ್ವಜನಿಕ ವಲಯದಲ್ಲಿ ಆತಂಕಕ್ಕೆ ಕಾರಣವಾಗಿದೆ. ಹಲವು ವರ್ಷಗಳ ಹಿಂದೆ ಕಂದವಾರ ಕೆರೆ, ಅಮಾನಿ ಗೋಪಾಲಕೃಷ್ಣ ಕೆರೆ ಹಾಗೂ ಮುನ್ನೂರು ಕೆರೆಗಳಲ್ಲಿ ರಾಶಿಗಟ್ಟಲೇ ಮೀನು ಸತ್ತು ದಡ ಸೇರಿದ ಮಾದರಿಯಲ್ಲೇ ಕಂದವಾರ ಕೆರೆಯಲ್ಲಿ ಸಾವಿರಾರು ಮೀನುಗಳು ಮೃತಪಟ್ಟಿರುವುದು ಅನುಮಾನಗಳಿಗೆ ಕಾರಣವಾಗಿದ್ದು, ಕೆರೆಗೆ ವಿಷ ಬೆರಿಸಲಾಗಿದೆಯೇ ಅಥವಾ ಎಚ್‌ಎನ್ ವ್ಯಾಲಿ ನೀರು ವಿಷಪೂರಿತವಾಗಿದೆಯೇ ಅಥವಾ ಮತ್ಯಾವ ಕಾರಣಗಳಿಂದ ಮೀನುಗಳು ಮೃತಪಟ್ಟಿರಬಹುದು ಎಂಬ ವಿಚಾರವು ಸ್ಥಳೀಯರನ್ನು ಚಿಂತೆಗೆ ಹಚ್ಚಿವೆ.

ಇತ್ತೀಚಿಗೆ ಘೋಷಣೆಯಾದ ಬಜೆಟ್‌ನಲ್ಲಿ ಸಂಸ್ಕರಿತ ನೀರಿನ ಮೂರನೇ ಹಂತದ ಶುದ್ಧೀಕರಣಕ್ಕೆ ಅನುದಾನ ಮೀಸಲಿಟ್ಟಿಲ್ಲ ಎಂದು ವಿವಿಧ ಸಂಘಟನೆಗಳು ಚಿಕ್ಕಬಳ್ಳಾಪುರ ಬಂದ್, ಪಾದಯಾತ್ರೆ, ಪ್ರತಿಭಟನೆಗಳನ್ನು ನಡೆಸಿದ್ದವು. ಎಚ್‌ಎನ್ ವ್ಯಾಲಿ ಸಂಸ್ಕರಿತ ನೀರು ಹರಿಯುವ ಕೆರೆಯಲ್ಲಿ ಮೀನುಗಳು ಸತ್ತಿರುವುದು ನಾಗರಿಕರಲ್ಲಿ ನೀರಿನ ಗುಣಮಟ್ಟದ ಕುರಿತು ಪ್ರಶ್ನೆಗಳು ಉದ್ಭವಿಸಿವೆ. ಕಂದವಾರ ಕೆರೆಯಲ್ಲಿ ಕಳೆದ ನಾಲ್ಕೈದು ದಿನಗಳಲ್ಲಿ ಅಪಾರ ಪ್ರಮಾಣದ ವಿವಿಧ ತಳಿಯ ಮೀನುಗಳು ಮೃತಪಟ್ಟಿದ್ದು, ಕೆರೆ ದಡಕ್ಕೆ ತೇಲಿಕೊಂಡು ಬಂದು ದುರ್ವಾಸನೆ ಬೀರುತ್ತಿದೆ. ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ದುಸ್ಥಿತಿ ಎದುರಾಗಿದೆ.

**ಮೂಗು ಮುಚ್ಚಿಕೊಂಡು ಓಡಾಡುವ ದುಸ್ಥಿತಿ**

**ಪರಿಸರವಾದಿಗಳ ಆತಂಕ:** ಎಚ್‌ಎನ್ ವ್ಯಾಲಿ ಯೋಜನೆಯಡಿ ಸಂಸ್ಕರಿತ ನೀರನ್ನು ಹರಿಸಿರುವ ಅಮಾನಿ ಗೋಪಾಲಕೃಷ್ಣ ಕೆರೆ, ಮಂಚನಬಲೆ, ಮುನ್ನೂರು, ಕಂದವಾರ ಕೆರೆಗಳು ಕಲುಷಿತ ಗೊಳ್ಳುತ್ತಿರುವುದು ಕಂಡುಬರುತ್ತಿದೆ. ಅಕಾಲಿಕ ಮಳೆ, ತಾಪಮಾನ ಹೆಚ್ಚಳದಿಂದ ಮೀನುಗಳು ಮೃತಪಡುವುದು ಸಾಮಾನ್ಯ. ಆದರೆ ಇದ್ಯಾವುದೂ ಇಲ್ಲದೆ, ಬೃಹತ್ ಪ್ರಮಾಣದಲ್ಲಿ ಮೀನು ಮೃತಪಟ್ಟಿರುವುದು ಆತಂಕಕಾರಿ ಬೆಳವಣಿಗೆ ಎಂದು ಪರಿಸರವಾದಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

**ನೀರಿನ ಗುಣಮಟ್ಟದ ಬಗ್ಗೆ ಶಂಕೆ:** ಬೆಂಗಳೂರಿನ ರಾಸಾಯನಿಕ, ತ್ಯಾಜ್ಯ ತುಂಬಿರುವ ಕೆರೆಗಳಲ್ಲಿ ಕಂಡು ಬರುವ ಹಸಿರು ಕಳೆ ಜಾತಿಯ ಸಸ್ಯ ಪ್ರಭೇದ ಕೆರೆಯಲ್ಲಿ ಬೆಳೆಯುತ್ತಿದೆ. ಅಲ್ಲದೆ ಕೆರೆಯ ಅಂಚಿನಲ್ಲಿನ ಕಳೆಯು ಸುಟ್ಟ ರೀತಿ ಕಂಡು ಬಂದಿದೆ. ಈ ಎಲ್ಲಾ ಸನ್ನಿವೇಶಗಳು ನೀರು ಕಲುಷಿತ ಆಗಿದೆ ಎಂಬುದನ್ನು ಪ್ರತಿಬಿಂಬಿಸುತ್ತಿದೆ. ಇದು ಹೀಗೆ ಮುಂದುವರೆದಲ್ಲಿ ಕೆರೆಗಳು ನೀರು ಇಂಗಿಸುವ ಸಾಮರ್ಥ್ಯ ಕಳೆದುಕೊಳ್ಳುವ ಜೊತೆಗೆ ತನ್ನ ಮೂಲ ಗುಣಲಕ್ಷಣಗಳನ್ನೇ ಕಳೆದುಕೊಳ್ಳಲಿವೆ ಎಂದು ಪರಿಸರವಾದಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ಇದರಿಂದ ಕೇವಲ ಮೀನುಗಳು ಮಾತ್ರವಲ್ಲದೆ ಮುಂಬರುವ ದಿನಗಳಲ್ಲಿ ಅಂತರ್ಜಲ ಕುಸಿತಗೊಂಡು ಪ್ರಾಣಿ, ಪಕ್ಷಿಗಳು ಮೃತಪಡುವ ಸಾಧ್ಯತೆ ಇದೆ ಎಂದು ಎಚ್ಚರಿಸಿದರು ಜಲಮೂಲಗಳಿಗೆ ಅರೆ ಸಂಸ್ಕರಿತ ನೀರು ಹರಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಅಲ್ಲದೆ, ಮೂರು ಹಂತದಲ್ಲಿ ನೀರನ್ನು ಶುದ್ಧೀಕರಿಸಿ ಜಲ ಮೂಲಗಳಿಗೆ ಹರಿಸಬೇಕೆಂಬ ನಿಯಮ ಗಾಳಿಗೆ ತೂರಿ, ಎರಡು ಹಂತದಲ್ಲಿ ಶುದ್ಧೀಕರಿಸಿ ಕೆರೆಗಳಿಗೆ ಹರಿಸುವ ಪ್ರಯೋಗವು ದುರಂತವೇ ಸರಿ ಎಂದರು.

### ವ್ಯಾಲಿ ನೀರಿನ ಮೇಲೆ ಅನುಮಾನ

ಈಗಾಗಲೇ 2 ಹಂತದಲ್ಲಿ ಸಂಸ್ಕರಿಸಿದ ಬೆಂಗಳೂರಿನ ಎಚ್.ಎನ್ ವ್ಯಾಲಿ ತ್ಯಾಜ್ಯ ನೀರನ್ನು ಜಿಲ್ಲೆಯ ಕೆರೆಗಳಿಗೆ ಹರಿಸಲಾಗುತ್ತಿದೆ. 2 ಹಂತದಲ್ಲಿ ಸಂಸ್ಕರಿಸಿದ ವ್ಯಾಲಿ ನೀರಿನಲ್ಲಿ ಹಲವು ರಾಸಾಯನಿಕ ಅಂಶಗಳು ಹಾಗೆಯೇ ಉಳಿಯಲಿದ್ದು, ಇದು ಅಂತರ್ಜಲ ಕಲುಷಿತಕ್ಕೆ ಕಾರಣವಾಗಲಿದೆ ಎಂದು ಸ್ಥಳೀಯರು ದೂರಿದ್ದಾರೆ. ಹೀಗಾಗಿ 3 ಹಂತದಲ್ಲಿ ವ್ಯಾಲಿ ನೀರನ್ನು ಸಂಸ್ಕರಿಸಿ ವೈಜ್ಞಾನಿಕ ರೀತಿಯಲ್ಲಿ ಕೆರೆಗಳಿಗೆ ಹರಿಸಬೇಕು ಎಂಬ ಒತ್ತಾಯವನ್ನು ಸರ್ಕಾರದ ಮುಂದಿಟ್ಟಿದ್ದರೂ ಸರ್ಕಾರ ಇನ್ನೂ ಎಚ್ಚೆತ್ತುಕೊಂಡಿಲ್ಲ. ಕಂದವಾರ ಸೇರಿ ಹಲವು ಕೆರೆಗಳಿಗೆ ಎಚ್.ಎನ್ ವ್ಯಾಲಿ ನೀರು ಹರಿಯುತ್ತಿದ್ದು, ಇದರಿಂದಲೇ ಮೀನುಗಳು ಮೃತಪಟ್ಟಿರಬಹುದು ಎಂದು ಸ್ಥಳೀಯರು ಆರೋಪಿಸಿದ್ದಾರೆ.

# ಮೌಲ್ಯಾಧಾರಿತ ರಾಜಕಾರಣ ಮರೆ: ಆತಂಕ

• ಉದಯವಾಹಿನಿ, ಮೈಸೂರು

ಮೌಲ್ಯಾಧಾರಿತ ರಾಜಕಾರಣ ಮರೆಯಾಗುತ್ತಿದೆ. ಹಣ, ಜಾತಿ ಚುನಾವಣೆ ಗೆಲ್ಲುವ ಅಸ್ತ್ರವಾಗುತ್ತಿದೆ ಎಂಬ ಆತಂಕ ಜನಪ್ರತಿನಿಧಿಗಳ ಮಾತುಗಳಲ್ಲಿ ಪ್ರತಿಧ್ವನಿಸಿತು. ಇಲ್ಲಿನ ಕೆಎಸ್‌ಒಯು ಕಾವೇರಿ ಸಭಾಂಗಣದಲ್ಲಿ ನಡೆದ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾಸಮ್ಮೇಳನ ಮತ್ತು ರಜತ ಮಹೋತ್ಸವದಲ್ಲಿ ಆಯೋಜಿಸಿದ್ದ ರಾಜಕಾರಣಿಗಳೊಂದಿಗೆ ವಿಶೇಷ ಅಧಿವೇಶನ'ವು ಶಾಸಕರ ಮುಕ್ತ ಮನಸ್ಸಿನ ಚರ್ಚೆಗೆ ವೇದಿಕೆ ಆಯಿತು.



ಮೀಸಲು ಕ್ಷೇತ್ರದ ರಾಜಕಾರಣ' ಕುರಿತು ಮಾತನಾಡಿದ ಕೊಳ್ಳೇಗಾಲ ಶಾಸಕ ಎ. ಆರ್.ಕೃಷ್ಣಮೂರ್ತಿ, 'ಮೀಸಲು ಸಮುದಾಯದವರೇ ಮೀಸಲು ಕ್ಷೇತ್ರದವರನ್ನು ಆಯ್ಕೆ ಮಾಡಬೇಕು ಎಂಬ ಅಂಶವನ್ನು ಅಂಬೇಡ್ಕರ್ ಮುಂದಿಟ್ಟಾಗ ವಿರೋಧ ವ್ಯಕ್ತವಾಗಿತ್ತು ಇಂದಿಗೂ ದಮನಿತ ಸಮುದಾಯದ ವಿಚಾರ ಎತ್ತಿದರೆ ವಿರೋಧಗಳೇ ಹೆಚ್ಚುತ್ತಿವೆ. ನಮ್ಮನ್ನು ಒಡೆಯುವ ನೀತಿಗಳು ರೂಪುಗೊಳ್ಳುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ನನ್ನ ತಂದೆ ರಾಚಯ್ಯ ಅವರು 16ಸಾವಿರದಲ್ಲಿ ಚುನಾವಣೆ ಮುಗಿಸುತ್ತಿದ್ದರು. 1989ರಲ್ಲಿ ನಾನು ಸ್ಪರ್ಧಿಸಿದಾದ ಲಕ್ಷ ರೂಪಾಯಿ ದಾಟಿತು. ಭಾನುವಾರ ಅಷ್ಟು ಪಂಚಾಯಿತಿ ಚುನಾವಣೆಗೂ ಸಾಲದು ಎಂದರು ಹೇಳಿದರು.

ಇಂದಿನ ರಾಜಕಾರಣ ನನ್ನನ್ನು ಪ್ರಾಮಾಣಿಕನಾಗಿ ಉಳಿಯಲು ಬಿಡುತ್ತಿಲ್ಲ. ದಿಟ್ಟತನದಿಂದ ವಿಚಾರ ಮಂಡಿಸಿದರೆ ನಮ್ಮ ಸಮುದಾಯದವರೇ ಗುಂಪು ಮಾಡಿಕೊಂಡು ಒಂದು ಮತದಿಂದ ನನ್ನನ್ನು ಸೋಲಿಸಿದರು. ಆ ಸೋಲಿನಿಂದ ಹೊರಬಂದು ಗೆಲ್ಲಲು 19 ವರ್ಷ ಬೇಕಾಯಿತು. ಇದು ಒಂದು ಉದಾಹರಣೆ ಅಷ್ಟೆ. ಸಮುದಾಯಕ್ಕೆ ಗಟ್ಟಿ ಧ್ವನಿ ಬೇಕಿದ್ದರೆ ನಾಯಕರನ್ನು ಬೆಳೆಸುವ ಕೆಲಸ ಆಗಬೇಕು ಎಂದು ನುಡಿದರು.

ಅಂಬೇಡ್ಕರ್ ಮೀಸಲಾತಿ ಕೊಟ್ಟಾಗ ಎಸ್‌ಸಿ ಪಟ್ಟಿಯಲ್ಲಿ ಕೇವಲ 6 ಜಾತಿಗಳಿದ್ದವು. ಇದೀಗ ರಾಜ್ಯದಲ್ಲಿ 101 ಜಾತಿಗಳಿವೆ. ರಾಷ್ಟ್ರಮಟ್ಟದ ಪಟ್ಟಿಯಲ್ಲಿ 200ಕ್ಕೂ ಹೆಚ್ಚು ಜಾತಿಗಳಿವೆ. ಜತೆಗೆ, ಎಲ್ಲಾ ಜಾತಿಗಳು, ಎಲ್ಲಾ ಧರ್ಮದವರಿಗೂ ಮೀಸಲಾತಿ ಸಿಗುತ್ತಿದೆ. ಇಂತಹ ಸ್ಥಿತಿ ಇರುವಾಗ ಭಾರತೀಯರೆಲ್ಲ ಒಂದು ಎಂಬ ಹೇಳಿಕೆ ವಾಸ್ತವ ಆಗಿದೆಯೇ ಎಂದು ಪ್ರಶ್ನಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಮಹಿಳಾ ರಾಜಕಾರಣ ಕುರಿತು ಮಾತನಾಡಿದರು. ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಸದಸ್ಯ ಕಾರ್ಯದರ್ಶಿ ಪ್ರೊ.ಜಯಪ್ರಕಾಶ್ ಮಾವಿನ ಕುಳಿ ಇದ್ದರು.

> ಸದನದ ಕಲಾಪಗಳ ಗುಣಮಟ್ಟ ಕೆಳ ಮಟ್ಟಕ್ಕಿಳಿದು ಪ್ರಲಾಪವಷ್ಟೇ ಆಗುತ್ತಿವೆ. ಶಾಸನ ಸಭೆಗೆ ಬರುವ ಯುವ ಶಾಸಕರಲ್ಲಿ ಕಲಾಪದಲ್ಲಿ ಭಾಗವಹಿಸಿದರೆ ನಮಗೇನು ಲಾಭ? ಅದರ ಬದಲು ನಮ್ಮ ಕ್ಷೇತ್ರದ ಮದುವೆ, ಸಾವಿನ ಮನೆಗೆ ಹೋದರೆ ಮತವಾದರೂ ಬರುತ್ತದಲ್ಲಾ ಎಂಬ ಭಾವನೆ ಇದೆ. ಚರ್ಚೆಗಳು ಅರ್ಥ ಕಳೆದುಕೊಳ್ಳುತ್ತಿವೆ.
>
> – ಎಸ್.ಸುರೇಶ್ ಕುಮಾರ್
> ಶಾಸಕ

# ಕೂದಲೆಳೆ ಅಂತರದಲ್ಲಿ ತಪ್ಪಿದ ಮೃತ್ಯು ಟಿಪ್ಪರ್ ಅಡಿ ಸಿಲುಕಿದ್ದ ದಂಪತಿ ಪಾರು

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗದಲ್ಲಿ ಟಿಪ್ಪರ್ ಲಾರಿಯೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ, ಬೈಕ್ ಸಮೇತ ಲಾರಿಯ ಚಕ್ರದಡಿ ಸಿಲುಕಿದ್ದ ದಂಪತಿಗಳು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾದ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಭಾನುವಾರ ಮಧ್ಯಾಹ್ನ ಸಂಭವಿಸಿದ್ದು ದ್ವಿಚಕ್ರ ವಾಹನ ಸವಾರರು ಬೆಚ್ಚಿಬಿದ್ದಿದ್ದಾರೆ.



ತಾಲ್ಲೂಕಿನ ಮಡಹಳ್ಳಿ ಗ್ರಾಮದ ಗಂಗಾಧರ್, ಅವರ ಪತ್ನಿ ಘಟನೆಯಲ್ಲಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ದಂಪತಿಗಳು. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ಹಾದು ಹೋಗುತ್ತಿದ್ದಾಗ, ಕೆಎ 51 ಎಜಿ 5577 ನೋಂದಣಿಯ ಟಿಪ್ಪರ್ ಲಾರಿ ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ದಂಪತಿಗಳು ಬೈಕ್ ಸಮೇತ ರಸ್ತೆಗೆ ಉರುಳಿದ್ದು, ಬೈಕ್ ಟಿಪ್ಪರ್‌ನ ಮುಂಭಾಗದ ಚಕ್ರಕ್ಕೆ ಸಿಲುಕಿದೆ. ಸ್ಥಳದಲ್ಲಿದ್ದ ಸಾರ್ವಜನಿಕರು ತಕ್ಷಣವೇ ಕಾರ್ಯಪ್ರವೃತ್ತರಾಗಿ ಬೈಕ್‌ಅನ್ನು ಹೊರಗೆ ಸರಿಸಿದ ಕಾರಣ ಭಾರಿ ಅನಾಹುತವೊಂದು ತಪ್ಪಿದಂತಾಗಿದೆ.

ಟಿಪ್ಪರ್ ಗುದ್ದುತ್ತಿದ್ದಂತೆ ಕೆಳಗೆ ಬಿದ್ದ ದಂಪತಿಗಳನ್ನು ರಕ್ಷಿಸಿದ ಸ್ಥಳೀಯರು ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಟಿಪ್ಪರ್ ಹಾವಳಿಗೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದಾರೆ. ಘಟನಾ ಸ್ಥಳಕ್ಕೆ ಆಗಮಿಸಿದ ಪಟ್ಟಣ ಪೊಲೀಸರು ಲಾರಿಯನ್ನ ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

> ಪಟ್ಟಣದಲ್ಲಿ ಟಿಪ್ಪರ್‌ಗಳ ಹಾವಳಿ ಮಿತಿಮೀರಿದೆ ಒಮ್ಮೆ ಸಂಭವಿಸಿದ ಸಾವುನೋವುಗಳ ಚರ್ಚೆ ಮರೆಯಾಗುತ್ತಿದ್ದಂತೆ ಮತ್ತೊಂದು ಘಟನೆ ಮರುಕಲಿಸುತ್ತಿರುವುದು ವಿಷಾದಕರ, ಬಸ್ ನಿಲ್ದಾಣದ ಮುಂಭಾಗವೇ ದಂಪತಿಗಳು ತೆರಳುತ್ತಿದ್ದ ಬೈಕಿಗೆ ಗುದ್ದಿದ ಟಿಪ್ಪರ್ ಕ್ಷಣಾರ್ಧದಲ್ಲಿ ಆಹುತಿ ಪಡೆಯುವ ಲಕ್ಷಣಗಳಿತ್ತು ಆದರೆ ಅಲ್ಲಿಯೇ ಇದ್ದಂತಹ ಸಾರ್ವಜನಿಕರ ಸಮಯಪ್ರಜ್ಞೆಯಿಂದ ಬಾರಿ ಅನಾಹುತ ತಪ್ಪಿದೆ. ದೈತ್ಯಾಕಾರದ ಟಿಪ್ಪರ್ ಗಳ ಆರ್ಭಟ ಕಂಡ ದ್ವಿಚಕ್ರ ವಾಹನ ಸವಾರರು ರಸ್ತೆಗಿಳಿಯಲು ನೂರುಬಾರಿ ಯೋಚಿಸುವಂತಾಗಿದೆ, ಗಣಿ ಮಾಫಿಯಾಗೆ ಕಡಿವಾಣ ಹಾಕಬೇಕಿರುವ ಜಿಲ್ಲಾಡಳಿತ ಮೌನವಾಗಿರುವ ಹಿನ್ನೆಲೆ ಇಂತಹ ಘಟನೆಗಳು ಸಂಭವಿಸುತ್ತಲಿವೆ.
>
> –ರಂಗಪ್ಪನಾಯಕ್
> ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ತಾ.ಅಧ್ಯಕ್ಷ

# ಸುರಕ್ಷಿತಾ ಕ್ರಮವಿಲ್ಲದೆ ಕ್ರಷರ್ ಕಾರ್ಯಚಟುವಟಿಕೆ ಅಧಿಕಾರಿಗಳ ಮೌನಕ್ಕೆ ಸಾರ್ವಜನಿಕರ ಹಿಡಿಶಾಪ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಪರಿಸರ ಇಲಾಖೆಯ ನಿಯಮಾವಳಿಗಳನ್ನೇ ಗಾಳಿಗೆ ತೂರಿ ಕ್ರಷರ್ ಆರಂಭಿಸಲಾಗಿದ್ದರೂ ಕೂಡ ಅಧಿಕಾರಿಗಳು ಜಾಣ ಮೌನಕ್ಕೆ ಶರಣಾಗಿರುವುದು ಸಾರ್ವಜನಿಕರ ಕಣ್ಣು ಕೆಂಪಾಗಿಸಿದೆ ತಾಲ್ಲೂಕಿನ ಮಡಹಳ್ಳಿ ಗ್ರಾಮದ ಬಳಿ ಅಕ್ರಮ ಎಗ್ಗಿಲ್ಲದೆ ನಡೆಯುತ್ತಿದ್ದರೂ ಸಹ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿರುವುದರ ಹಿಂದೆ ಅನುಮಾನಗಳು ಉದ್ಭವವಾಗಿವೆ.

ತಾಲ್ಲೂಕಿನ ಮಡಹಳ್ಳಿ ಗ್ರಾಮದ ಸರ್ವೆ ನಂ-192 ರ ಗೋಮಾಳದ ಬಿಳಿಕಲ್ಲು ಗಣಿಗಾರಿಕೆ ಪ್ರದೇಶದ ಬಳಿ ವರ್ಷದ ಹಿಂದೆ ಕ್ರಷರ್ ಸ್ಥಾಪನೆಯಾಗಿದೆ. ಇಲ್ಲಿ ಕ್ರಷರ್ ಹೆಸರಿನ ಯಾವುದೇ ಫಲಕ ಹಾಕಿಲ್ಲ. ಜೊತೆಗೆ ಉದ್ಯಮಿ ಗುಡ್ಡ ಕುಸಿದ ಕ್ವಾರಿಯಿಂದ ಅಕ್ರಮವಾಗಿ ಅಂತರ್ಜಲ ಬಳಕೆ ಮಾಡುತ್ತಿದ್ದಾರೆ. ಸುತ್ತಲೂ ಸುರಕ್ಷಿತ ಕ್ರಮ ಅನುಸರಿಸದ ಕಾರಣ ಧೂಳು ಸುತ್ತಲಿನ ಜಮೀನುಗಳಿಗೆ ವ್ಯಾಪಿಸುತ್ತಿದೆ. ಮೇಯಲು ಬಿಡುವ ಜಾನುವಾರುಗಳು ತೆರೆದ ಪ್ರದೇಶದಲ್ಲಿರುವ ಕ್ರಷರ್ ಬಳಿಗೆ ಹೋಗಿ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಜಾನುವಾರುಗಳನ್ನು ಕ್ರಷರ್ ಬಳಿಗೆ ಹೋಗದಂತೆ ನೋಡಿಕೊಳ್ಳುವ ರೈತರಿಗೆ ಎಲ್ಲೆಂದರಲ್ಲಿ ಇಟ್ಟಿರುವ ಯಂತ್ರೋಪಕರಣಗಳಿಂದ ತೊಂದರೆ ಉಂಟಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತಾಗಿ ಪ್ರಶ್ನಿಸಿದರೆ ಕ್ರಷರ್ ಮಾಲೀಕ ನಾನು ನನ್ನಿಷ್ಟದಂತೆ ಕ್ರಷರ್ ನಡೆಸುತ್ತೇನೆ ಪ್ರಶ್ನಿಸಲು ನೀವ್ಯಾರು ಎಂದು ಉಡಾಫೆ ಉತ್ತರ ನೀಡುತ್ತಾರೆ. ಅಲ್ಲದೇ ಸಮಯ ಪಾಲನೆ ಮಾಡುತ್ತಿಲ್ಲ ಆದ್ದರಿಂದ ನಿಯಮಗಳನ್ನು ಗಾಳಿಗೆ ತೂರಿ ನಡೆಸುತ್ತಿರುವ ಕ್ರಷರ್ ಅನ್ನು ಕೂಡಲೇ ಬಂದ್ ಮಾಡಿಸಬೇಕು ಎಂದು ಗ್ರಾಮದ ಮಹೇಶ, ಶಿವಸ್ವಾಮಿ, ಶಿವಮೂರ್ತಿ, ಮಹದೇವಪ್ಪ, ನಾಗಮಲ್ಲಪ್ಪ, ಸಿದ್ದಬಸವಯ್ಯ ಇತರರು ಒತ್ತಾಯಿಸಿದ್ದಾರೆ.

# ಭೂಮಾಪನ ಇಲಾಖೆ ಸ್ತಬ್ಧ: ರೈತರ ಪರದಾಟ

• ಉದಯವಾಹಿನಿ, ಚಿಂತಾಮಣಿ


ಉದಯವಾಹಿನಿ ಚಿತ್ರ

ಸರ್ಕಾರದ ಪರವಾನಗಿ ಪಡೆದ ಭೂಮಾಪಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಎರಡು ತಿಂಗಳಿನಿಂದ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದಾಗಿ ತಾಲ್ಲೂಕು ಭೂಮಾಪನ ಇಲಾಖೆಯು ಸಂಪೂರ್ಣವಾಗಿ ಸ್ತಬ್ಧವಾಗಿದೆ. ಸಹಾಯಕ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸರ್ವೆ, ಪೋಡಿ, ದರಖಾಸ್ತಿ ಸೇರಿದಂತೆ ಇನ್ನಿತರ ಸುಮಾರು 3 ಸಾವಿರ ಅರ್ಜಿಗಳು ವಿಲೇವಾರಿಗೆ ಬಾಕಿ ಉಳಿದಿವೆ.ಮೊದಲಿಗೆ ತಾಲ್ಲೂಕಿನಲ್ಲಿ 23 ಜನ ಪರವಾನಗಿ ಪಡೆದ ಭೂಮಾಪಕರು ಕರ್ತವ್ಯ ನಿರ್ವಹಿಸುತ್ತಿದ್ದರು. ಆದರೆ, ಇದೀಗ ಕೇವಲ ಇಬ್ಬರು ಸರ್ಕಾರಿ ಭೂಮಾಪಕರು ಕಾರ್ಯ ನಿರ್ವಹಿಸುತ್ತಿದ್ದು, ಅರ್ಜಿಗಳು ತ್ವರಿತವಾಗಿ ವಿಲೇವಾರಿಯಾಗುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಈ ಮಧ್ಯೆ ಸರ್ವರ್ ಸಮಸ್ಯೆ ಕಾಡುತ್ತಿದೆ. ರೈತರು ಸರ್ವೆ, ಹದ್ದುಬಸ್ತು, ಪೋಡಿ, 11 ಇ ನಕ್ಷೆ, ದಾರಿ ನಕ್ಷೆ ಸೇರಿದಂತೆ ಕಾನೂನು ತೊಡಕುಗಳನ್ನು ನಿವಾರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪೌತಿ ಖಾತೆ, ಪಹಣಿ, ಜಮೀನು ವಿಭಾಗ, ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲಾಗದೆ ಪರದಾಡುವಂತಾಗಿದೆ. ಹೀಗಾಗಿ ಜಮೀನು ನಿವೇಶನ ಖರೀದಿ, ಹಕ್ಕು ಬದಲಾವಣೆಗೆ ತೊಡಕು ಉಂಟಾಗಿದೆ.

ನಗರದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಗೆ ಮಂಜೂರಾದ 17 ಭೂಮಾಪಕರ ಹುದ್ದೆ ಪೈಕಿ 7 ಹುದ್ದೆಗಳು ಮಾತ್ರ ಭರ್ತಿಯಾಗಿವೆ. ಉಳಿದ 10 ಹುದ್ದೆಗಳಿಗೆ ನೇಮಕವಾಗಬೇಕಿದೆ. ಈ ಪೈಕಿ 3 ಭೂಮಾಪಕರನ್ನು ತಾಲ್ಲೂಕು ತಹಶೀಲ್ದಾರ್ ಕಚೇರಿಗೆ ನಿಯೋಜಿಸಲಾಗಿದೆ. ಭೂಮಾಪನಾ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪರವಾನಗಿ ಭೂಮಾಪಕರು ಇದ್ದಾಗಲೇ ಸಮರ್ಪಕವಾಗಿ ಕೆಲಸಗಳಾಗುತ್ತಿರಲಿಲ್ಲ. ಮುಷ್ಕರದ ಸಮಯದಲ್ಲಿ ವಿವಿಧ ರೀತಿಯ ಸರ್ವೆ ಕೆಲಸಗಳು ಕುಂಟುತ್ತಾಸಾಗಿದೆ. ಸುಮಾರು ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಿರುವ ರೈತರು ಕಚೇರಿಗೆ ಅಲೆದು ಸುಸ್ತಾಗಿದ್ದಾರೆ. ಆದರೆ, ತಮ್ಮ ಕೆಲಸ ಮಾತ್ರ ಆಗಿಲ್ಲ ಎಂದು ರೈತರು ಅವಲತ್ತುಕೊಳ್ಳುತ್ತಾರೆ. ಪರವಾನಗಿ ಭೂಮಾಪಕರು ಮುಷ್ಕರ ನಡೆಸುತ್ತಿರುವುದರಿಂದ ರೈತರು ಸೇರಿದಂತೆ ಸಾರ್ವಜನಿಕರು ಭೂದಾಖಲೆ ಪಡೆಯಲು ಸಾಧ್ಯವಾಗುತ್ತಿಲ್ಲ. ರೈತರು ಪ್ರತಿನಿತ್ಯ ವಿವಿಧ ಕೆಲಸ ಕಾರ್ಯಗಳಿಗಾಗಿ ಕಚೇರಿಯತ್ತ ಅಲೆದಾಡುತ್ತಿದ್ದಾರೆ. ಅವರಿಗೆ ಉತ್ತರಿಸುವುದು ಕಷ್ಟವಾಗಿದ್ದು, ನಾವು ಅಸಹಾಯಕರಾಗಿದ್ದೇವೆ. ಇರುವ ಸರ್ಕಾರಿ ಮಾಪಕರಿಂದಲೇ ತಿಂಗಳಿಗೆ 30-40 ಅರ್ಜಿಗಳನ್ನು ವಿಲೇವಾರಿ ಮಡುತ್ತಿದ್ದೇವೆ. ಸುಮಾರು 3 ಸಾವಿರ ಅರ್ಜಿಗಳು ಬಾಕಿ ಉಳಿದಿವೆ. ಜಮೀನುಗಳ ಬೆಲೆ ಹೆಚ್ಚಾಗಿದ್ದು, ಪ್ರತಿನಿತ್ಯ ಹೊಸ ಅರ್ಜಿಗಳು ದಾಖಲಾಗುತ್ತವೆ ಎಂದು ಸಹಾಯಕ ನಿರ್ದೇಶಕ ಹನುಮಂತರಾಯಪ್ಪ ಅವರು ತಿಳಿಸಿದರು.

**ವೇತನ, ಸೇವಾ ಭದ್ರತೆ ಕೊಡಿ:** ಆರಂಭದಲ್ಲಿ ತತ್ಕಾಲ್ ಪೋಡಿ ನಕ್ಷೆಗಾಗಿ ಮಾತ್ರ ನಮ್ಮನ್ನು ನೇಮಿಸಿಕೊಳ್ಳಲಾಗಿತ್ತು. 2002ರಿಂದ ಕೆಲಸ ಮಾಡುತ್ತಿದ್ದೇವೆ. ಸರ್ಕಾರಿ ಭೂಮಾಪಕರಷ್ಟೇ ಕೆಲಸ ಮಾಡುತ್ತಿರುವ ನಮಗೆ ಸಮಾನ ವೇತನ ಮಾತ್ರ ಇಲ್ಲ. ಸೇವಾ ಭದ್ರತೆಯೂ ಇಲ್ಲ. ನಮಗೆ ನೀಡಲಾಗುತ್ತಿರುವ ಗೌರವಧವನ್ನೂ ಸಕಾಲಕ್ಕೆ ಕೊಡುತ್ತಿಲ್ಲ.

ಜಮೀನುಗಳ ಸರ್ವೆಗೆ ತೆರಳಿದಾಗ ಚೈನ್ ಹಿಡಿದುಕೊಳ್ಳಲು ಸಹಾಯಕರನ್ನೂ ನಿಯೋಜಿಸುತ್ತಿಲ್ಲ. ಹೀಗಾಗಿ, ಖಾಸಗಿ ಸಹಾಯಕರನ್ನು ಕರೆದುಕೊಂಡು ಹೋಗಿ, ಅವರಿಗೆ ನಾವೇ ನಮ್ಮಿಂದ ಜೇಬಿನಿಂದ ಹಣ ಕೊಡುತ್ತಿದ್ದೇವೆ ಎಂದು ಪರವಾನಗಿ ಭೂಮಾಪಕರೊಬ್ಬರು ಹೇಳಿದರು.

# 2 ತಿಂಗಳಿನಿಂದ ಕೆಲಸ ತ್ಯಜಿಸಿ ಭೂ ಮಾಪಕರ ಮುಷ್ಕರ

## ಪರವಾನಗಿ ಭೂಮಾಪಕರ ಹಾಗೂ ಸರ್ಕಾರದ ನಡುವಿನ ತಿಕ್ಕಾಟ ತಾರಕಕ್ಕೇರಿದ್ದು, ಭೂ ದಾಖಲೆಗಾಗಿ ರೈತರ ಪರದಾಟ

• ಉದಯವಾಹಿನಿ, ಗುಬ್ಬಿ


ಉದಯವಾಹಿನಿ ಚಿತ್ರ


ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ ಉದ್ಯೋಗ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿ ಪರವಾನಗಿ ಭೂಮಾಪಕರು ಸುಮಾರು 2 ತಿಂಗಳಿನಿಂದ ಕೆಲಸ ತ್ಯಜಿಸಿ ಮುಷ್ಕರ ನಿರತರಾಗಿದ್ದಾರೆ. ಪರವಾನಗಿ ಭೂಮಾಪಕರ ಹಾಗೂ ಸರ್ಕಾರದ ನಡುವಿನ ತಿಕ್ಕಾಟ ತಾರಕಕ್ಕೇರಿದ್ದು, ಭೂ ದಾಖಲೆಗಾಗಿ ರೈತರ ಪರದಾಟ ಹೆಚ್ಚಾಗಿದೆ. ತಾಲ್ಲೂಕಿನ ಭೂ ಮಾಪನ ಇಲಾಖೆಯಲ್ಲಿ 23 ಕಾಯಂ ಸರ್ಕಾರಿ ಭೂ ಮಾಪಕರು ಇದ್ದು 1 ಹುದ್ದೆ ಖಾಲಿ ಇದೆ. 45 ಪರವಾನಗಿ ಭೂಮಾಪಕರು ಇದ್ದಾರೆ. ಪರವಾನಗಿ ಹೊಂದಿರುವ ಭೂ ಮಾಪಕರ ಅನಿರ್ದಿಷ್ಟಾವಧಿ ಮುಷ್ಕರ ದಿಂದ ಕೇವಲ ಸರ್ಕಾರಿ ಭೂಮಾಪಕರು ಮಾತ್ರ ಸಾರ್ವಜನಿಕರ ಸೇವೆಗೆ ಲಭ್ಯವಾಗುತ್ತಿದ್ದಾರೆ. ತಾಲ್ಲೂಕಿನಲ್ಲಿ ಪ್ರಸ್ತುತ ಇರುವ ಸರ್ಕಾರಿ ಭೂಮಾಪಕರಲ್ಲಿಯೂ ಹಲವರು ನಿಯೋಜನೆ ಮೇರೆಗೆ ಜಿಲ್ಲಾ ಭೂ ದಾಖಲೆಗಳ ನಿರ್ದೇಶಕರ ಕಚೇರಿಯಲ್ಲಿ ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದೆ.

ತಾಲ್ಲೂಕಿನ 328 ಕಂದಾಯ ಗ್ರಾಮಗಳ ಪೈಕಿ ಹಕ್ಕು ಬದಲಾವಣೆ, ನಿವೇಶನ ಖರೀದಿ, ಜಮೀನು ಖರೀದಿ, ಹದ್ದುಬಸ್ತು, ನಕ್ಷೆ ತಯಾರಿ, ಪೋಡಿ ಮುಕ್ತ ಗ್ರಾಮ, 11 ಇ ಸ್ಕೆಚ್, ಕೋರ್ಟ್ ಆದೇಶ, ತತ್ಕಾಲ್ ಪೋಡಿ ಸೇರಿದಂತೆ ಸರ್ವೆಗೆ ಸೇರಿದ ಸುಮಾರು 4,666 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಮುಷ್ಕರನಿರತ ಭೂಮಾಪಕರ ಬೇಡಿಕೆ ತೀರ್ಮಾನವಾದರಷ್ಟೇ ರೈತರ ಅರ್ಜಿಗಳು ವಿಲೇವಾರಿ ಕಂಡು ಭೂಮಾಪನ ಇಲಾಖೆ ಮೇಲಿನ ಒತ್ತಡ ಕಡಿಮೆಯಾಗುವುದು. ಇಲ್ಲವಾದಲ್ಲಿ ಅರ್ಜಿಗಳು ದೂಳು ಹಿಡಿದು ಸಾರ್ವಜನಿಕರು ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವಂತಾಗಲಿದೆ. ಭೂಮಾಪಕರ ಮುಷ್ಕರಕ್ಕಿಂತಲೂ ಮೊದಲೇ ಭೂಮಾಪನ ಇಲಾಖೆಯಲ್ಲಿ ಕೆಲಸಗಳು ಮಂದಗತಿಯಲ್ಲಿ ಸಾಗುತ್ತಿದ್ದವು. ಇದೀಗ ಪರವಾನಗಿ ಭೂ ಮಾಪಕರು ಮುಷ್ಕರನಿರತರಾಗಿದ್ದಾರೆ ಎಂಬುದನ್ನೇ ನೆಪ ಮಾಡಿಕೊಂಡು ಮತ್ತಷ್ಟು ವಿಳಂಬ ಮಾಡುತ್ತಿದ್ದಾರೆ. ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಕಚೇರಿಗೆ ಹಣ ಕಟ್ಟಿ ಅರ್ಜಿ ಸಲ್ಲಿಸಿದ್ದರೂ ಸರ್ವೆಕಾರ್ಯ ಆಗುತ್ತಿಲ್ಲ. ಕಚೇರಿಗೆ ಅಲೆದು ಅಲೆದು ಸಾಕಾಗಿದೆ. ಏನು ಮಾಡುವುದು ಒಂದು ತಿಳಿಯದಾಗಿದೆ ಎಂದು ರೈತ ದೊಡ್ಡಯ್ಯ ಬೇಸರ ವ್ಯಕ್ತಪಡಿಸಿದರು.

**ದೂಳು ಹಿಡಿಯುತ್ತಿವೆ ಅರ್ಜಿ**

**ಸಂಕಷ್ಟಕ್ಕೆ ಸಿಲುಕಿದ್ದೇವೆ:** ಸರ್ಕಾರಿ ಭೂಮಾಪಕರು ಮಾಡುವ ಎಲ್ಲಾ ಕೆಲಸಗಳನ್ನು ಪರವಾನಗಿ ಹೊಂದಿರುವ ಭೂಮಾಪಕರು ಮಾಡುತ್ತೇವೆ. ಇದರ ಜೊತೆಗೆ ಇತ್ತೀಚೆಗೆ ಪೋಡಿ ಮುಕ್ತ ಗ್ರಾಮ, ಕಂದಾಯ ಗ್ರಾಮ ಹಾಗೂ ದುರಸ್ತಿ ಕೆಲಸಗಳನ್ನು ನಮಗೆ ಹಂಚಲಾಗುತ್ತಿದೆ. ಈ ಕಾರ್ಯಕ್ಕಾಗಿ ನೀಡುತ್ತಿರುವ ಗೌರವಧನ ತುಂಬಾ ಕಡಿಮೆ. ಬೇಡಿಕೆ ಈಡೇರುವವರೆಗೂ ಮುಷ್ಕರ ಮುಂದುವರಿಸುತ್ತೇವೆ. ಸರ್ಕಾರ ಪರವಾನಗಿ ಭೂಮಾಪಕರ ಸಮಸ್ಯೆ ಬಗೆಹರಿಸಿಕೊಟ್ಟಲ್ಲಿ ಅರ್ಜಿಗಳನ್ನು ತುರ್ತಾಗಿ ವಿಲೇವಾರಿ ಮಾಡುತ್ತೇವೆ ಎಂದು ಮುಷ್ಕರನಿರತ ಪರವಾನಗಿ ಭೂಮಾಪಕರು ತಿಳಿಸಿದರು.

**ಭೂ ಮಾಪಕರು ಸಂಕಷ್ಟಕ್ಕೆ ಸಿಲುಕಿದ್ದೇವೆ:** ಸರ್ಕಾರಿ ಭೂಮಾಪಕರು ಮಾಡುವ ಎಲ್ಲಾ ಕೆಲಸಗಳನ್ನು ಪರವಾನಗಿ ಹೊಂದಿರುವ ಭೂಮಾಪಕರು ಮಾಡುತ್ತೇವೆ. ಇದರ ಜೊತೆಗೆ ಇತ್ತೀಚೆಗೆ ಪೋಡಿ ಮುಕ್ತ ಗ್ರಾಮ, ಕಂದಾಯ ಗ್ರಾಮ, ದುರಸ್ತಿ ಕೆಲಸಗಳನ್ನು ನಮಗೆ ಹಂಚಲಾಗುತ್ತಿದೆ. ಈ ಕಾರ್ಯಕ್ಕಾಗಿ ನೀಡುತ್ತಿರುವ ಗೌರವಧನ ತುಂಬಾ ಕಡಿಮೆ. ಬೇಡಿಕೆ ಈಡೇರುವವರೆಗೂ ಮುಷ್ಕರ ಮುಂದುವರಿಸುತ್ತೇವೆ. ಸರ್ಕಾರ ಪರವಾನಗಿ ಭೂಮಾಪಕರ ಸಮಸ್ಯೆ ಬಗೆಹರಿಸಿಕೊಟ್ಟಲ್ಲಿ ಅರ್ಜಿಗಳನ್ನು ತುರ್ತಾಗಿ ವಿಲೇವಾರಿ ಮಾಡುತ್ತೇವೆ ಎಂದು ಮುಷ್ಕರನಿರತ ಪರವಾನಗಿ ಭೂಮಾಪಕರು ತಿಳಿಸಿದರು.

### ಸಿ.ಕೆ ರವೀಂದ್ರ, ವಕೀಲ ಪ್ರತಿಭಟನೆ ಎಚ್ಚರಿಕೆ

ಪರವಾನಗಿ ಭೂಮಾಪಕರು ಸುಮಾರು 2 ತಿಂಗಳಿನಿಂದಲೂ ಕೆಲಸ ತ್ಯಜಿಸಿ ಪ್ರತಿಭಟನೆ ಮಾಡುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಹಾಗೂ ಸರ್ಕಾರ ಯಾವುದೇ ಪರಿಹಾರಕ್ಕೆ ಮುಂದಾಗಿಲ್ಲ. ಇದರಿಂದ ಸರ್ವೆ ಕೆಲಸ ಆಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ತಕ್ಷಣ ಪರಿಹಾರಕ್ಕೆ ಮುಂದಾಗದಿದ್ದಲ್ಲಿ ರೈತ ಸಂಘದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು. ರೈತರ ಹಿತವೇ ನಮಗೆ ಮುಖ್ಯ.

-ಸಿ.ಜಿ.ಲೋಕೇಶ್,
ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ

> ಲಕ್ಷ್ಮಮ್ಮ, ರೈತ ಮಹಿಳೆ ಆದ್ಯತೆ ಮೇರೆಗೆ ಕಾರ್ಯನಿರ್ವಹಿಸುತ್ತೇವೆ ಪರವಾನಗಿ ಖಾಸಗಿ ಭೂಮಾಪಕರ ಮುಷ್ಕರದಿಂದ ತಾಲ್ಲೂಕಿನಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ಮೇಲಧಿಕಾರಿಗಳು ಸ್ಪಂದಿಸಿ ನಿಯೋಜನೆ ಮೇಲೆ ಇರುವ ಸಿಬ್ಬಂದಿಯನ್ನು ಮಾತೃ ಕಚೇರಿಗೆ ಕಳುಹಿಸಿ ಸರ್ವೆ ಕಾರ್ಯದಲ್ಲಿ ಭಾಗಿಯಾಗುವಂತೆ ತಿಳಿಸಲು ಆದೇಶಿಸಿದ್ದಾರೆ. ಪ್ರಸ್ತುತ ತಾಲ್ಲೂಕಿನಲ್ಲಿ ಲಭ್ಯವಿರುವ ಸರ್ಕಾರಿ ಭೂಮಾಪಕರನ್ನೇ ಬಳಸಿಕೊಂಡು ಸಾರ್ವಜನಿಕರ ಹಿತದೃಷ್ಟಿಯಿಂದ ಆದ್ಯತೆ ಮೇರೆಗೆ ಕಾರ್ಯನಿರ್ವಹಿಸುತ್ತೇವೆ.
>
> -ತಿಮ್ಮಯ್ಯ
> ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕ

**ತೊಂದರೆಯಾಗದಂತೆ ಕ್ರಮವಹಿಸಿ:** ಪರವಾನಗಿ ಭೂಮಾಪಕರ ಮುಷ್ಕರ ಕೇವಲ ಇಲಾಖೆಗಷ್ಟೇ ಸೀಮಿತವಾಗಿಲ್ಲ. ರೈತರಿಗೆ ನೇರವಾಗಿ ಸಂಬಂಧಪಟ್ಟಿರುವುದರಿಂದ ಅಧಿಕಾರಿಗಳು ರೈತರಿಗೆ ತೊಂದರೆಯಾಗದಂತೆ ಕ್ರಮಕ್ಕೆ ಮುಂದಾಗಬೇಕು. ಇಲ್ಲವಾದಲ್ಲಿ ರೈತರ ಪರವಾಗಿ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ಕಾನೂನು ಹೋರಾಟಕ್ಕೆ ಮುಂದಾಗುತ್ತೇವೆ.

**ಜಮೀನು ಮಾರಾಟ ಮಾಡಬೇಕಿದೆ:** ಮನೆಯಲ್ಲಿ ಗಂಡನ ಆರೋಗ್ಯಕ್ಕಾಗಿ ಸಾಕಷ್ಟು ಹಣ ವ್ಯಯಮಾಡಿದ್ದೆವು. ಇದೀಗ ಮಗಳ ಮದುವೆಯನ್ನು ಮಾಡಬೇಕಾಗಿದೆ. ಜಮೀನಿನ ದಾಖಲೆ ಸರಿಪಡಿಸಿ ಬ್ಯಾಂಕ್‌ನಲ್ಲಿ ಸಾಲ ಇಲ್ಲವೇ ಮಾರಾಟ ಮಾಡಲೇಬೇಕಿದೆ. ಇಲ್ಲವಾದಲ್ಲಿ ನಮಗೆ ಹಣ ಹೊಂದಿಸಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕುತ್ತೇವೆ. ಅಧಿಕಾರಿಗಳನ್ನು ಕೇಳಿದರೆ ಹಾರಿಕೆ ಉತ್ತರ ನೀಡುತ್ತಾರೆ. ಏನು ಮಾಡುವುದು ಒಂದು ತಿಳಿಯದಾಗಿದೆ.

# ಮಿನಿ ನ್ಯೂಸ್

## ಕಾಡಾನೆ ದಾಳಿ: ರೇಷನ್ ತರಲು ಹೋಗುತ್ತಿದ್ದ ವ್ಯಕ್ತಿ ಸಾವು

• ಉದಯವಾಹಿನಿ, ರಾಮನಗರ

ರೇಷನ್ ತರಲು ಹೋಗುತ್ತಿದ್ದ ವ್ಯಕ್ತಿ ಮೇಲೆ ಕಾಡಾನೆ ದಾಳಿ ನಡೆಸಿದ್ದರಿಂದ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಾವೇರಿ ವನ್ಯಜೀವಿಧಾಮದ ಸಂಗಮ ಅರಣ್ಯ ವ್ಯಾಪ್ತಿಯ ಚೀಲಂದವಾಡಿ ಗ್ರಾಮದಲ್ಲಿ ಭಾನುವಾರ ನಡೆದಿದೆ. ಶಿವು (55) ಕಾಡಾನೆ ದಾಳಿಯಿಂದ ಮೃತಪಟ್ಟವರು. ಮನೆಗೆ ರೇಷನ್ ತರಲು ಶಿವು ಅವರು ಅಂಗಡಿಗೆ ನಡೆದುಕೊಂಡು ಹೋಗುತ್ತಿದ್ದರು ಈ ವೇಳೆ, ಹಿಂದಿನಿಂದ ಬಂದಿರುವ ಕಾಡಾನೆ ಏಕಾಏಕಿ ದಾಳಿ ನಡೆಸಿ ತಲೆ ಮೇಲೆ ಕಾಲಿಟ್ಟಿದೆ. ದಾಳಿಯ ತೀವ್ರತೆಗೆ ಶಿವು ಅವರು ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಅರಣ್ಯಾಧಿಕಾರಿಗಳು ಹಾಗೂ ಕೋಡಿಹಳ್ಳಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳದಲ್ಲಿ ಜಮಾಯಿಸಿದ ಸ್ಥಳೀಯರು ಕಾಡಾನೆ ಹಾವಳಿ ಖಂಡಿಸಿ ಪ್ರತಿಭಟನೆ ನಡೆಸಿ, ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ಹೊರಹಾಕಿದರು. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಕನಕಪುರ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ನಾಲ್ಕು ದಿನಗಳ ಹಿಂದೆಯಷ್ಟೇ ಸಂಗಮದ ಕಾವೇರಿ ನದಿ ಬಳಿ ಪ್ರವಾಸಿಗರತ್ತ ಕಾಡಾನೆ ಬಂದು ಏಕಾಏಕಿ ನುಗ್ಗಿ, ಆತಂಕ ಸೃಷ್ಟಿಸಿತ್ತು.

## ರಾಜ್ಯ ಪಿಡಿಒ ಸಂಘಕ್ಕೆ ಆಯ್ಕೆ

• ಉದಯವಾಹಿನಿ, ಕೋಲಾರ

ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾಗಿ ಎನ್.ದೀಪಾ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಂಘದ ವಿವಿಧ ಸ್ಥಾನಗಳ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಜಿಲ್ಲಾ ಸಂಘದಿಂದ ರಾಜ್ಯ ಪರಿಷತ್ ಸದಸ್ಯರಾಗಿದ್ದ ಮಾಲೂರು ತಾಲ್ಲೂಕಿನ ಅಬ್ಬೇನಹಳ್ಳಿ ಪಿಡಿಒ ದೀಪಾ ಸ್ಪರ್ಧಿಸಿದ್ದರು. ಎದುರಾಳಿಯಾಗಿ ಧಾರವಾಡ ಜಿಲ್ಲೆಯ ಪುಷ್ಪಾವತಿ ಮೇದಾರ್ ಸ್ಪರ್ಧಿಸಿದ್ದರು. ಒಟ್ಟು 90 ಮತಗಳ ಪೈಕಿ ದೀಪಾ 53 ಮತ ಪಡೆದು ಜಯ ಗಳಿಸಿದ್ದಾರೆ.

## ಅಂತರ ರಾಜ್ಯ ಸುಲಿಗೆಕೋರರ ಬಂಧನ

• ಉದಯವಾಹಿನಿ, ಕೋಲಾರ

ಮಹಿಳೆಯರು, ಇತರರನ್ನು ವಂಚಿಸಿ ಕಳ್ಳತನ ಎಸಗುತ್ತಿದ್ದ ಅಂತರರಾಜ್ಯ ಸುಲಿಗೆಕೋರರನ್ನು ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ವಿವಿಧ ಕಳುವು ಮಾಡಿದ್ದ 8.5 ಲಕ್ಷ ಮೌಲ್ಯದ 59 ಗ್ರಾಂ ತೂಕದ ಎರಡು ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ. ಹಿಂದೂಪುರ ತಾಲ್ಲೂಕಿನ ಲೇಪಾಕ್ಷಿ ಗ್ರಾಮದ ಸಿಂಹಾದ್ರಿ (21) ಹಾಗೂ ಗೌರಿಬಿದನೂರು ತಾಲ್ಲೂಕಿನ ನಗರಗೆರೆಯ ಶಿವರಾಜ್ ಕುಮಾರ್ ಅಲಿಯಾಸ್ ನೆತ್ತಿ ಶಿವ ಬಂಧಿತ ಆರೋಪಿಗಳು. ಬೈಕ್‌ನಲ್ಲಿ ಬಂದ ಈ ಇಬ್ಬರು ಆರೋಪಿಗಳು ಶ್ರೀನಿವಾಸಪುರ ತಾಲ್ಲೂಕಿನ ನಂಬುವಾರಿಪಲ್ಲಿ ಗ್ರಾಮದ ಮಹಿಳೆಗೆ ವೃದ್ಧಾಪ್ಯ ಪಿಂಚಣಿ ಮಾಡಿಕೊಡಿಸುವುದಾಗಿ ನಂಬಿಸಿದ್ದಾರೆ. ಆಧಾರ್ ಕಾರ್ಡ್ ನೋಡಲು ಮನೆ ಪ್ರವೇಶಿಸಿ, ಮಹಿಳೆಯನ್ನು ವಂಚಿಸಿ ಮಾಂಗಲ್ಯದ ಚೈನ್ ಕಳ್ಳತನ ಮಾಡಿ ಪರಾರಿಯಾಗಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಿಕ್ರಿವಾಲ್, ವಿಶೇಷ ತಂಡ ರಚಿಸಿದರು.

ಎಎಸ್ಪಿಗಳಾದ ರವಿಶಂಕರ್, ಜಗದೀಶ್ ಮೇಲ್ವಿಚಾರಣೆ ವಹಿಸಿಕೊಂಡು ಮುಳಬಾಗಿಲು ಡಿವೈಎಸ್ಪಿ ಮನಿಷಾ ನೇತೃತ್ವದಲ್ಲಿ ತನಿಖೆ ಆರಂಭಿಸಲಾಯಿತು. ಗೌನಿಪಲ್ಲಿ ವೃತ್ತದ ಸಿಪಿಐ ಶಿವಕುಮಾರ್, ರಾಯಲ್ಪಾಡು ಪೊಲೀಸ್ ಠಾಣೆಯ ಪಿಎಸ್‌ಐ ರಾಮ್, ಶ್ರೀನಾಥ್, ಸಿಬ್ಬಂದಿ ಸಂತೋಷ್‌ಲಮಾಣಿ, ಸದಾಶಿವಯ್ಯ, ಗಂಗರಾಜ್, ರಮೇಶ್, ಕೃಷ್ಣಮೂರ್ತಿ, ಮಂಜುನಾಥ್, ರಾಮಿರೆಡ್ಡಿ, ಸಂತೋಷ್ ಕುಮಾರ್, ಮುರಳಿ, ಶ್ರೀನಾಥ್ 200ಕ್ಕೂ ಅಧಿಕ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದ್ದಾರೆ. ಆರೋಪಿಗಳನ್ನು ಬಂಧಿಸಿದ್ದು, ವಿವಿಧೆಡೆ ಕದ್ದ ಬಂಗಾರದ ಸರ, ಆ ಕೃತ್ಯಕ್ಕೆ ಬಳಸಿದ 1.8 ಲಕ್ಷ ಮೌಲ್ಯದ ದ್ವಿಚಕ್ರ ವಾಹನವನ್ನೂ ವಶಕ್ಕೆ ಪಡೆದಿದ್ದಾರೆ. ಪೊಲೀಸರ ಕಾರ್ಯಾಚರಣೆಯನ್ನು ಎಸ್‌ಪಿ ಶ್ಲಾಘಿಸಿದ್ದಾರೆ.

## ತಾಪಮಾನ: ಹೆಲ್ಮೆಟ್ ಧಾರಣೆಯಿಂದ ವಿನಾಯಿತಿಗೆ ಮನವಿ

• ಉದಯವಾಹಿನಿ, ಮೈಸೂರು

ನಗರದಲ್ಲಿ ಉಷ್ಣಾಂಶ ದಿನೇ ದಿನೇ ಏರಿಕೆ ಆಗುತ್ತಿರುವ ಕಾರಣ ದ್ವಿಚಕ್ರವಾಹನ ಸವಾರರಿಗೆ ಹೆಲ್ಮೆಟ್ ಧಾರಣೆಯಿಂದ ವಿನಾಯಿತಿ ನೀಡಬೇಕು ಎಂದು ಬಿಜೆಪಿ ಮುಖಂಡ ಸಂದೇಶ್ ಸ್ವಾಮಿ ಕೋರಿದ್ದಾರೆ. ಈ ಸಂಬಂಧ ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿರುವ ಅವರು, ಅಧಿಕ ತಾಪಮಾನದ ಈ ಸಂದರ್ಭದಲ್ಲಿ ಹೆಲ್ಮೆಟ್ ಧರಿಸುವುದರಿಂದ ದೇಹದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ತಲೆಕೂದಲು ಉದುರುವುದು ಮತ್ತು ಮುಖದ ಚರ್ಮದ ಮೇಲೆ ಪರಿಣಾಮ ಉಂಟಾಗುತ್ತದೆ. ಮಹಿಳೆಯರು ಹೆಲ್ಮೆಟ್ ಧರಿಸುತ್ತಿರುವುದರಿಂದ ಕೇಶರಾಶಿಗೆ ಧಕ್ಕೆಯಾಗುತ್ತದೆ. ಹೀಗಾಗಿ, ಮಾನವೀಯ ದೃಷ್ಟಿಯಲ್ಲಿ ವಿನಾಯಿತಿ ನೀಡುವ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ. ನಗರದಲ್ಲಿ ಅನೇಕ ಕಡೆ ಅನಗತ್ಯವಾಗಿ ಸಂಚಾರ ಸಿಗ್ನಲ್ ದ್ವೀಪಗಳನ್ನು ಅಳವಡಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಗಳು ಕೇಳಿಬಂದಿವೆ. ಆದ್ದರಿಂದ ಅನಗತ್ಯ ಸಿಗ್ನಲ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

## ಆದಿವಾಸಿಗಳ ಕಲ್ಯಾಣಕ್ಕೆ ಆದ್ಯತೆ ನೀಡಿ


• ಉದಯವಾಹಿನಿ, ಚಾಮರಾಜನಗರ

ಜಿಲ್ಲಾಧಿಕಾರಿ ಶ್ರೀರೂಪಾ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಿ.ಎಸ್.ಆರ್ ಹಾಗೂ ಎನ್.ಜಿ.ಒ ಮುಖ್ಯಸ್ಥರ ಸಭೆ ನಗರದಲ್ಲಿ ನಡೆಯಿತು. ಜಿಲ್ಲೆಯ ಆದ್ಯತಾ ಅಭಿವೃದ್ಧಿ ಕ್ಷೇತ್ರಗಳ ಜೊತೆಗೆ ಇತರ ಸಮಾಜಮುಖಿಯಾದ ಚಟುವಟಿಕೆಗಳ ಅನುಷ್ಠಾನದ ಕುರಿತು ನಡೆದ ಸಭೆಯಲ್ಲಿ ಪ್ರಮುಖ ಯೋಜನೆ ಮತ್ತು ಅಗತ್ಯತೆಗಳನ್ನು ಪ್ರಸ್ತುತಪಡಿಸಲಾಯಿತು. ಜಿಲ್ಲಾಡಳಿತ ಕಾರ್ಯಕ್ರಮಗಳಿಗೆ ಅಗತ್ಯ ಸಹಕಾರ ನೀಡುವುದಾಗಿ ಎನ್‌ಜಿಒಗಳ ಮುಖ್ಯಸ್ಥರು ಭರವಸೆ ನೀಡಿದರು.

ಜಿಲ್ಲೆಯ ಅಗತ್ಯಗಳಿಗೆ ಅನುಗುಣವಾಗಿ ವಿಶೇಷವಾಗಿ ಆದಿವಾಸಿಗಳು ವಾಸವಾಗಿರುವ ಪ್ರದೇಶಗಳಲ್ಲಿ ಸಮುದಾಯದ ಕಲ್ಯಾಣ ಕಾರ್ಯಕ್ರಮಗಳಿಗೆ ಒತ್ತು ನೀಡಲು ಸಿ.ಎಸ್.ಆರ್ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಕಂಪನಿಗಳಿಗೆ ಸೂಚಿಸಲಾಯಿತು. ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಸುಧಾರಣೆ, ಶಾಲೆಗಳ ಮೂಲಸೌಕರ್ಯಕ್ಕೆ ಒತ್ತು ಸಹಿತ ಶೈಕ್ಷಣಿಕ ಕ್ಷೇತ್ರಕ್ಕೆ ಸಮಗ್ರ ಬೆಂಬಲ ನೀಡುವುದು, ಆದಿವಾಸಿಗಳು ವಾಸವಿರುವ ಹಾಡಿಗಳಿಗೆ ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ನೆರವು, ಬುಡಕಟ್ಟು ಸಮುದಾಯಗಳಿಗೆ ಉದ್ಯೋಗ ಅವಕಾಶ, ಜೀವನೋಪಾಯ ಅಭಿವೃದ್ಧಿ, ಕೌಶಲಾಭಿವೃದ್ಧಿ, ಉದ್ಯೋಗ ಪಡೆಯಲು ಪೂರಕ ತರಬೇತಿ, ವೃತ್ತಿ ಮಾರ್ಗದರ್ಶನ ನೀಡುವ ಕುರಿತು ಚರ್ಚಿಸಲಾಯಿತು. ಈಗಾಗಲೇ ನಡೆಯುತ್ತಿರುವ ಸಿಎಸ್‌ಆರ್ ಚಟುವಟಿಕೆಗಳ ಬಗ್ಗೆ ಅವಲೋಕಿಸಿ ಮುಂದಿನ ವರ್ಷದ ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು.

ಅಂತರಾಳದಿಂದ..
EDITORIAL

# ಚಡ್ಡಾ ಕಂಸಾಲಿಂಗನ!



"ಅರವಿಂದ ಕೇಜ್ರಿವಾಲ್ ಅವರು ಶ್ರೀಕೃಷ್ಣನಾದರೆ ಬಿಜೆಪಿಯು ಕಂಸ ಮೂರು ವರ್ಷಗಳ ಹಿಂದೆ ಹೀಗೊಂದು ಹೇಳಿಕೆ ನೀಡಿದ್ದ ಆಮ್ ಆದ್ಮಿಯ ಟ್ರಬಲ್ ಶೂಟರ್ ಎಂದೇ ಗುರುತಿಸಿಕೊಂಡಿದ್ದ ರಾಘವ್ ಚಡ್ಡಾ ಕೊನೆಗೂ ಕಂಸನನ್ನು ಆಲಂಗಿಸಿಕೊಂಡಿದ್ದಾರೆ. ಶ್ರೀ ಕೃಷ್ಣ ತನ್ನನ್ನು ನಾಶ ಮಾಡುತ್ತಾನೆ ಎಂದು ಕಂಸನಿಗೆ ತಿಳಿದಿತ್ತು. ಆದುದರಿಂದ ಕೃಷ್ಣನನ್ನು ಕೊಲ್ಲಲು ಕಂಸ ಹಲವು ಸಂಚುಗಳನ್ನು ನಡೆಸಿದ್ದ ಆದರೆ ಶ್ರೀಕೃಷ್ಣನ ತಲೆಯ ಒಂದು ಕೂದಲನ್ನು ಕೊಂಕಿಸಲು ಕೂಡ ಆತನಿಗೆ ಸಾಧ್ಯವಾಗಲಿಲ್ಲ. ಅದೇ ರೀತಿ ತನ್ನ ಅವನತಿಗೆ ಆಪ್ ಕಾರಣವಾಗುತ್ತದೆ ಎಂದು ಬಿಜೆಪಿಗೆ ಗೊತ್ತಿದೆ ಎಂಬಂತಹ ಹೇಳಿಕೆ ನೀಡಿದ್ದ ಛಡ್ಡಾ, ಇದೀಗ ಇತರ ಆರು ಸಂಸದರೊಂದಿಗೆ ಪಕ್ಷಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಲಿದ್ದೇನೆ ಎಂದು ಪ್ರಕಟಿಸಿದ್ದಾರೆ. ಕೊನೆಗೂ ಛಡ್ಡಾ ಅವರಿಗೆ ಕೃಷ್ಣನ ಸಹವಾಸಕ್ಕಿಂತ ಕಂಸನ ಸಹವಾಸವೇ ವಾಸಿ ಎನ್ನುವುದು ಅರ್ಥವಾಗಿದೆ. ವಿಪರ್ಯಾಸವೆಂದರೆ ತನ್ನ ಈ ಪಕ್ಷಾಂತರವನ್ನು ಸಮರ್ಥಿಸಿಕೊಳ್ಳಲು ಅವರು ಮತ್ತೆ ತತ್ವ ಮೌಲ್ಯ ನೈತಿಕತೆ ಎಂಬಿತ್ಯಾದಿ ಪದಗಳನ್ನು ಬಳಸಿಕೊಂಡಿರುವುದು. ಆಪ್ ತನ್ನ ಮೂಲ ತತ್ವಗಳು, ಮೌಲ್ಯಗಳು ಮತ್ತು ನೈತಿಕತೆಯಿಂದ ದೂರವಾಗಿದೆ. ಈ ಪಕ್ಷವು ಈಗ ರಾಷ್ಟ್ರದ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿಲ್ಲ ಬದಲಾಗಿ ಅದರ ವೈಯಕ್ತಿಕ ಲಾಭಕ್ಕಾಗಿ ಕೆಲಸ ಮಾಡುತ್ತಿದೆ. ಕಳೆದ ಕೆಲವು ವರ್ಷಗಳಿಂದ ನಾನು ತಪ್ಪು ಪಕ್ಷದಲ್ಲಿ ಇದ್ದ ಸರಿಯಾದ ವ್ಯಕ್ತಿ ಎಂದು ನನಗೆ ಅನ್ನಿಸುತ್ತಿದೆ ಎಂದು ಅವರು ಮಾಧ್ಯಮದ ಜೊತೆಗೆ ಹಂಚಿಕೊಂಡಿದ್ದಾರೆ. ಆಪ್ ನೈತಿಕತೆಯಿಂದ, ಮೂಲತತ್ವಗಳಿಂದ ದೂರವಾಗಿದೆ ಎನ್ನುವ ಚಡ್ಡಾ ಮಾತುಗಳನ್ನು ನಾವು ಒಪ್ಪಿಕೊಳ್ಳೋಣ. ಆದರೆ ಬಿಜೆಪಿಯಲ್ಲಿ ಯಾವ ನೈತಿಕ ಮೌಲ್ಯಗಳನ್ನು ಅವರು ಕಂಡುಕೊಂಡರು? ಈವರೆಗೆ ಬಿಜೆಪಿಯ ಸಂವಿಧಾನ ವಿರೋಧಿ ನೀತಿಗಳನ್ನು ಟೀಕಿಸುತ್ತಿದ್ದ ಚಡ್ಡಾ ಅವರನ್ನು ಬಿಜೆಪಿ ಸೇರ್ಪಡೆಯಾಗುವಂತೆ ಪ್ರೇರೇಪಿಸಿದ ಬಿಜೆಪಿಯೊಳಗಿನ ಮೌಲ್ಯಗಳು ಯಾವುವು? ಎನ್ನುವುದನ್ನು ಅವರು ಸ್ಪಷ್ಟಪಡಿಸಿಲ್ಲ.

ಇಂದು ಜನತೆ ಅವರನ್ನು ಪ್ರಶ್ನಿಸುತ್ತಿರುವುದು ಆಪ್ ಪಕ್ಷವನ್ನು ತೊರೆಯುತ್ತಿರುವ ಕಾರಣಕ್ಕಾಗಿಯಲ್ಲ ಬಿಜೆಪಿಯ ಕುರಿತಂತೆ ಅವರಲ್ಲಿ ಮೂಡಿದ ಭರವಸೆಗಾಗಿ. ಆಮ್ ಆದ್ಮಿ ಪಕ್ಷ ಹುಟ್ಟಿಕೊಂಡದ್ದು ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಅಣ್ಣಾ ಹಝಾರೆ ನೇತೃತ್ವದಲ್ಲಿ ಆರಂಭವಾದ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಬಳಸಿಕೊಂಡು ಆಮ್ ಆದ್ಮಿ ಪಕ್ಷ ತಲೆಯೆತ್ತಿತ್ತು. ವಿದ್ಯಾವಂತರು, ಸುಶಿಕ್ಷಿತರು ಎಲ್ಲಕ್ಕಿಂತ ಮುಖ್ಯವಾಗಿ ಯುವ ತಲೆಮಾರುಗಳ ಮೂಲಕ ಈ ಪಕ್ಷ ಜನರನ್ನು ಸೆಳೆಯಿತು. ಬಹುಶಃ ಭಾರತದಲ್ಲಿ ಯಾವುದೇ ಸ್ವತಂತ್ರ ಪಕ್ಷ ಹುಟ್ಟಿದ ಬೆನ್ನಿಗೇ ಒಂದು ರಾಜ್ಯದ ಅಧಿಕಾರ ಹಿಡಿದ ಉದಾಹರಣೆಗಳಿಲ್ಲ. ಆ ಸಂದರ್ಭದಲ್ಲಿ ಆಮ್‌ಆದ್ಮಿಪಕ್ಷದ ಬಗ್ಗೆ ಅನುಮಾನ ವ್ಯಕ್ತ ಪಡಿಸಿದವರ ಸಂಖ್ಯೆಯೂ ದೊಡ್ಡದಿತ್ತು. ಮುಖ್ಯವಾಗಿ ಆಮ್ ಆದ್ಮಿ ಪಕ್ಷಕ್ಕೆ ಹಣದ ಮೂಲ ಎಲ್ಲಿಂದ ಎನ್ನುವುದು ಒಂದು ಪ್ರಶ್ನೆಯಾಗಿತ್ತಾದರೆ, ಇದರ ನಿಯಂತ್ರಣ ಯಾರ ಕೈಯಲ್ಲಿದೆ ಎನ್ನುವುದು ಇನ್ನೊಂದು ಪ್ರಶ್ನೆಯಾಗಿತ್ತು. ಆದರೆ ಕೇಜ್ರಿವಾಲ್ ನೇತೃತ್ವದಲ್ಲಿ ಮೋದಿಯ ಜನವಿರೋಧಿ ನೀತಿಗಳ ವಿರುದ್ಧ ಈ ಪಕ್ಷ ದೊಡ್ಡ ಧ್ವನಿಯಲ್ಲಿ ಮಾತನಾಡಿತು. ಬಿಜೆಪಿಯನ್ನು ಎದುರಿಸಲು ಅನಿವಾರ್ಯವಾಗಿ ಕಾಂಗ್ರೆಸನ್ನು ನೆಚ್ಚಿಕೊಂಡವರಿಗೆ ಅಮ್ ಆದ್ಮಿ ಪಕ್ಷ ಪರ್ಯಾಯವಾಯಿತು. ಪ್ರಧಾನಿ ಮೋದಿಯವರ ಪಾಲಿಗೆ ಕೇಜ್ರಿವಾಲ್ ಕಾಂಗ್ರೆಸ್ ನಾಯಕರಿಗಿಂತ ದೊಡ್ಡ ತಲೆನೋವಾದರು. ಅತಿ ಕಡಿಮೆ ಅವಧಿಯಲ್ಲಿ ಬೆಳೆದ ಅರವಿಂದ ಕೇಜ್ರಿವಾಲ್‌ರ ರಾಜಕೀಯ ವರ್ಚಸ್ಸು ದಿಲ್ಲಿಯಲ್ಲಿ ಕೇಜ್ರಿವಾಲ್ ಸರಕಾರ ಮಾಡಿದ ಸುಧಾರಣೆಗಳು, ಪ್ರಧಾನಿ ಮೋದಿಯ ವಿರುದ್ಧ ಅವರ ನೇರ ಟೀಕೆಗಳು ಬಿಜೆಪಿಗೆ ತೀವ್ರ ಇರಿಸು ಮುರಿಸು ಉಂಟು ಮಾಡಿದ್ದವು. ಆದರೆ ದಿಲ್ಲಿ ಪಂಜಾಬ್‌ನಲ್ಲಿ ಅಧಿಕಾರ ಹಿಡಿದ ಬಳಿಕ ಕೇಜ್ರಿವಾಲ್ ಹೆಸರೂ ಭ್ರಷ್ಟಾಚಾರದಲ್ಲಿ ಸಿಲುಕಿಕೊಂಡವು. ಇದನ್ನು ಬಳಸಿಕೊಂಡು ತನಿಖಾ ಸಂಸ್ಥೆಗಳ ಮೂಲಕವೇ ಪ್ರಧಾನಿ ಮೋದಿಯವರು ಆಮ್ ಆದ್ಮಿಯನ್ನು ಬಗ್ಗುಬಡಿಯಲು ಪ್ರಯತ್ನಿಸಿದರು. ಅದರಲ್ಲಿ ಭಾಗಶಃ ಯಶಸ್ವಿಯಾದರು. ಕೇಜ್ರಿವಾಲ್, ಸಿಸೋಡಿಯಾ ಸೇರಿದಂತೆ ಹಲವು ಪ್ರಮುಖ ನಾಯಕರು ಜೈಲು ಸೇರುವಂತಹ ಸ್ಥಿತಿ ನಿರ್ಮಾಣವಾಯಿತು. ಈ.ಡಿ. ದಾಳಿಗಳು ತೀವ್ರವಾದಂತೆಯೇ ಆ್ಯಪ್‌ನ ಒಳಗಿರುವ ನಾಯಕರ ಬಣ್ಣ ಕರಗತೊಡಗಿದವು. 'ಅಣ್ಣಾ ಹಝಾರೆಯ ಭ್ರಷ್ಟಾಚಾರ ವಿರೋಧಿ ಆಂದೋಲನ ಯುಪಿಎ ಸರಕಾರವನ್ನು ಗುರಿಯಾಗಿಸಿಕೊಂಡಿತ್ತೇ ಹೊರತು, ಭ್ರಷ್ಟಾಚಾರವನ್ನಲ್ಲ. ಅದು ಯುಪಿಎಯನ್ನು ಅಧಿಕಾರದಿಂದ ಇಳಿಸಿ ಬಿಜೆಪಿಯನ್ನು ಅಧಿಕಾರಕ್ಕೇರಿಸುವ ದುರುದ್ದೇಶವನ್ನು ಹೊಂದಿತ್ತು' ಎನ್ನುವ ಆರೋಪಗಳಿಗೆ ಪುಷ್ಟಿ ನೀಡುವಂತೆ ಆಪ್‌ನೊಳಗಿರುವ ಹಲವು ನಾಯಕರು ಕೆಲವೇ ವರ್ಷಗಳಲ್ಲಿ ಬಿಜೆಪಿಗೆ ಪಕ್ಷಾಂತರವಾದರು.

ದಿಲ್ಲಿಯ ಗಲಭೆಯ ಸಂದರ್ಭದಲ್ಲಿ ಕೇಜ್ರಿವಾಲ್ ಸರಕಾರ ಮೃದು ಹಿಂದುತ್ವ ನೀತಿಯನ್ನು ಅನುಸರಿಸಿತ್ತು ಎನ್ನುವುದು ಆಪ್ ಮೇಲೆ ಇರುವ ಇನ್ನೊಂದು ಆರೋಪ. ಇದೀಗ, ರಾಘವ್ ಚಡ್ಡಾ ಇತರ ಆರು ಸಂಸದರ ಜೊತೆಗೆ ಬಿಜೆಪಿಯೊಳಗೆ ವಿಲೀನವಾಗುವ ಘೋಷಣೆ ಮಾಡಿದ್ದಾರೆ. ಆಪ್‌ನ ಪಾಲಿಗೆ ಇದು ಬಹುದೊಡ್ಡ ಹಿನ್ನಡೆಯಾಗಿದೆ. ಬರೇ ಆಪ್ ಎಂದಲ್ಲ ಸುಶಿಕ್ಷಿತ ಹೊಸ ತಲೆಮಾರಿನ ನಾಯಕತ್ವದ ಮೇಲೆ ವಿಶ್ವಾಸವಿಟ್ಟ ಜನರಿಗೆ ಈ ಮೂಲಕ ಇವರು ದ್ರೋಹವೆಸಗಿದ್ದಾರೆ. ಆಮ್ ಆಗ್ಮಿ ಪಕ್ಷದ ವಿಶ್ವಾಸಾರ್ಹತೆಗೆ ಭಾರೀ ಧಕ್ಕೆಯುಂಟಾಗಿದೆ. ಕೋಮುವಾದಿ ಶಕ್ತಿಗಳನ್ನು ಅಧಿಕಾರಕ್ಕೇರಿಸುವ ಉದ್ದೇಶದಿಂದಲೇ ಆಮ್ ಆದ್ಮಿ ಎನ್ನುವ ಪಕ್ಷವನ್ನು ಶೂನ್ಯದಿಂದ ಆರ್‌ಎಸ್‌ಎಸ್ ಸೃಷ್ಟಿಸಿತು ಎನ್ನುವ ಅನುಮಾನಗಳಿಗೆ ಚಡ್ಡಾ ಗುಂಪು ಇನ್ನಷ್ಟು ಇಂಧನ ಸುರಿದಿದೆ. ಭ್ರಷ್ಟಾಚಾರದ ವಿರುದ್ಧದ ಆಂದೋಲನದಲ್ಲಿ ಹುಟ್ಟಿಕೊಂಡ ಆಮ್ ಆದ್ಮಿ ಪಕ್ಷ ಸ್ವತಃ ಭ್ರಷ್ಟಾಚಾರ ಆರೋಪದಲ್ಲಿ ಸಿಲುಕಿಕೊಂಡಿರುವುದು ನಿಜವೇ ಆಗಿದೆ.

## ರಾಮಾಯಣ



ಸೂರ್ಯಾಸ್ತಸಮಯದಲ್ಲಿ ಮಾರುತಿಯು ಸೂಕ್ಷ್ಮದೇಹಿಯಾಗಿ ಲಂಕೆಯನ್ನು ಹೊಕ್ಕಿದ್ದು

• ಹಿಂದಿನ ಸಂಚಿಕೆಯಿಂದ

### ಸುಂದರಕಾಂಡ

ಮದ್ದಾನೆಯೊಂದು ತನ್ನ ಸೊಂಡಿಲಿನಲ್ಲಿ ಸಮುದ್ರದ ನೀರನ್ನು ತುಂಬಿಕೊಂಡು ಫೂತ್ಕರಿಸಿದಾಗ ಚದುರಿ ಹೊಮ್ಮಿದ ಹನಿಗಳೋ ಎಂಬ ರೀತಿಯಲ್ಲಿ ನಕ್ಷತ್ರಗಳು ಕಾಣಿಸಿದವು. ದೇವತೆಗಳು ಅಮೃತರಸವನ್ನು ಕುಡಿಯುವಾಗ ಉದುರಿದ ಹನಿಗಳೋ, ಆಕಾಶವನಿತೆಯು ಸೂಸಿದ ಮಂತ್ರಾಕ್ಷತೆಯ ಕಾಳುಗಳೋ ಎಂಬಂತೆ ತಾರೆಗಳು ಬೆಡಗನ್ನು ಬೀರಿದುವು. ಅತ್ಯಂತ ವಿಶಾಲವಾದ ಹಳೆಯ ಅಂಬರವು (ಬಟ್ಟೆಯು) ಹರಿದುಹೋಗಬಹುದೆಂದು ಬ್ರಹ್ಮನು ಆಲೋಚಿಸಿ ಅದನ್ನು ಭದ್ರಗೊಳಿಸಲು ಬೆಳ್ಳಿಯ ಹೊಲಿಗೆಗಳನ್ನು ಅಲ್ಲಲ್ಲಿ ಹಾಕಿದನೋ ಎಂಬಂತೆ ನಕ್ಷತ್ರಗಳು ಮೋಹಕವಾಗಿ ಕಾಣಿಸಿದುವು.

ಸೂರ್ಯನು ಅಸ್ತಮಿಸಿದ, ಸಂಧ್ಯೆಯ ಹೊಂಬೆಳಕೂ ಹೋಯಿತು, ಕಗ್ಗತ್ತಲೆ ಆವರಿಸಿತು, ನಕ್ಷತ್ರಗಳ ಹೊಳಪಿನಲ್ಲಿ ಮನ್ಮಥಬಾಧೆಯಿಂದ ತಾವರೆಗಳನ್ನು ಕಂಡು ಚಕ್ರವಾಕಗಳು ಅಳುತ್ತಿರಲು, ತಮ್ಮ ಒಲವು ಸಫಲವಾಗುವುದೆಂದು ಜಾರೆಯರು ಸಡಗರದಿಂದ ಸಿಂಗರಿಸಿಕೊಂಡು ಸಂಕೇತಸ್ಥಾನಗಳಿಗೆ ಹೋಗಲು ಸಿದ್ಧರಾದರು! ಕಣ್ಣಿನ ಹೊಳಪು ಸೂಸದಂತೆ, ನಗುಮುಖದಲ್ಲಿ ಮೂಡಿದ ಬೆಳ್ದಿಂಗಳು ಹೊಮ್ಮದ ಹಾಗೆ, ಹಂಸದಂತಹ ನಡಿಗೆಯ ಸದ್ದು ಕೇಳಿಸದ ಹಾಗೆ, ದೇಹಕಾಂತಿಯು ಹರಡಿಕೊಳ್ಳದ ಹಾಗೆ ಉಪಾಯದಿಂದ ಸಿಂಗಾರದ ನೀಲಪಟವನ್ನು ಮುಸುಕಿಟ್ಟುಕೊಂಡು ಒಬ್ಬ ಅಂಗನಾಮಣಿಯು ಕತ್ತಲೆಯನ್ನು ಹೊಕ್ಕಾಗ ಮಸೆದ ಕಾಮಬಾಣಗಳನ್ನು ಬತ್ತಳಿಕೆಯಲ್ಲಿ ಸೇರಿಸಿದರೋ ಎಂಬಂತೆ ಶೋಭಿಸಿತು. ಚಂದ್ರನಂತಹ ಹಣೆಯಲ್ಲಿ ಕಸ್ತೂರಿ ತಿಲಕವನ್ನಿಟ್ಟು ತುರುಬಿನಲ್ಲಿ ಕನ್ನೈದಿಲೆಯ ಹೂವನ್ನು ಮುಡಿದು, ತನ್ನ ಸುಂದರ ದೇಹದ ಅಂಗಗಳಲ್ಲಿ ಸುರುಚಿರವಾದ ಒಡವೆಗಳನ್ನು ಧರಿಸಿ, ಮಿಂಚಿನ ಬೆಳಕನ್ನು ಸೂಸುವ ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿ, ಯಾರಿಗೂ ಗೊತ್ತಾಗದ ರೀತಿಯಲ್ಲಿ ಜಾರೆಯೊಬ್ಬಳು ಮೆಲ್ಲನೆ ಬರಲು ಅವಳನ್ನು ಕಂಡ ಆಣ್ಮನು ಕೈಹಿಡಿದುಕೊಂಡು ಕರೆದೊಯ್ಯಲು ದರ್ಪಕನ ದರ್ಪ ಹೆಚ್ಚಿತ್ತು. ಹರಿತವಾದ ಉಗುರುಗುರುತುಗಳು ನಾಟದಂತೆ ಕುಚಗಳನ್ನು ಹಿಡಿದುಕೋ, ಹಲ್ಲುಗಳು ತಾಕದ ಹಾಗೆ ಮುತ್ತನ್ನಿಡು, ಬಾಸುಳವು ತೋರದ ರೀತಿಯಲ್ಲಿ ಬೆರಳಿನಿಂದ ಹೊಡೆ, ಮಾತಿನ ಸಪ್ಪುಳ ಕೇಳಿಸದಂತೆ ಮಾರನ ಉರುಬೆಯನ್ನು ತೀರಿಸಿ ಮನೆಗೆ ಕಳಿಸು, ಯಾಕೆಂದರೆ ನನಗೆ ಓರಗಿತ್ತಿ ಸವತಿ ಅತ್ತಿಗೆಯರ ಕಾಟ ಹೆಚ್ಚು ಎಂದು ಹೇಳಿ ಒಬ್ಬ ಜಾರೆಯು ಪ್ರಿಯಕರನ ಅಪ್ಪುಗೆಯಿಂದ ಬೇಗ ಜಾರಿಕೊಂಡಳು. ಬೆವರುವ ಮೈಬಳ್ಳಿ, ಬೆದರುವ ನೋಟ, ನಡುಗುವ ಕೈಕಾಲುಗಳು, ಗದ್ಗದಿಸುವ ಕಂಠ, ವಿಮಲವದನವು ಕತ್ತಲಲ್ಲಿ ಬೆರೆಯುತ್ತಿದ್ದ ಹೊಸಬಳಾದ ಜಾರೆಯನ್ನು ರಮಣನು ನೋಡಿ ಮುಗ್ಗಿ ಬಾ ಎಂದು ಸಮಾಧಾನಪಡಿಸುತ್ತ ಆಸೆಯನ್ನು ತೀರಿಸಿ, ಭಯವನ್ನು ಹೋಗಲಾಡಿಸಿ ಕಳಿಸಿದ ರಮಣನ ಕೌಶಲವನ್ನು ಹೇಗೆ ಬಣ್ಣಿಸುವುದು! ಕವಿದ ಕತ್ತಲೆಯಲ್ಲಿ ಈ ಪರಿಯ ನಾನಾ ಬಗೆಯ ವ್ಯವಹಾರಗಳನ್ನು ಮಾಡುವ ಜನರನ್ನು ನೋಡಿದ ಮಾರುತಿಯು, ತವಕದಿಂದ ಪತಿಕಾರ್ಯವನ್ನು ಮಾಡಬೇಕಾದ ಈ ಸನ್ನಿವೇಶದಲ್ಲಿ ಅಲಸನಾದರೆ ರಾಕ್ಷಸರು ಓಡಾಡುತ್ತ ಬಂದು ನನ್ನನ್ನು ಕಾಣಬಹುದು, ಕೋಪದಿಂದ ಹಿಡಿದುಕೊಂಡು ಕೆಲಸವನ್ನು ಕೆಡಿಸದೆ ಇರರು, ಇದಕ್ಕೇನು ಉಪಾಯ ಮಾಡಲಿ ಎಂದು ಯೋಚಿಸಿದ.

ಮುಂದುವರಿಯುವುದು...

---

ಭಾರತೀಯ ಮಣ್ಣಿನ ಕುಸ್ತಿಯ ಇತಿಹಾಸದಲ್ಲಿ ಲಂಗೋಟಿ ಎಂಬುದು ಕೇವಲ ಒಂದು ವಸ್ತ್ರವಲ್ಲ; ಅದು ಪೈಲ್ವಾನನ ಬ್ರಹ್ಮಚರ್ಯ, ಶಿಸ್ತು ಮತ್ತು ಆತ್ಮವಿಶ್ವಾಸದ ಸಂಕೇತ. ಅಖಾಡದ ಧೂಳಿನಲ್ಲಿ ಬೆವರು ಸುರಿಸುವ ಪಟುಗಳಿಗೆ ಶಕ್ತಿ ಎಷ್ಟು ಮುಖ್ಯವೋ, ಚರ್ಮದ ಆರೋಗ್ಯವೂ ಅಷ್ಟೇ ಪ್ರಮುಖವಾದುದು. ಆದರೆ, ಮಣ್ಣಿನ ಅಖಾಡದಲ್ಲಿ ಗಂಟೆಗಟ್ಟಲೆ ನಿರಂತರವಾಗಿ ನಡೆಸುವ ಕಸರತ್ತು ಮತ್ತು ಬೆವರಿನ ಕಾರಣದಿಂದಾಗಿ ಲಂಗೋಟಿಯ ಸರಿಯಾದ ನಿರ್ವಹಣೆ ಮಾಡದಿದ್ದಲ್ಲಿ ಚರ್ಮದ ಗಂಭೀರ ತೊಂದರೆಗಳು ಎದುರಾಗುವುದುಂಟು. ಇದನ್ನು ಮೆಟ್ಟಿನಿಂತು ಶರೀರದ ಸೌಂದರ್ಯ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ಗರಡಿ ಮನೆಯ ಅಲಿಖಿತ ಮತ್ತು ಕಟ್ಟುನಿಟ್ಟಾದ ನಿಯಮಗಳಲ್ಲಿ ಒಂದಾಗಿದೆ.

# ಪೈಲ್ವಾನರ ಚರ್ಮದ ಆರೋಗ್ಯ ನೈರ್ಮಲ್ಯ ಸೂತ್ರಗಳು



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು


ಅಖಾಡದ ತೀವ್ರ ಕಸರತ್ತಿನ ವೇಳೆ ಪೈಲ್ವಾನನ ದೇಹದಿಂದ ಹೇರಳವಾಗಿ ಬೆವರು ಸುರಿಯುತ್ತದೆ. ಲಂಗೋಟಿ ಬಿಗಿಯಾಗಿರುವುದರಿಂದ ತೊಡೆಗಳ ಸಂಧಿಯಲ್ಲಿ ಗಾಳಿಯಾಡದೆ ಅತಿಯಾದ ತೇವಾಂಶ ಜಮೆಯಾಗುತ್ತದೆ. ಇದು ರಿಂಗ್ ವರ್ಮ್ (ತಾಮರೆ), ಜೋಕ್ ಇಚ್ ನಂತಹ ಶಿಲೀಂದ್ರ ಸೋಂಕುಗಳಿಗೆ ಸುಲಭವಾಗಿ ದಾರಿ ಮಾಡಿಕೊಡುತ್ತದೆ.ಚರ್ಮ ಕೆಂಪಾಗುವುದು, ಅತಿಯಾದ ತುರಿಕೆ ಮತ್ತು ಕಪ್ಪು ಕಲೆಗಳು ಉಂಟಾಗುವುದು ಇದರ ಪ್ರಮುಖ ಲಕ್ಷಣಗಳಾಗಿವೆ.

ಕುಸ್ತಿಯಲ್ಲಿ ನಿರಂತರವಾಗಿ ಓಡುವಾಗ ಅಥವಾ ವಿವಿಧ ಪಟ್ಟುಗಳನ್ನು ಹಾಕುವಾಗ ದಪ್ಪನೆಯ ಹತ್ತಿ ಬಟ್ಟೆಯ ಲಂಗೋಟಿ ಮತ್ತು ಚರ್ಮದ ನಡುವೆ ಉಂಟಾಗುವ ಘರ್ಷಣೆಯಿಂದ ಚರ್ಮ ಸವೆದು ಉರಿ ಕಾಣಿಸಿಕೊಳ್ಳಬಹುದು.

ಮಣ್ಣಿನ ಕಣಗಳು ಬಟ್ಟೆ ಮತ್ತು ಚರ್ಮದ ನಡುವೆ ಸಿಲುಕಿದಾಗ ಈ ಘರ್ಷಣೆ ಇನ್ನು ಹೆಚ್ಚಾಗಿ ಕಚ್ಚೆವ್ರಣ ಎಂದು ಕರೆಯಲಾಗುವ ಸಣ್ಣ ಸಣ್ಣ ಗಾಯಗಳಿಗೆ ಕಾರಣವಾಗುತ್ತದೆ.

ಅಖಾಡದ ಮಣ್ಣಿನಲ್ಲಿರುವ ಸೂಕ್ಷ್ಮಾಣುಜೀವಿಗಳು ಬೆವರಿನೊಂದಿಗೆ ಸೇರಿ ಚರ್ಮದ ರಂಧ್ರಗಳನ್ನು ಮುಚ್ಚಿದಾಗ ಬೆವರು ಗುಳ್ಳೆಗಳು ಅಥವಾ ಕೀವು ತುಂಬಿದ ಮೊಡವೆಗಳು ಏಳುತ್ತವೆ. ನಮ್ಮ ಹಿರಿಯ ಪೈಲ್ವಾನರು ಇಂತಹ ಸಮಸ್ಯೆಗಳನ್ನು ಎದುರಿಸಲು ನೈಸರ್ಗಿಕ ಮತ್ತು ವೈಜ್ಞಾನಿಕ ಮಾರ್ಗಗಳನ್ನೇ ಅನುಸರಿಸುತ್ತಿದ್ದರು.

ಕುಸ್ತಿಯ ನಂತರ ಬಿಸಿ ನೀರಿಗೆ ಬೇವಿನ ಸೊಪ್ಪು ಮತ್ತು ಹರಿಶಿನವನ್ನು ಹಾಕಿ ಸ್ನಾನ ಮಾಡುವುದು ಪ್ರತಿಯೊಬ್ಬ ಪೈಲ್ವಾನನಿಗೆ ಕಡ್ಡಾಯವಾಗಿತ್ತು.



ಬೇವು ನೈಸರ್ಗಿಕ ಕ್ರಿಮಿನಾಶಕವಾದರೆ, ಹರಿಶಿನವು ಆಂಟಿಸೆಪ್ಟಿಕ್ ಆಗಿ ಕೆಲಸ ಮಾಡಿ ಚರ್ಮದ ಸೋಂಕನ್ನು ನಿವಾರಿಸುತ್ತದೆ. ಲಂಗೋಟಿ ಧರಿಸುವ ಮುನ್ನ ತೊಡೆಗಳ ಸಂಧಿಗೆ ಶುದ್ಧ ಕೊಬ್ಬರಿ ಎಣ್ಣೆ ಅಥವಾ ಸಾಸಿವೆ ಎಣ್ಣೆಯನ್ನು ಹಚ್ಚಿಕೊಳ್ಳುವುದರಿಂದ ಚರ್ಮದ ಘರ್ಷಣೆ ಮತ್ತು ಉರಿ ಕಡಿಮೆಯಾಗುತ್ತದೆ.

ಚರ್ಮದಲ್ಲಿ ಅತಿಯಾದ ಕೆಂಪಾದ ಕಲೆಗಳು ಕಾಣಿಸಿಕೊಂಡಾಗ ಶ್ರೀಗಂಧ ಅಥವಾ ಅಖಾಡದ ಹದ ಮಾಡಿದ ಮಣ್ಣನ್ನು ಲೇಪಿಸಿಕೊಳ್ಳುವುದು ಚರ್ಮಕ್ಕೆ ತಂಪು ನೀಡುವ ಉತ್ತಮ ವಿಧಾನವಾಗಿದೆ. ಚರ್ಮದ ಆರೋಗ್ಯ ಕಾಪಾಡಲು ಆಧುನಿಕ ಪೈಲ್ವಾನರೂ ಕೆಲವು ಶಿಸ್ತುಗಳನ್ನು ಪಾಲಿಸುವುದು ಅತ್ಯಗತ್ಯ. ಯಾವಾಗಲೂ ಶುದ್ಧ ಹತ್ತಿ ಬಟ್ಟೆಯ ಲಂಗೋಟಿಗಳನ್ನೇ ಬಳಸಬೇಕು, ಏಕೆಂದರೆ ಇದು ಬೆವರನ್ನು ಹೀರಲು ಮತ್ತು ಚರ್ಮಕ್ಕೆ ಗಾಳಿಯಾಡಲು ಅನುವು ಮಾಡಿಕೊಡುತ್ತದೆ.


ಒಗೆದ ಲಂಗೋಟಿಯನ್ನು ಕಡ್ಡಾಯವಾಗಿ ನೇರ ಸೂರ್ಯನ ಬೆಳಕಿನಲ್ಲಿಯೇ ಒಣಗಿಸಬೇಕು; ಸೂರ್ಯನ ಅತಿನೇರಳೆ ಕಿರಣಗಳು ಬಟ್ಟೆಯಲ್ಲಿರುವ ಹಾನಿಕಾರಕ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತವೆ. ಪ್ರತಿಯೊಬ್ಬ ಪೈಲ್ವಾನನೂ ಕನಿಷ್ಠ ಮೂರ್ನಾಲ್ಕು ಲಂಗೋಟಿಗಳನ್ನು ಹೊಂದಿರಬೇಕು. ಒದ್ದೆಯಾದ ಅಥವಾ ತೇವಾಂಶವಿರುವ ಲಂಗೋಟಿಯನ್ನು ಮತ್ತೆ ಧರಿಸುವುದು ಸೋಂಕಿಗೆ ಮೂಲ ಕಾರಣವಾಗುತ್ತದೆ.

ಲಂಗೋಟಿಯ ಪಾವಿತ್ರ್ಯತೆಯ ಜೊತೆಗೆ ಅದರ ಶುಚಿತ್ವವನ್ನೂ ಕಾಪಾಡಿಕೊಂಡಾಗ ಮಾತ್ರ ಪೈಲ್ವಾನನ ಶರೀರವು ಸುಂದರ, ಸದೃಢ ಮತ್ತು ಆರೋಗ್ಯವಂತವಾಗಿರುತ್ತದೆ. ಆರೋಗ್ಯವಂತ ಚರ್ಮವು ಒಬ್ಬ ಪೈಲ್ವಾನನ ಜಾಗರೂಕತೆ ಮತ್ತು ಶಿಸ್ತಿನ ನೈಜ ಪ್ರತಿಬಿಂಬವಾಗಿದೆ.

---

# ಮೂಳೆಗಳ ದುರ್ಬಲಕ್ಕೆ ಆಹಾರಕ್ರಮ ಪಾಲಿಸಿ

ಕ್ಯಾಲ್ಸಿಯಂ ನಮ್ಮ ದೇಹಕ್ಕೆ ಬೇಕಿರುವ ಒಂದು ಪ್ರಮುಖ ಖನಿಜ. ಕ್ಯಾಲ್ಸಿಯಂ ನಮ್ಮ ಮೂಳೆಗಳು ಹಾಗೂ ಹಲ್ಲುಗಳನ್ನು ಬಲವಾಗಿಡುವುದಲ್ಲದೆ, ರಕ್ತದೊತ್ತಡ ನಿಯಂತ್ರಿಸುವಲ್ಲಿ ಮತ್ತು ಸ್ನಾಯುಗಳ ಕಾರ್ಯ ಬೆಂಬಲಿಸುವ ಹಾಗೂ ನರ ಸಂಕೇತ ಪ್ರಸರಣವನ್ನು ಸುಗಮಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇದರ ಪರಿಣಾಮವಾಗಿ ದೇಹವು ಕ್ಯಾಲ್ಸಿಯಂ ಕೊರತೆಯಿಂದ ಬಳಲುತ್ತಿದ್ದರೆ ಇದು ದುರ್ಬಲ ಮೂಳೆಗಳಿಗೆ ಕಾರಣವಾಗುತ್ತದೆ ಹಾಗೂ ಇತರ ಹಲವಾರು ಆರೋಗ್ಯ ಸಮಸ್ಯೆಗಳ ಹೊರಹೊಮ್ಮುವಿಕೆಗೆ ಕಾರಣವಾಗುತ್ತದೆ. ಕೆಲವು ರೀತಿಯ ಆಹಾರಗಳು ದೇಹದ ಕ್ಯಾಲ್ಸಿಯಂ ಮಟ್ಟ ಕಡಿಮೆ ಮಾಡುತ್ತದೆ. ಇದರಿಂದಾಗಿ ಮೂಳೆಗಳು ಮತ್ತಷ್ಟು ದುರ್ಬಲಗೊಳ್ಳುತ್ತವೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ.



**ಮದ್ಯಪಾನ**

**ಅತಿಯಾದ ಮದ್ಯಪಾನವು ಮೂಳೆಗಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಕ್ಯಾಲ್ಸಿಯಂ ಹೀರಿಕೊಳ್ಳುವ ದೇಹದ ಸಾಮರ್ಥ್ಯವನ್ನು ಕಡಿಮೆ ಮಾಡುವುದರೊಂದಿಗೆ ಮದ್ಯಪಾನವು ಮೂಳೆಗಳನ್ನು ದುರ್ಬಲಗೊಳಿಸುತ್ತದೆ. ಇದು ಮೂಳೆಗಳು ದುರ್ಬಲವಾಗಲು ಕಾರಣವಾಗುತ್ತದೆ. ಇದರಿಂದಾಗಿ ಮೂಳೆ ಮುರಿತದ ಅಪಾಯ ಹೆಚ್ಚಾಗುತ್ತದೆ.**

**ತಂಪು ಪಾನೀಯಗಳು:** ಪಾನೀಯಗಳ ಅತಿಯಾದ ಸೇವನೆಯು ಕ್ಯಾಲ್ಸಿಯಂ ಕೊರತೆಗೆ ಕಾರಣವಾಗಬಹುದು. ಈ ಪಾನೀಯಗಳಲ್ಲಿರುವ ಫಾಸ್ಪರಿಕ್ ಆಮ್ಲವು ಕ್ಯಾಲ್ಸಿಯಂ ಹೀರಿಕೊಳ್ಳುವ ದೇಹದ ಸಾಮರ್ಥ್ಯಕ್ಕೆ ಅಡ್ಡಿಪಡಿಸುತ್ತದೆ ಎಂದು ವರದಿಯಾಗಿದೆ. ಇದರ ಪರಿಣಾಮವಾಗಿ ಮೂಳೆಗಳೊಳಗಿನ ಕ್ಯಾಲ್ಸಿಯಂ ಮಟ್ಟಗಳು ಕಾಲಾನಂತರದಲ್ಲಿ ಕ್ರಮೇಣ ಕಡಿಮೆಯಾಗುತ್ತವೆ.

**ಕೆಂಪು ಮಾಂಸ ಸಂಸ್ಕರಿಸಿದ ಮಾಂಸ:** ಈ ಆಹಾರಗಳ ಅತಿಯಾದ ಸೇವನೆಯು ದೇಹದಲ್ಲಿ ಯೂರಿಕ್ ಆಮ್ಲದ ಮಟ್ಟವನ್ನು ಹೆಚ್ಚಿಸಲು ಕಾರಣವಾಗುತ್ತದೆ. ಇದು ಮೂಳೆಯ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ತಜ್ಞರು ಹೇಳುತ್ತಾರೆ. ಈ ಆಹಾರ ಪದಾರ್ಥಗಳು ಕ್ಯಾಲ್ಸಿಯಂ ಅನ್ನು ಹೀರಿಕೊಳ್ಳುವ ದೇಹದ ಸಾಮರ್ಥ್ಯವನ್ನು ಅಡ್ಡಿಪಡಿಸುತ್ತವೆ. ಇದರಿಂದಾಗಿ ಮೂಳೆಗಳು ದುರ್ಬಲಗೊಳ್ಳುತ್ತವೆ.

**ಸಿಹಿತಿಂಡಿಗಳು ಬೇಯಿಸಿದ ಸರಕುಗಳು:** ಕೇಕ್‌ಗಳು, ಕ್ಯಾಂಡಿಗಳು ಹಾಗೂ ಕುಕೀಗಳಂತಹ ವಸ್ತುಗಳು ಸಕ್ಕರೆ, ಸಂಸ್ಕರಿಸಿದ ಕಾರ್ಬೋಹೈಡ್ರೇಟ್‌ಗಳಲ್ಲಿ ಅಧಿಕವಾಗಿರುತ್ತವೆ. ಈ ವಸ್ತುಗಳು ದೇಹದ ಕ್ಯಾಲ್ಸಿಯಂ ಹೀರಿಕೊಳ್ಳುವ ಸಾಮರ್ಥ್ಯಕ್ಕೆ ಅಡ್ಡಿಪಡಿಸುತ್ತವೆ. ಇದಲ್ಲದೆ, ಈ ಆಹಾರಗಳು ದೇಹದೊಳಗೆ ಉರಿಯೂತ ಉಂಟುಮಾಡಬಹುದು. ಮೂಳೆಗಳನ್ನು ಮತ್ತಷ್ಟು ದುರ್ಬಲಗೊಳಿಸಬಹುದು.

**ಚಹಾ:** ಚಹಾದಲ್ಲಿ ಕೆಫೀನ್ ಇದ್ದು, ಇದು ದೇಹದ ಕ್ಯಾಲ್ಸಿಯಂ ಹೀರಿಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ. ಅತಿಯಾದ ಚಹಾ ಸೇವನೆಯು ಮೂಳೆಗಳ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಹೆಚ್ಚಿನ ಕೆಫೀನ್ ಅಂಶವಿರುವ ಚಹಾ ಅಥವಾ ಕಾಫಿಗಳು ಮೂಳೆಗಳಿಂದ ಕ್ಯಾಲ್ಸಿಯಂ ಸೋರಿಕೆಗೆ ಕಾರಣವಾಗಬಹುದು. ಇದರ ಪರಿಣಾಮವಾಗಿ ಇದು ಮೂಳೆಗಳು ದುರ್ಬಲಗೊಳ್ಳಲು ಕಾರಣವಾಗುತ್ತದೆ.

---


# ಮಹಿಳೆಯು ಪುರುಷರಂತೆ ಸಂಘ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿ ಯಶಸ್ವಿಯಾಗಿಹರು



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ ಹಾಸನ್
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

ಗ್ರಾಮೀಣ ಭಾಗದ ಕಲೆ, ಕ್ರೀಡೆ, ಸಂಸ್ಕೃತಿ ಉಳಿವಿಗಾಗಿ ಸಂಸ್ಥೆ ಹಗಲಿರುಳು ಶ್ರಮಿಸುತ್ತಿದೆ. ಮನೆಯಲ್ಲಿ ಮಾಡುವಂತ ಕೆಲಸ ಅಂದರೆ ಟೈಲರಿಂಗ್, ತೋರಣಗಳನ್ನು ಮಾಡುವ ವಿನೂತನ ಕಾರ್ಯಕ್ರಮಗಳ ಮೂಲಕ ವೇದಿಕೆಯನ್ನು ಒದಗಿಸಿ ಮಹಿಳೆಯಲ್ಲಿರುವ ಪ್ರತಿಭೆಯನ್ನು ಹುಡುಕುವ ಪ್ರಯತ್ನ ಮಾಡುತ್ತಿದೆ. ಅವರಲ್ಲಿರುವ ಕಲೆಗೆ ಪ್ರೋತ್ಸಾಹ ನೀಡಿ ಮುಖ್ಯ ವಾಹಿನಿಗೆ ಪರಿಚಯಿಸುತ್ತಿದೆ. ಈ ರೀತಿ ಕಾರ್ಯಗಳನ್ನು ಮಾಡುವುದರಿಂದ ಎಲೆಮರೆಕಾಯಿ ಅಂತಹ ಪ್ರತಿಭೆಗಳನ್ನು ಜಗತ್ತಿಗೆ ತೋರಿಸುವ ಕೆಲಸವಾಗುವುದರ ಜೊತೆಗೆ ಇತರರಿಗೆ ಪ್ರೇರಣೆಯಾಗುತ್ತದೆ. ಹಲವು ಜಿಲ್ಲೆಯಾದ್ಯಂತ ರಕ್ತದಾನ ಶಿಬಿರ, ಸ್ವಚ್ಛತಾ ಕಾರ್ಯಕ್ರಮ, ಶ್ರಮದಾನ, ಯುವಕ ಯುವತಿಯರಿಗೆ ಸಂಘ ಸಂಸ್ಥೆಗಳ ರಚನಾ ಕಾರ್ಯ, ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ ಆಯೋಜಿಸಿ ಯುವ ಸಮೂಹವನ್ನು ಸಮಾಜದೊಡನೆ ಬೆರೆಸುತ್ತಿದೆ. ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಶಾಲಾ-ಕಾಲೇಜುಗಳಲ್ಲಿ ಪ್ರತಿಭಾ ಪುರಸ್ಕಾರ, ಪ್ರಬಂಧ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಉಪನ್ಯಾಸದಂತ ಕಾರ್ಯಕ್ರಮ ಆಯೋಜಿಸಿ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಯುವ ಸಮೂಹವನ್ನು ಒಗ್ಗೂಡಿಸುತ್ತಿದೆ.



ನೊಂದವರಿಗೆ ಆಸರೆಯಾಗಿ ಮಹಿಳೆಯರ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಮಹಿಳೆಯರು ಬರೀ ಅಡುಗೆ ಮನೆಗೆ ಸೀಮಿತವಾಗಬಾರದು. ಸಮಾಜದೊಡನೆ ಅರಿತು ಬೆರೆತು ಮುಖ್ಯ ವೇದಿಕೆಯಲ್ಲಿ ಪರಿಚಯವಾಗಬೇಕೆಂಬ ತುಡಿತದಿಂದ ಮಹಿಳೆಯರಿಗೆ ತರಬೇತಿ ಶಿಬಿರ, ಸಾಂಸ್ಕೃತಿಕ ಚಟುವಟಿಕೆಗಳನ್ನು ಹಾಗೂ ಆರ್ಥಿಕ ಉಳಿತಾಯದ ಹಲವು ಕಾರ್ಯಕ್ರಮ ಆಯೋಜಿಸಿದೆ. ಸ್ವಾವಲಂಬಿ ಜೀವನ ಸಾಗಿಸುತ್ತಿರುವ ಮಹಿಳೆಯರಿಗೆ ಪ್ರೋತ್ಸಾಹ ನೀಡಿ ಗೌರವಿಸುತ್ತಿದೆ. ಸರಕಾರಿಯ ಅದೆಷ್ಟೋ ಯೋಜನೆಗಳು ಗ್ರಾಮೀಣ ಭಾಗದ ಜನತೆಗೆ ಇನ್ನೂ ತಲುಪಿಲ್ಲ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮಹಿಳೆಯರಿಗೆ ಸಿಗುವ ಸೌಲಭ್ಯಗಳು ಹಾಗೂ ಶಿಕ್ಷಣದಿಂದ ವಂಚಿತರಾದ ಮಹಿಳೆಯರು ಮತ್ತು ಮಕ್ಕಳಿಗೆ ಸಾಕ್ಷರತೆಯ ಅರಿವು ಮೂಡಿಸುತ್ತಿದೆ. ಅಲೆಮಾರಿ, ಬುಡಕಟ್ಟು ಹಾಗೂ ವಲಸೆ ಕಾರ್ಮಿಕರರಿಗೆ ಮತ್ತು ಮಕ್ಕಳಿಗೆ ಸ್ವಚ್ಛತೆ, ಶಿಕ್ಷಣಕ್ಕೆ ಪೂರಕವಾದ ಅನೇಕ ಕಾರ್ಯಕ್ರಮವನ್ನು ಹಲವಾರು ಭಾಗದಲ್ಲಿ ಆಯೋಜಿಸಲಾಗಿದೆ. ಮಹಿಳೆಯರಿಗೆ ಇರುವ ಆರೋಗ್ಯ ತೊಂದರೆಯನ್ನು ವಿಚಾರಿಸಿ ಸ್ಯಾನಿಟರಿ ಪ್ಯಾಡ್ ಮತ್ತು ಬಟ್ಟೆಗಳನ್ನು ವಿತರಿಸುತ್ತಿದ್ದಾರೆ. ಮಕ್ಕಳಿಗೆ ಪೆನ್ನು, ಪಾಠಿ, ಪೆನ್ಸಿಲ್, ನೋಟ್‌ಬುಕ್ ನೀಡಿ ಅಕ್ಷರ ಜ್ಞಾನಕ್ಕೆ ಒತ್ತು ನೀಡುತ್ತಿದೆ ಈ ಸಂಸ್ಥೆ. ಅಷ್ಟೇ ಅಲ್ಲದೆ ಗ್ರಾಮೀಣ ಭಾಗದ ಮಹಿಳೆಯರು ಸಣ್ಣ ಉಳಿತಾಯದ ಮೂಲಕ ಜೀವನ ಭದ್ರತೆ ಹಾಗೂ ಮಕ್ಕಳ ಭವಿಷ್ಯಕ್ಕೆ ಯೋಜನೆಯನ್ನು ರೂಪಿಸುತ್ತಿದೆ.

ಅಂಗವಿಕಲರು ಹಾಗೂ ವಿದ್ಯಾರ್ಥಿಗಳಿಗೆ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ವಿಶೇಷ ಚೇತನರನ್ನು ಗುರುತಿಸಿ ಅವರಲ್ಲಿನ ಕೌಶಲ್ಯಗಳನ್ನು ಹುಡುಕಿ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಮಕ್ಕಳ ಭವಿಷ್ಯಕ್ಕೆ ಪೂರಕವಾಗಿ ಉಪನ್ಯಾಸ ಕಾರ್ಯಕ್ರಮ ಕಾನೂನು ಅರಿವು, ವ್ಯವಹಾರ ಜ್ಞಾನ ತಿಳಿಸಲು ಮಕ್ಕಳ ಸಂತೆಗಳನ್ನು ನಡೆಸಲಾಗುತ್ತಿದೆ. ಮಹಿಳೆಯರಿಗೆ ಮತ್ತು ಮಕ್ಕಳಿಗೆ ಆರೋಗ್ಯ ಕುರಿತಂತೆ ಮನೆಮದ್ದು ಕಾರ್ಯಕ್ರಮವನ್ನು ಹಮ್ಮಿಕೊಂಡು ಆರೋಗ್ಯ ಕಡೆ ಗಮನ ಹರಿಸುವಂತೆ ಮಾಡಿದೆ. ಮಹಿಳೆಯರಿಗೆ ಹೊಲಿಗೆ ತರಬೇತಿ, ಕಂಪ್ಯೂಟರ್ ತರಬೇತಿ,ಕೃಷಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಪ್ರಧಾನಿಯವರ ಕನಸಿನಂತೆ ಸ್ವಚ್ಛ ಭಾರತ ನಿರ್ಮಾಣ ಮಾಡುವಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಅನೇಕ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡು ಯುವಕರಿಗೆ ಶ್ರಮದಾನದ ಮಹತ್ವ ಸಾರುತ್ತಾ, ಪ್ಲಾಸ್ಟಿಕ್ ಬಳಕೆ ಹಾಗೂ ಮರು ಬಳಕೆಯ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಮೀಣ ಭಾಗದ ದೇವಾಲಯ, ಸ್ಮಾರಕಗಳ ಸ್ವಚ್ಛತಾ ಕಾರ್ಯ ಮಾಡಿ ಸೈ ಎನಿಸಿಕೊಂಡಿದೆ. ಇದು ನಮ್ಮ ಮಹಿಳಾಪರಾ ಸಂಘ ಸಂಸ್ಥೆಗಳ ಕೊಡುಗೆಯಾಗಿದೆ.ರಾಷ್ಟ್ರೀಯ ಮಟ್ಟದಲ್ಲಿ ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ನಿಟ್ಟಿನಲ್ಲಿ ಈಚೆಗೆ ದೆಹಲಿಯಲ್ಲಿ ರಾಷ್ಟ್ರೀಯ ಮಹಿಳಾ ಸಮ್ಮೇಳನವನ್ನು ಆಯೋಜಿಸಿ ಅನೇಕ ಸಾಧಕರ ಯಶೋಗಾಥೆಯನ್ನು ತಿಳಿಸುವ ಪ್ರಯತ್ನ ಮಾಡಿದೆ. ಕಲೆ, ಸಂಸ್ಕೃತಿ, ಸಂಪ್ರದಾಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸುವ ಗುರಿಯನ್ನು ಹೊಂದಿದ್ದು, ರಾಷ್ಟ್ರ ಮಟ್ಟದಲ್ಲೂ ಉಪನ್ಯಾಸ ಕಾರ್ಯಕ್ರಮ ಆಯೋಜಿಸಿ 'ಮಹಿಳೆಯರು ಅಬಲೆಯರಲ್ಲ ಸಬಲೆಯರು' ಎನ್ನುವ ಸಂದೇಶವನ್ನು ಸಾರಿದೆ. ನಾಡು, ನುಡಿ, ನೆಲ, ಜಲದ ರಕ್ಷಣೆಯಲ್ಲೂ ಕೂಡ ಸಂಸ್ಥೆ ಅನೇಕ ಅಭಿಯಾನ, ಕಾರ್ಯಕ್ರಮ ಆಯೋಜಿಸಿದೆ. ಕನ್ನಡ ರಾಜ್ಯೋತ್ಸವ, ನೀರು ನೈರ್ಮಲ್ಯ, ನೈಸರ್ಗಿಕ ಸದ್ಬಳಕೆ ಜತೆ ನಾನಾ ವಿಚಾರಗಳನ್ನು ಜನರಿಗೆ ತಲುಪಿಸುತ್ತಿದೆ. ನಾಡು ನುಡಿಗಾಗಿ ದುಡಿದವರನ್ನು ಸ್ಮರಿಸಿ ಗೌರವಿಸಿದೆ.

ಯೋಧರು, ರೈತರು, ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಿಸಿ ಅವರ ದೇಶಾಭಿಮಾನದ ಪ್ರೀತಿಯನ್ನು ಯುವ ಸಮೂಹಕ್ಕೆ ಪರಿಚಯಿಸುತ್ತಿದೆ. ನಮ್ಮ ಸಮಾಜದಲ್ಲಿ ಇಂದು ಮಹಿಳೆಯರು ಪ್ರಬಲವಾಗಿ ಬೆಳೆಯುತ್ತಿದ್ದಾರೆ. ತಮ್ಮದೇ ಆದಂತಹ ಪ್ರತಿಭೆಗಳನ್ನು ತೋರಿಸುತ್ತಾ ದಿಟ್ಟ ನಾರಿಯರಾಗಿ ಹೊರಹೊಮ್ಮುತ್ತಿದ್ದಾರೆಅಂತವರಿಗೆ ಸಮಾಜದ ಮತ್ತು ಸರ್ಕಾರದ ಸಹಕಾರ ಬೇಕಾಗಿದೆ ಸಮಾಜದಲ್ಲಿ ತುಳಿತಕ್ಕೊಳಗಾದ ಮಂಗಳಮುಖಿ ಸಮುದಾಯದ ನೋವನ್ನಾಲಿಸಿ ಅವರಿಗೂ ಸಮಾಜ ಗೌರವಿಸಬೇಕೆಂಬ ಉದ್ದೇಶದಿಂದ ಉಡಿ ತುಂಬಿ ಗೌರವಿಸಿದೆ. ಬಟ್ಟೆಗಳನ್ನು ನೀಡಿ ಪ್ರೋತ್ಸಾಹ ನೀಡಿದೆ. ಅವರಲ್ಲಿರುವ ಕಲೆಗೆ ವೇದಿಕೆಯನ್ನು ಒದಗಿಸಿದೆ.

ಒಟ್ಟಾರೆಯಾಗಿ ಸರಕಾರದ ಅದೆಷ್ಟೋ ಯೋಜನೆಗಳು ಅರ್ಹರ ಕೈಸೇರದೆ ದಾರಿತಪ್ಪಿವೆ. ಇಂತಹ ಸಂಸ್ಥೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡಿದರೆ ಸಮಾಜ ಮತ್ತಷ್ಟು ಸುಧಾರಣೆಯಾಗುತ್ತದೆ ಎಂಬುದು ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ (ರಿ) ಕರ್ನಾಟಕ ದ ಆಶಯ. ಮಹಿಳೆ ಸಹ ಪುರುಷರಷ್ಟೆ ಸಮಾನರು. ಅವರು ಕೂಡ ಮುಖ್ಯ ವಾಹಿನಿಗೆ ಪರಿಚಯವಾಗಿ ಸಮಾಜದೊಟ್ಟಿಗೆ ಬೆರೆತು ಸಮಾಜವನ್ನು ಮುನ್ನಡೆಸುವ ಶಕ್ತಿಯಾಗಬೇಕೆಂಬುದೆ ನಮ್ಮ ಆಶಯ .

---

# ಸಾವೊಂದು ನಿದ್ರೆ ಹೋಯ್ತು ,ಆತ್ಮವೊಂದು ದಾರಿ ಹಿಡಿತು

**ಸಾವಿನ ನಂತರ ಜೀವ ಎಲ್ಲಿಗೆ ಹೋಗುತ್ತದೆ? ಸ್ವರ್ಗ ನರಕಗಳು ಇರುವುದು ನಿಜವೇ? ಇತ್ಯಾದಿ ಕುತೂಹಲ ಎಲ್ಲಾ ದೇಶಕಾಲಗಳ ಮನುಷ್ಯರನ್ನೂ ಕಾಡಿದೆ. ಹಾಗೆಂದೇ ಬಹುತೇಕ ಎಲ್ಲಾ ಮತ ಪಂಥಗಳು, ಜನಪದ ನಾಗರಿಕತೆಗಳು ಈ ಬಗ್ಗೆ ತಮ್ಮದೇ ವಿವರಗಳನ್ನು ನೀಡಲು ಯತ್ನಿಸಿವೆ. ಅಂಥವುಗಳಲ್ಲಿ ನಮ್ಮ ಗರುಡಪುರಾಣವೂ ಒಂದು. ಈ ಲೇಖನದಲ್ಲಿ ಗರುಡಪುರಾಣದಲ್ಲಿ ಹೇಳಲಾಗಿರುವಂತೆ ಸಾವಿನ ನಂತರ ಜೀವದ ಪ್ರಯಾಣ ಮತ್ತು ಅವಸ್ಥೆಯ ಬಗ್ಗೆ ಮಾಹಿತಿ ಇದೆ.**




ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಜೀವಿಯು ಗತಿಸಿದ ಮೇಲೆ ಒಂದು ವರ್ಷದ ಪರ್ಯಂತ ಧೀರ್ಘ ಪ್ರಯಾಣ ಮಾಡಿ ಯಮಲೋಕವನ್ನು ತಲುಪುವುದು. ದಿನಕ್ಕೆ 2470 ಯೋಜನದಂತೆ 86,000 ಯೋಜನ ದೂರದಲ್ಲಿ ಯಮಲೋಕವಿದೆ. ದೇಹ ತ್ಯಜಿಸಿದ 10 ದಿನಗಳವರೆಗೂ ಸ್ಥೂಲಕಾಯ ದಿಂದ( ದೇಹದಿಂದ) ಬೇರ್ಪಟ್ಟ ಜೀವಿಯು ಹಸ್ತ ಪ್ರಮಾಣದಷ್ಟೇ ಬೆಳೆಯುವನು. ಬಳಿಕ ಮುಂದೆ ಯಮಲೋಕದಲ್ಲಿ ಒಂದು ವರ್ಷದ ಬಳಿಕವಷ್ಟೇ ಅಂಗುಷ್ಠ ಪ್ರಮಾಣದಲ್ಲಿ ಬೆಳೆದು ಯಮಭೋಗವನ್ನು ಕರ್ಮಾನುಸಾರವಾಗಿ ಭೋಗಿಸುವನು.

**ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ ।**
**ಅಭುಕ್ತ್ವಾ ಯಾತನಾಂ ಜಂತುರ್ಮಾನುಷಂ ಲಭತೇ ನಹಿ ॥**

ನೂರು ಕೋಟಿಕಲ್ಪ ಕಾಲವಾದರೂ ಕರ್ಮಫಲವು ಅನುಭವಿಸಿದಲ್ಲದೇ ಅದು ಎಂದೆಂದೂ ಬಿಡದು. (ದೇವತೆಗಳಿಗೂ ಇದು ಬಿಟ್ಟಿಲ್ಲ. ಸ್ವತಃ ಯಮರಾಜನು ಅಣಿಮಾಂಡವ್ಯ ಋಷಿಗಳ ಶಾಪಕ್ಕೆ ತುತ್ತಾಗಿ ವಿದುರನಾಗಿ ಜನ್ಮವೆತ್ತಬೇಕಾಯಿತು). ಹಾಗೆಯೇ ಯಾತನೆಯನ್ನು ಅನುಭವಿಸದೆ ಜೀವಿಗೆ ಮನುಷ್ಯ ಜನ್ಮ ಲಭ್ಯವಿಲ್ಲ. ಸತ್ತ ಜೀವಿಗೆ ಪಿಂಡ ಪ್ರಧಾನ ಏಕೆಂದರೆ 10 ದಿನಗಳಲ್ಲಿ ಸೂಕ್ಷ್ಮ ದೇಹ ನಿರ್ಮಾಣವಾಗಿ ಜೀವಿಗೆ ಯಮಪುರಿ ಸೇರಲು ಶಕ್ತಿ ಸಿಗುವುದು. ಪಿಂಡ ಪ್ರಧಾನ ಕಾರ್ಯಗಳು ಮಾಡದಿದ್ದಲ್ಲಿ ಆತ್ಮವು ಪ್ರೇತವಾಗಿ ಅಲೆದಾಡಬೇಕಾಗುತ್ತದೆ ಎಂಬ ನಂಬಿಕೆ ಇದೆ.



ಬಹುತೇಕ ಜನಿವಾರಧಾರಿಗಳಲ್ಲಿ ಈ ಸಂಪ್ರದಾಯವಿರುತ್ತದೆ. ಉಳಿದಂತೆ ಆಯಾ ಜಾತಿ ಸಮುದಾಯಗಳು ತಮ್ಮ ಪರಂಪರಾನುಗತ ನಂಬಿಕೆಯ ಅನುಸಾರ ಹಾಲು ತುಪ್ಪ ಬಿಡುವುದೇ ಮೊದಲಾದ ಆಚರಣೆಗಳನ್ನು ನಡೆಸುತ್ತವೆ.

5 ನೇ ತಿಂಗಳಲ್ಲಿ ಯಮ ಕಿಂಕರರು ಜೀವಿಗೆ ದಾರಿ ಮಧ್ಯೆ ವಿಶ್ರಾಂತಿ ನೀಡುವರು. 6ನೇ ತಿಂಗಳಲ್ಲಿ ಆತ್ಮವು ವೈತರಣಿ ನದಿ ದಾಟುವುದು. (ದಕ್ಷನ ಯಜ್ಞದಲ್ಲಿ ದಾಕ್ಷಾಯಣಿಯು ದೇಹ ತ್ಯಾಗ ಮಾಡಿದಾಗ ಆ ನೋವಿನಲ್ಲಿ ರುದ್ರನು ಹರಿಸಿದ ಕಣ್ಣೀರಿನ ನದಿಯೇ ಈ ವೈತರಣಿ ನದಿಯಾಯಿತು ಎಂದು ಪ್ರತೀತಿ ಇದೆ). ಬಳಿಕ ಆತ್ಮವು ಯಮಪುರಿ ಸೇರುವುದು. ಇದೊಂದು ದೀರ್ಘ ಪ್ರಯಾಣವೇ ಹೌದು.

ಮೊದಲು ಮನುಷ್ಯನ ಕರ್ಮಾಕರ್ಮಗಳ ವಿಚಾರಣೆ ನಡೆಯುವುದು ಯಮಪುರಿಯಲ್ಲೇ. ನರಕದಲ್ಲೇ ಯಮಲೋಕವಿರುವುದು. ನರಕಗಳು ಭೂಮಿಯಿಂದ ದಕ್ಷಿಣ ದಿಕ್ಕಿಗೆ ನೀರಿನ ಮೇಲೆ ನಿಂತಿದೆ. ಇಲ್ಲಿಯೇ ಪಿತೃ ದೇವತೆಗಳ ವಾಸ.ಇಲ್ಲಿಂದಲೇ ಪಿತೃಗಳು ಕಾಲಕಾಲಕ್ಕೆ ತಮ್ಮ ವಂಶಜರು ನೀಡುವ ತರ್ಪಣಗಳನ್ನು ಸ್ವೀಕರಿಸಿ( ವರ್ಷಂ ಪ್ರತೀ ) ತಮ್ಮ ವಂಶದಲ್ಲಿ ಹುಟ್ಟುವವರಿಗೆ ಮಂಗಳವಾಗಲಿ ಎಂದು ಹರಸುತ್ತಿರುತ್ತಾರೆ.

ಯಮ ಧರ್ಮನು ನರಕಾಧಿಪತಿಯಾಗಿದ್ದು, ಮೃತ ಜೀವಿಗಳ ಪಾಪ ಪುಣ್ಯಗಳಿಗೆ ಅನುಗುಣವಾಗಿ ತಾಮಿಸ್ರ, ಅಂಧ ತಾಮಿಸ್ರ, ರೌರವ, ಮಹಾ ರೌರವ, ಕುಂಭಿಪಾಕ, ಕಾಲಸೂತ್ರ, ಅಸಿಪತ್ರವನ ಇತ್ಯಾದಿ21 ನರಕಗಳಲ್ಲಿ ಶಿಕ್ಷೆ ವಿಧಿಸುವನು. ಇದಲ್ಲದೇ ಜೀವಿಯು ಸೌಮ್ಯ, ಸೌರಿ ಪುರ, ನಗೇಂದ್ರ ಭವನ, ಕ್ರೌಂಚ, ವಿಚಿತ್ರ ಭವನ, ಶೀತಾಢ್ಯ,ಬಹುಭೀತಪುರ, ಧರ್ಮ ಭವನ ಇತ್ಯಾದಿ ಫಲಗಳನ್ನು ಅನುಭವಿಸಿ ಬಳಿಕ ಪುಣ್ಯಾಂಶಗಳಿಗೆ ಅನುಸಾರವಾಗಿ ಸ್ವರ್ಗಕ್ಕೆ( ವೈಕುಂಠ ಅಥವಾ ಕೈಲಾಸ) ಕ್ಕೆ ತೆರಳುವುದು. ಬಳಿಕ ಸ್ವರ್ಗದಲ್ಲಿ ಪುಣ್ಯಾಂಶ ಅನುಭವಿಸಿದ ಬಳಿಕ ನಿಗದಿತ ಯೋನಿಯೊಂದರಲ್ಲಿ ಮತ್ತೆ ಕರ್ಮಾನುಸಾರ ಭೂಮಿಗೆ ಮರಳುವುದು. ಇಲ್ಲಿಗೆ ಜೀವಿಯ ಜನನ ಮರಣ ಚಕ್ರದ ಒಂದು ಸುತ್ತು ಮುಗಿದು ಇನ್ನೊಂದರ ಆರಂಭವಾಗುವುದು !

**ಓಂ ನಮೋ ಭಗವತೇ ವಾಸುದೇವಾಯ**

ಉದಯ ವಾಹಿನಿ
ಪ್ರಾದೇಶಿಕ
ಸೋಮವಾರ 27 ಏಪ್ರಿಲ್ 2026


## ಕಾಲುವೆಗೆ ಬಿದ್ದ ಕಾಡುಕೋಣ ರಕ್ಷಣೆ

• ಉದಯವಾಹಿನಿ ಕುಂದಾಪುರ

ಇಲ್ಲಿಗೆ ಸಮೀಪದ ಕಾಳಾವರ ಗ್ರಾಮ ಪಂಚಾಯಿತಿಯ ಅಸೋಡು ಕುಮಾರಮಹಾಲಿಂಗೇಶ್ವರ ದೇವಸ್ಥಾನ ಸಮೀಪದ ವಾರಾಹಿ


ಉದಯವಾಹಿನಿ ಚಿತ್ರ

ಕಾಲುವೆಗೆ ಬಿದ್ದಿದ್ದ ಕಾಡುಕೋಣವನ್ನು ಸ್ಥಳೀಯರ ನೆರವಿನಿಂದ ಅರಣ್ಯ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ. ಅರಣ್ಯದಿಂದ ಜನವಸತಿ ಪ್ರದೇಶಕ್ಕೆ ಬಂದಿದ್ದ ಕಾಡುಕೋಣ ಕಾಲುವೆಗೆ ಬಿದ್ದಿತ್ತು. 20 ತಾಸು ಕಾಲುವೆಯಲ್ಲಿದ್ದ ಕಾಡುಕೋಣ ಮೇಲೆ ಬರಲು ಯತ್ನಿಸುತ್ತಿತ್ತು. ಮೇಲೆ ಬರಲು ಅನುಕೂಲವಾಗುವಂತೆ ಅರಣ್ಯ ಇಲಾಖೆಯವರು ಶುಕ್ರವಾರವೇ ಕಾಲುವೆಗೆ ಮಣ್ಣು ತುಂಬಿಸಿದ್ದರು. ಆದರೂ ಪ್ರಯೋಜನ ಆಗಲಿಲ್ಲ. ಬೆಳಿಗ್ಗೆಯಿಂದಲೇ ರಕ್ಷಣಾ ಕಾರ್ಯಾಚರಣೆ ಮುಂದುವರಿಸಿ ಮತ್ತಷ್ಟು ಮಣ್ಣು ಹಾಕಿ ಇಳಿಜಾರು ಮಾಡಿ. ಜೆಸಿಬಿ ಹಾಗೂ ಹಗ್ಗದ ಸಹಾಯದಿಂದ ಕೋಣವನ್ನು ಮೇಲೆತ್ತಲಾಯಿತು. ಕಾಳಾವರ ಗ್ರಾ.ಪಂ. ಮಾಜಿ ಸದಸ್ಯ ಚಂದ್ರ ಪೂಜಾರಿ ಕಾಳಾವರ ಪಾಲ್ಗೊಂಡಿದ್ದರು.

### ಗಾಂಧೀಜಿ ಗ್ರಾಮ ಸ್ವರಾಜ್ಯ ಕನಸು ನನಸಾಗಿಸಲು ಗ್ರಾಮ ಆಡಳಿತಕ್ಕೆ ಹೆಚ್ಚಿನ ಒತ್ತು

# ಯೋಜನೆ ಅನುಷ್ಠಾನ ಪರಿಣಾಮಕಾರಿಯಾಗಲಿ: ಸಚಿವ

• ಉದಯವಾಹಿನಿ ಬೆಳಗಾವಿ

ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದಿಂದ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಅವುಗಳನ್ನು ತಳಮಟ್ಟದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಪಂಚಾಯತ ರಾಜ್ ಇಲಾಖೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುವರ್ಣ ವಿಧಾನ ಸೌಧದ ಸೆಂಟ್ರಲ್ ಹಾಲನಲ್ಲಿ ಜರುಗಿದ ರಾಷ್ಟ್ರೀಯ ಪಂಚಾಯತ ರಾಜ್ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಹಾತ್ಮ ಗಾಂಧೀಜಿ ಗ್ರಾಮ ಸ್ವರಾಜ್ಯ ಕನಸು ನನಸಾಗಿಸಲು ರಾಜ್ಯ ಸರ್ಕಾರ ಗ್ರಾಮ ಆಡಳಿತಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಗ್ರಾಮಗಳ ಸಬಲೀಕರಣದಲ್ಲಿ

**ಸರ್ಕಾರ ಜಾರಿಗೊಳಿಸಿದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಜಿಲ್ಲೆ ಮುಂಚೂಣಿಯಲ್ಲಿದೆ. ಜಿಲ್ಲೆಯ ಅಧಿಕಾರಿಗಳು ಕಾನೂನು ವ್ಯಾಪ್ತಿಯಲ್ಲಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಅಧಿಕಾರಿಗಳು ತಮ್ಮ ಅವಧಿಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುವುದರ ಮೂಲಕ ಜನರ ಮನದಲ್ಲಿ ಶಾಶ್ವತವಾಗಿ ಉಳಿಯುವಂತೆ ಕಾರ್ಯ ನಿರ್ವಹಿಸಿ. -ಸಚಿವ ಸತೀಶ ಜಾರಕಿಹೊಳಿ**



ಉದಯವಾಹಿನಿ ಚಿತ್ರ

**ಸಾಧಕ ಬಾಧಕಗಳ ಬಗ್ಗೆ ಚರ್ಚೆ**

ಸ್ಥಳೀಯ ಆಡಳಿತಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು. ಭಾರತ ದೊಡ್ಡ ರಾಷ್ಟ್ರವಾಗಿದೆ. ಇಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗದ ನಡುವೆ ಸಮನ್ವಯ ಮುಖ್ಯವಾಗಿದೆ ಎಂದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ಗಾಂಧೀಜಿ ಕಂಡ ಗ್ರಾಮ ಸ್ವರಾಜ್ಯ ಹಾಗೂ ಮಹಿಳಾ ಸಬಲೀಕರಣದಲ್ಲಿ ಪಂಚಾಯತ್ ರಾಜ್ ಇಲಾಖೆ ಪಾತ್ರ ಮಹತ್ವದಾಗಿದೆ. ಗ್ರಾಮ ಪಂಚಾಯಿತಿಗಳ ಮೂಲಕ ಬೇರು ಮಟ್ಟದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪಂಚಾಯತ ರಾಜ್ ಪಾತ್ರ ಬಹು ದೊಡ್ಡದಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಶಿಂಧೆ ಮಾತನಾಡಿದರು.

ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಶಾಸಕರಾದ ಬಾಬಾಸಾಹೇಬ ಪಾಟೀಲ,ಗಣೇಶ ಹುಕ್ಕೇರಿ, ಆಸಿಫ್ ಸೇಠ್, ವಿನಯ ನಾವಲಗಟ್ಟಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಂಜಯ ಶೆಟ್ಟಣ್ಣವರ, ಕಮಿಷನರ್ ಬೋರಸೆ ಗುಲಾಬರಾವ್ ಭೂಷಣ ಇದ್ದರು.

## ತಳವಾರರಿಗೆ ಎಸ್‌ಟಿ ಪ್ರಮಾಣ ಪತ್ರ ತಡೆ: ತಹಶೀಲ್ದಾರ್ ಅಮಾನತಿಗೆ ಆಗ್ರಹ

• ಉದಯವಾಹಿನಿ ಜೇವರ್ಗಿ

ತಳವಾರ ಸಮುದಾಯಕ್ಕೆ ಪರಿಶಿಷ್ಟ ಪಂಗಡ (ಎಸ್‌ಟಿ) ಜಾತಿ ಪ್ರಮಾಣ ಪತ್ರ ನೀಡುವಲ್ಲಿ ಉದ್ದೇಶಪೂರ್ವಕ ವಿಳಂಬ ಹಾಗೂ ನಿರಾಕರಣೆ ನಡೆಯುತ್ತಿದೆ ಎಂದು ಆರೋಪಿಸಿ, ಜೇವರ್ಗಿ ತಾಲ್ಲೂಕಿನ ಗ್ರೇಡ್-2 ತಹಶೀಲ್ದಾರ ಶ್ರೀ ಗೋಪಾಲ ಕಪೂರ ಅವರನ್ನು ತಕ್ಷಣ ಅಮಾನತುಗೊಳಿಸುವಂತೆ ರಾಜ್ಯ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಗಿದೆ.



ಉದಯವಾಹಿನಿ ಚಿತ್ರ

ತಳವಾರ ಜಾತಿಯು ಸಂವಿಧಾನದ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರಾಜ್ಯಪತ್ರ, ಸುತ್ತೋಲೆ ಹಾಗೂ ಆದೇಶಗಳ ಪ್ರಕಾರ ನಾಯಕಡ/ನಾಯಕ (ಪರಿವಾರ ಮತ್ತು ತಳವಾರ ಸೇರಿ) ಎಂದು ಎಸ್‌ಟಿ ಪಟ್ಟಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ-1ರಲ್ಲಿ ಇದ್ದ ತಳವಾರ ಜಾತಿಯನ್ನು ಸರ್ಕಾರ ಈಗಾಗಲೇ ಪಟ್ಟಿಯಿಂದ ತೆಗೆದುಹಾಕಿ, ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಿರುವುದಾಗಿ ದಾಖಲೆಗಳು ಸೂಚಿಸುತ್ತವೆ. 2024ರವರೆಗೂ ಜೇವರ್ಗಿ ತಾಲ್ಲೂಕಿನಲ್ಲಿ ತಳವಾರ ಸಮುದಾಯದವರಿಗೆ ಎಸ್‌ಟಿ ಜಾತಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿತ್ತು. ಆದರೆ ಕಳೆದ ಒಂದು ವರ್ಷದಿಂದ ಮಾತ್ರ ಪ್ರಮಾಣ ಪತ್ರ ವಿತರಣೆಯನ್ನು ಸ್ಥಗಿತಗೊಳಿಸಿರುವುದು ಅನ್ಯಾಯ ಎಂದು ಆರೋಪಿಸಲಾಗಿದೆ. ರಾಜ್ಯದ ಇತರ ಜಿಲ್ಲೆಗಳಲ್ಲಿ ತಳವಾರ ಸಮುದಾಯದವರಿಗೆ ಎಸ್‌ಟಿ ಪ್ರಮಾಣ ಪತ್ರಗಳನ್ನು ನೀಡಲಾಗುತ್ತಿದ್ದು, ಜೇವರ್ಗಿ ತಾಲ್ಲೂಕಿನಲ್ಲಿ ಮಾತ್ರ ನಿರಾಕರಣೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು ಹಾಗೂ ಸರ್ಕಾರಿ ಸೌಲಭ್ಯ ಪಡೆಯುವವರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ದೂರಲಾಗಿದೆ.

ಶಾಲಾ ದಾಖಲಾತಿ, ಗ್ರಾಮ ಲೆಕ್ಕಿಗರ ವರದಿ, ಕಂದಾಯ ನಿರೀಕ್ಷಕರ ಅಭಿಪ್ರಾಯ ಹಾಗೂ ಪಂಚರ ಹೇಳಿಕೆಗಳಲ್ಲಿ ತಳವಾರ ಜಾತಿಯವರಾಗಿರುವುದು ಸ್ಪಷ್ಟವಾಗಿದ್ದರೂ, ದಾಖಲೆರಹಿತ ಕಾರಣಗಳನ್ನು ಮುಂದಿಟ್ಟು ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸಂವಿಧಾನ, ರಾಜ್ಯಪತ್ರ ಹಾಗೂ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ ಜನರಿಗೆ ತೊಂದರೆ ಉಂಟುಮಾಡುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರರನ್ನು ಕೂಡಲೇ ಅಮಾನತುಗೊಳಿಸಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಲಾಗಿದೆ.

## ಸಮಾಜದಲ್ಲಿ ಬದಲಾವಣೆಗೆ ಶಿಕ್ಷಣವೇ ಪ್ರಬಲ ಅಸ್ತ್ರ

• ಉದಯವಾಹಿನಿ, ಅಥಣಿ

ಬಡ ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಆಸರೆಯಾಗುವ ಅವಶ್ಯಕತೆ ಇಂದಿನ ದಿನಗಳಲ್ಲಿ ಹೆಚ್ಚಿದ್ದು, ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಎಲ್ಲಾ ತರದಿಂದಲೂ ಸಹಾಯಕ್ಕೆ ಸಿದ್ಧ ಎಂದು ಎಸ್‌ಪಿ ರವೀಂದ್ರ ಗಡಾದೆ ಹೇಳಿದರು.



ಉದಯವಾಹಿನಿ ಚಿತ್ರ

ತಾಲ್ಲೂಕಿನ ತೆಲಸಂಗ ಗ್ರಾಮದ ಸರ್ಕಾರಿ ಕನ್ನಡ ಶಾಸಕರ ಮಾದರಿ ಶಾಲೆಯಲ್ಲಿ ಆಂತರಿಕ ಭದ್ರತಾ ವಿಭಾಗದ (ಧಾರವಾಡ ವಲಯ) ಪೊಲೀಸ್ ಅಧೀಕ್ಷಕ ರವೀಂದ್ರ ಗಡಾದೆ ಜನ್ಮದಿನದ ಪ್ರಯುಕ್ತ ಗ್ರಾಮಸ್ಥರು ಹಮ್ಮಿಕೊಂಡಿದ್ದ ಬಡ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಶಿಕ್ಷಣದಿಂದ ಯಾವೊಬ್ಬ ಮಗುವೂ ವಂಚಿತರಾಗಬಾರದು.

ಸಾಕ್ಷರ ಸಮಾಜದಿಂದ ಮಾತ್ರ ದೇಶದ ಉತ್ತಮ ಭವಿಷ್ಯ ಸಾಧ್ಯ, ಸಮಾಜದಲ್ಲಿ ಬದಲಾವಣೆ ತರಲು ಶಿಕ್ಷಣವೇ ಪ್ರಬಲ ಅಸ್ತ್ರವಾಗಿದೆ. ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ದೊರೆತಾಗ ಮಾತ್ರ ಸಮೃದ್ಧ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಬಡತನ ಎಂಬುದು ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಗ್ರಾಮಸ್ಥರು ಹಮ್ಮಿಕೊಂಡಿರುವ ಈ ಕಾರ್ಯ ಶ್ಲಾಘನೀಯ ಎಂದರು.

ಈ ವೇಳೆ ಡಾ. ಆರ್.ಡಿ. ಪೂಜಾರಿ, ರಾಜಕುಮಾರ ಪರ್ನಾಕರ, ಎ.ಆರ್. ಜೋಶಿ, ಸಿದ್ದರಾಮಯ್ಯ ಪೂಜಾರಿ, ಗುರುಯ್ಯ ಮಠಪತಿ, ಬಸವರಾಜ್ ಅವಟಿ, ಡಾ. ಪ್ರಕಾಶ್ ಪರನಾಕರ್, ಶಿವಾನಂದ ಪೂಜಾರಿ, ಸಂಗಮೇಶ್ ಉಂಡೋಡಿ, ಜಗದೀಶ ಪೂಜಾರಿ, ಕಾಶಿಲಿಂಗ ಲೋಕಂಡೆ, ಭೀಮಪ್ಪಾ ಬನಗೊಂಡ, ಶ್ರವಣ ಪರ್ನಾಕರ, ರಾಜು ಹೊನಕಾಶಂಬಳೆ ಸೇರಿದಂತೆ ಅನೇಕ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಗ್ಯಾರಂಟಿಯಿಂದ ಅಭಿವೃದ್ಧಿ ಕುಂಠಿತ: ರಾಜುಗೌಡ ಪಾಟೀಲ

• ಉದಯವಾಹಿನಿ ಬಸವನಬಾಗೇವಾಡಿ

ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳ ಫಲವಾಗಿ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡರೂ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯ ವಿಷಯವಾಗಿ ಹಿಂದೆ ಸರಿದಿಲ್ಲ ಎಂದು ದೇವರಹಿಪ್ಪರಗಿ ಮತಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಅಭಿಪ್ರಾಯಪಟ್ಟರು.

ಅವರು ತಾಲ್ಲೂಕಿನ ಗುಳಬಾಳ ಗ್ರಾಮದಲ್ಲಿ ಸಿಸಿ ರಸ್ತೆ ಭೂಮಿ ಪೂಜಾ ಹಾಗೂ ಶರಣ ಸೋಮನಾಳ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿ, ಇಲ್ಲಿಯ ರಸ್ತೆ ನಿರ್ಮಾಣದ ಕಾರ್ಯ ಬಹು ದಿನಗಳ ಬೇಡಿಕೆಯಾಗಿತ್ತು.

ಈಗಾಗಲೇ ಪಕ್ಕದ ಆರೂಢನಂದಿಹಾಳ ರಸ್ತೆ ಅಭಿವೃದ್ಧಿ ಪಡಿಸಲಾಗಿದೆ. ಶೀಘ್ರವೇ ಸಿಂಧುಗೇರಿ ಹಾಗೂ ಗುಳಬಾಳದಿಂದ ಶರಣ ಸೋಮನಾಳಕ್ಕೆ ಬರುವ ರಸ್ತೆಯನ್ನೂ ಕೂಡ ಅಭಿವೃದ್ಧಿಪಡಿಸುವೆ. ಕ್ಷೇತ್ರದಲ್ಲಿ ಹದಗೆಟ್ಟ ರಸ್ತೆಗಳ ಸುಧಾರಣೆಗೆ ಮುಂದಾಗುವೆ ನೆಮ್ಮದಿ ಬದುಕಿಗೆ ಸಿದ್ದಾರೂಢರ ಆಶೀರ್ವಾದ ನಮ್ಮ ಮೇಲೆ ಸದಾ ಇದೆ ಎಂದರು.

ಶಿವಪುತ್ರ ಶ್ರೀಗಳು ಮಾತನಾಡಿದರು. ಈ ಸಂದರ್ಭದಲ್ಲಿ ಮದರಯ್ಯ ಶ್ರೀಗಳು, ಜಿಪಂ ಎಇಇ ವಿಲಾಸ ರಾಠೋಡ, ಕೆ.ಆರ್.ಐ.ಡಿ.ಎಲ್ ಆನಂದಸ್ವಾಮಿ, ತಾಪಂ ಇಓ


ಉದಯವಾಹಿನಿ ಚಿತ್ರ

**ಸಾವಿರ ಕಿಮೀ ರಸ್ತೆ ರಸ್ತೆ ನಿರ್ಮಾಣ**

**ದೇವರಹಿಪ್ಪರಗಿಯಿಂದ ಮುದ್ದೇಬಿಹಾಳ ತಾಲ್ಲೂಕಿನ ನಾಲತವಾಡದವರೆಗೆ 1000 ಕಿಮೀ ರಸ್ತೆ ನಿರ್ಮಾಣದ ಕಾರ್ಯ ಶೀಘ್ರದಲ್ಲೇ ಆಗಲಿದೆ. ರಾಜುಗೌಡ ಪಾಟೀಲ, ಶಾಸಕರು, ದೇವರಹಿಪ್ಪರಗಿ ಮತಕ್ಷೇತ್ರ.**

ಅನುಸುಯಾ ಚಲವಾದಿ, ಬಿಬಿ ಬಿರಾದಾರ, ಬಸವರಾಜ ಡೆಂಗಿ, ಪಿ.ಎಸ್ ಕಸನೆಟ್ಟಿ, ಡಿ.ಆರ್ ಬಿರಾದಾರ, ಶಂಕರಗೌಡ ಬಿರಾದಾರ, ಬಸಲಿಂಗಪ್ಪ ಬಿರಾದಾರ ಸೇರಿದಂತೆ ಅನೇಕರು ಹಾಜರಿದ್ದರು.

## ನಾರಿಶಕ್ತಿ ಅಭಿವಂದನ್ ಮಸೂದೆ ಅಂಗೀಕಾರಕ್ಕೆ ಪ್ರತಿಪಕ್ಷಗಳ ವಿರೋಧ: ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ

• ಉದಯವಾಹಿನಿ, ವಿಜಯಪುರ

ನಾರಿಶಕ್ತಿ ಅಭಿವಂದನ್ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಕಾಂಗ್ರೆಸ್ ಹಾಗೂ ಇನ್ನಿತರ ಪ್ರತಿಪಕ್ಷಗಳ ವಿರುದ್ಧ ವಿಜಯಪುರದಲ್ಲಿ ನಾರಿಶಕ್ತಿ ಅಭಿವಂದನ್ ಫೋರಂ ಪದಾಧಿಕಾರಿಗಳು ಪ್ರತಿಭಟನಾ ರ್‍ಯಾಲಿ ನಡೆಸಿದರು. ವಿಜಯಪುರದ ಶ್ರೀ ಸಿದ್ದೇಶ್ವರ ದೇವಾಲಯದಿಂದ ಆರಂಭಗೊಂಡ ರ್‍ಯಾಲಿ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿತು.

ನಾರಿಶಕ್ತಿ ದೇಶದ ಶಕ್ತಿ, ಮಹಿಳಾ ಸಬಲೀಕರಣ ವಿಷಯದಲ್ಲಿ ಬೇಡ ರಾಜಕಾರಣ ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ನಾರಿಶಕ್ತಿ ಮಸೂದೆ ಅಂಗೀಕಾರವಾಗದಂತೆ ಕುತಂತ್ರ ಮಾಡಿದ ಪ್ರತಿಪಕ್ಷಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಅಸಮಾಧಾನ ಹೊರಹಾಕಿದರು.

ಫೋರಂನ ಪ್ರಮುಖರಾದ ಡಾ. ವಿಜಯಲಕ್ಷ್ಮಿ ತುಂಗಳ ಮಾತನಾಡಿ, ಪ್ರತಿಪಕ್ಷಗಳು ನಾರಿಶಕ್ತಿ ಅಭಿವಂದನ್ ಮಸೂದೆ ಜಾರಿಯಾಗದಂತೆ ನೋಡಿಕೊಂಡು ಸಮಸ್ತ ಸ್ತ್ರೀ ಕುಲಕ್ಕೆ ಅವಮಾನ ಮಾಡಿವೆ. ಮಹಿಳಾ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಆಶಯ ಪೂರ್ಣವಾಗಿ ಜಾರಿಗೆ ತರಲು ಉದ್ದೇಶಿಸಿದ ಈ ಕಾಯ್ದೆಗೆ



ಉದಯವಾಹಿನಿ ಚಿತ್ರ

**ಪ್ರತಿಪಕ್ಷಗಳ ವಿರುದ್ಧ ಧಿಕ್ಕಾರ**

ಬೆಂಬಲ ನೀಡದೇ ಪ್ರತಿಪಕ್ಷಗಳು ಮಹಿಳಾ ವಿರೋಧಿ ನೀತಿ ಅನುಸರಿಸಿವೆ. ಶಾಸನ ಸಭೆಗಳಲ್ಲಿ ಶೇ.33 ರಷ್ಟು ಮೀಸಲಾತಿ ನೀಡುವ ಈ ಮಸೂದೆ ಮಹಿಳಾ ಆಡಳಿತ ಸಹಭಾಗಿತ್ವಕ್ಕೆ ಹೊಸ ಭಾಷ್ಯ ಬರೆಯುತ್ತಿತ್ತು. ಇದನ್ನು ಸಹಿಸದ ಪ್ರತಿಪಕ್ಷಗಳು ಈ ಕಾಯ್ದೆ ವಿರೋಧಿಸಿವೆ ಎಂದು ಅಸಮಾಧಾನ ಹೊರಹಾಕಿದರು.

ನಾರಿ ಶಕ್ತಿ ವಂದನಾ ಕಾಯ್ದೆಗೆ ಸೋಲುಂಟಾಗಿರುವುದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಉದ್ದೇಶವನ್ನು ಕರಾಳ ದಿನವಾಗಿಸಿದೆ. ಅಣ್ಣ ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅವರ ಮಹದಾಶಯಗಳಿಗೆ ಕಾಂಗ್ರೆಸ್ ದ್ರೋಹ ಮಾಡಿದಂತಾಗಿದೆ. ಬಿಜೆಪಿ ಅನೇಕ ಮಹಿಳಾ ಮುಖ್ಯಮಂತ್ರಿಗಳನ್ನು ಮಾಡಿದೆ. ಕಾಂಗ್ರೆಸ್ ಪಕ್ಷ ತನ್ನ ಮಹಿಳಾ ವಿರೋಧಿ ನೀತಿ ಮುಂದುವರೆಸುತ್ತಲೇ ಇದೆ.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಿಸಿದಾಗಲೂ ವಿರೋಧ, ಸಿಎಎ ಅನುಷ್ಠಾನಕ್ಕೂ ವಿರೋಧವಿತ್ತು. ತ್ರಿವಳಿ ತಲಾಖ್ ರದ್ದನ್ನೂ ವಿರೋಧಿಸಿದ್ದರು. ಜಿಎಸ್‌ಟಿ ಜಾರಿಗೂ ವಿರೋಧ ಮಾಡಿದರು ಎಂದರು.

## ಸೋಲು ಗೆಲುವು ಸಮಚಿತ್ತದಿಂದ ಸ್ವೀಕರಿಸಿ: ಈಶ್ವರ ಉಳ್ಳಾಗಡ್ಡಿ

• ಉದಯವಾಹಿನಿ, ಹುಕ್ಕೇರಿ

ರಾಷ್ಟ್ರಮಟ್ಟದ ಡಾಡ್ಜಬಾಲ್ ಪಂದ್ಯವನ್ನು ಹುಕ್ಕೇರಿ ಗ್ರಾಮೀಣ ಭಾಗದಲ್ಲಿ ಹಮ್ಮಿಕೊಂಡಿದ್ದು ಶ್ಲಾಘನೀಯ. ಕ್ರೀಡೆಯಲ್ಲಿ ಸೋಲು ಗೆಲುವು ಸಹಜ. ಆಟಗಾರರು ಎರಡನ್ನು ಸಮಚಿತ್ತದಿಂದ ನೋಡಬೇಕು ಎಂದು ಧಾರವಾಡ ಸಾರ್ವಜನಿಕ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತ ಈಶ್ವರ ಉಳ್ಳಾಗಡ್ಡಿ ಹೇಳಿದರು. ಡಾಡ್ಜಬಾಲ್ ಅಸೋಸಿಯೇಷನ್ ಆಫ್ ಕರ್ನಾಟಕ ಮತ್ತು ಬಾಪೂಜಿ ಶಿಕ್ಷಣ ಸಂಸ್ಥೆ, ಮಸರಗುಪ್ಪಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ 18ನೇ ಡಾಡ್ಜಬಾಲ್ (ಮಹಿಳೆ ಪುರುಷ) ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದರು.

ದೇಶದ 18 ರಾಜ್ಯಗಳಿಂದ 35ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದು, ಪಂದ್ಯಾವಳಿ ಆಯೋಜಿಸುವಲ್ಲಿ ಸ್ಥಳೀಯ ಸಂಘಟಕರ ಉತ್ಸುಕತೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಚಿಕ್ಕೋಡಿ ಡಿಡಿಪಿಐ ಆರ್.ಎಸ್. ಸೀತಾರಾಮು, ಡಿಡಿಪಿಯು ಪಿ.ಐ.ಭಂಡಾರಿ, ಬಿಇಒ ಪ್ರಭಾವತಿ ಪಾಟೀಲ್, ಪೊಲೀಸ್ ಇನ್ಸ್‌ಪೆಕ್ಟರ್ ಮಹಾಂತೇಶ ಬಸ್ಸಾಪುರೆ, ಜಾವೀದ ಮುಶಾಪುರಿ, ಕಾರ್ಯದರ್ಶಿ ಸಂಜೀವಕುಮಾರ ನವಲಗುಂದ. ಹಿರೇಮಠದ ಚಂದ್ರಶೇಖರ್ ಸ್ವಾಮೀಜಿ, ವಿರಕ್ತಮಠದ ಶಿವಬಸವ ಸ್ವಾಮೀಜಿ, ಘಟಪ್ರಭಾ ಕಮತೆನಟ್ಟಿಯ ವಿರೂಪಾಕ್ಷಿ ಸ್ವಾಮೀಜಿ ಇದ್ದರು.


ಉದಯವಾಹಿನಿ ಚಿತ್ರ

ಕ್ರೀಡಾ ಸಂಘದ ಜಿಲ್ಲಾ ಕಾರ್ಯದರ್ಶಿ ಶ್ರೀಶೈಲ್ ಕೌಜಲಗಿ ಪ್ರತಿಜ್ಞಾ ವಿಧಿ ಬೋಧಿಸಿದರು. ಆಡಳಿತಾಧಿಕಾರಿ ಬಸವರಾಜ ಅಮ್ಮಣಗಿ ಗಣ್ಯರನ್ನು ಮತ್ತು ಶ್ರೀಗಳನ್ನು ಸತ್ಕರಿಸಿದರು.

ನಿರ್ದೇಶಕ ಅರ್ಜುನ ಸಂಕನ್ನವರ, ಪ್ರಾಚಾರ್ಯ ಲೀಲಾವತಿ ಹಿರೇಮಠ, ರಾಜ್ಯ ತಂಡದ ಕೋಚ್ ತೇಜಸ್. ಕ್ರೀಡಾ ಶಿಕ್ಷಣಾಧಿಕಾರಿ ಮಹೇಶ್ ಮಾಸೇಕರ್, ಮುಖಂಡರಾದ ಜಿನಗೌಡ ಇಮಗೌಡನವರ, ಸುಭಾಸ ನಾಯಿಕ, ಹುಲ್ಲೋಳಿ ಚೌಗಲಾ, ಸಂಜು ಹಾವನ್ನವರ, ಗೋಪಾಲ ಹೂಗಾರ್ ಇದ್ದರು. ಪ್ರಾಚಾರ್ಯ ಡಾ.ಹೊಳಬಸಯ್ಯ ಸಂಕಣ್ಣವರ ಸ್ವಾಗತಿಸಿದರು.


## ಭಕ್ತಿಯ ಸುವಾಸನೆ ಇಲ್ಲದವನಿಗೆ ಮೋಕ್ಷವಿಲ್ಲ: ಶ್ರೀಗಳು

• ಉದಯವಾಹಿನಿ, ಜಮಖಂಡಿ

ಭಕ್ತಿ ಮತ್ತು ನಾಮಸ್ಮರಣೆಯ ಮೂಲಕವೇ ಮಾನವನ ಜೀವನ ಪಾವನವಾಗುತ್ತದೆ ಎಂದು ನಂದೇಶ್ವರ-ಮಧುರಖಂಡಿ ಕಮರಿಮಠದ ಡಾ. ದುಂಡೇಶ್ವರ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಹುನ್ನೂರಿನಲ್ಲಿ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಶ್ರೀಗುರು ಕಾಶಿಲಿಂಗೇಶ್ವರ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ಜೀರ್ಣೋದ್ಧಾರಗೊಂಡ ಸಮಾಜ ಮಂದಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಜೀವನದ ಮಹತ್ವವನ್ನು ವಿವರಿಸಿದ ಅವರು, ಹೂವುಗಳು ಸುವಾಸನೆ ಹರಡುವಂತೆ ಮಾನವನು ಭಕ್ತಿಯಿಂದ ಜೀವನವನ್ನು ಪರಿಮಳಗೊಳಿಸಬೇಕು. ಅನೇಕ ಜನ್ಮಗಳ ನಂತರ ದೊರೆಯುವ ಮಾನವ ಜನ್ಮವನ್ನು ಸಾರ್ಥಕಗೊಳಿಸಬೇಕಾಗಿದೆ ಎಂದು ಹೇಳಿದರು. ಅಹಂಕಾರವು ಭಕ್ತಿಗೆ ಅಡ್ಡಿಯಾಗುತ್ತದೆ ಎಂದು ಹೇಳಿದ ಅವರು, ಸದ್ಗುಣಗಳನ್ನು ಬೆಳೆಸಿಕೊಳ್ಳುವುದು ಮತ್ತು ದುರುಗುಣಗಳನ್ನು ತ್ಯಜಿಸುವುದು ಅಗತ್ಯವೆಂದು ತಿಳಿಸಿದರು. ಪೋಷಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು ಹಾಗೂ ಮಕ್ಕಳು ಪೋಷಕರಿಗೆ ಗೌರವ ತೋರಬೇಕು ಎಂದು ಸಂದೇಶ


ಉದಯವಾಹಿನಿ ಚಿತ್ರ

ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಶ್ವನಾಥ ಶಾಸ್ತ್ರಿಗಳು, ಗುರುವಿನ ಭಕ್ತಿಯಿಂದ ಜೀವನದಲ್ಲಿ ಯಶಸ್ಸು ಸಿಗುತ್ತದೆ. ಇಂದಿನ ತಂತ್ರಜ್ಞಾನ ಬಳಕೆ ಜನರ ಜೀವನಶೈಲಿಯಲ್ಲಿ ಬದಲಾವಣೆ ತಂದಿದೆ. ಆದರೆ ಸಂತರ ವಚನಗಳು ಜೀವನವನ್ನು ಶ್ರೇಷ್ಠಗೊಳಿಸುತ್ತವೆ ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಜ್ಯೋತಿರ್ಲಿಂಗಗಳ ಅಭಿಷೇಕ ಮತ್ತು ಹೋಮ ನೆರವೇರಿತು. ನಂತರ ವಿವಿಧ ವಾದ್ಯಮೇಳಗಳೊಂದಿಗೆ ಭವ್ಯ ಮೆರವಣಿಗೆ ನಡೆಯಿತು. ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಗಿದ್ದು, ನಾಲ್ಕು ದಿನಗಳ ಜಾತ್ರೆಗೆ ಚಾಲನೆ ನೀಡಲಾಯಿತು.

# ಇರಾನ್-ಯು.ಎಸ್ ಸಂಘರ್ಷ: ವಿಶ್ವ ಶಾಂತಿಗಾಗಿ ರೋಟರಿ ಶಾಂತಿ ನಡಿಗೆ

### ವಿಶ್ವದಲ್ಲಿ ಶಾಂತಿ ಸ್ಥಾಪನೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ, ಯುದ್ಧಗಳು ಮಾನವಕುಲಕ್ಕೆ ಅಪಾಯಕಾರಿ

• ಉದಯವಾಹಿನಿ, ಬೀದರ್

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಇರಾನ್‌ಯು.ಎಸ್ ಸಂಘರ್ಷದ ಹಿನ್ನೆಲೆ ಜಗತ್ತಿನಾದ್ಯಂತ ಉಂಟಾಗಿರುವ ಅಶಾಂತಿ ಕೊನೆಗೊಳ್ಳಬೇಕು ಎಂಬ ಆಶಯದೊಂದಿಗೆ ಬೀದರ್ ಜಿಲ್ಲೆಯ ಎಲ್ಲಾ ರೋಟರಿ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಶಾಂತಿ ನಡಿಗೆ ಹಮ್ಮಿಕೊಳ್ಳಲಾಯಿತು. ರೋಟರಿ ಪೇಲ್ಸ್ ಸೇಲ್ಸ್

**ವಿಶ್ವದಲ್ಲಿ ಶಾಂತಿ ಸ್ಥಾಪನೆ ಪ್ರತಿಯೊಬ್ಬರ ಜವಾಬ್ದಾರಿ**

ಕಾರ್ಯಕ್ರಮದ ಅಧ್ಯಕ್ಷ ಬಸವರಾಜ ಧನ್ನೂರ ಹಾಗೂ ರೋಟರಿ ಕ್ಲಬ್ ಆಫ್ ಬೀದರ್ ಸಿಲ್ವರ್ ಸ್ಟಾರ್ ಅಧ್ಯಕ್ಷ ಆದಿಶ್ ವಾಲಿ ಅವರ ನೇತೃತ್ವದಲ್ಲಿ ನಗರದ ಬರೀದ ಶಾಯಿ ಗಾರ್ಡನ್‌ನಿಂದ ಪ್ರಾರಂಭವಾದ ಈ ನಡಿಗೆ ನೂತನ ಬಸ್ ನಿಲ್ದಾಣ, ಮಡಿವಾಳ ಮಾಚಿದೇವ ವೃತ್ತದ ಮೂಲಕ ಸಾಗುತ್ತಾ ರೋಟರಿ ಕನ್ನಡಾಂಬೆ ವೃತ್ತದಲ್ಲಿ ಸಮಾಪ್ತಿಯಾಯಿತು. ಈ ವೇಳೆ ಮಾತನಾಡಿದ ರೋಟರಿ ಕಲ್ಯಾಣ ವಲಯ ಡಿಸ್ಟ್ರಿಕ್ಟ್ ಗವರ್ನರ್ ಎಂ.ಕೆ. ರವೀಂದ್ರ ಅವರು, ವಿಶ್ವದಲ್ಲಿ ಶಾಂತಿ ಸ್ಥಾಪನೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಯುದ್ಧಗಳು ಮಾನವಕುಲಕ್ಕೆ



ಉದಯವಾಹಿನಿ ಚಿತ್ರ

**ಒಂಬತ್ತು ಶತಮಾನಗಳ ಹಿಂದೆ ಬಸವಣ್ಣನವರು ಯಾವುದೇ ಯುದ್ಧ ಬೇಡ ಎಂದು ಹೇಳಿ ಪ್ರತಿಯೊಂದು ಪ್ರಾಣಿ, ಪಕ್ಷಿ, ಜೀವಸಂಕುಲದ ಮೇಲೆ ದಯೆ ಇರಬೇಕು ಎಂದು ಹೇಳಿದ್ದರು. ಆದರೆ ಇವತ್ತು ಜಗತ್ತಿನಲ್ಲಿ ಎರಡು ದೇಶಗಳಲ್ಲಿ ನಡೆಯುತ್ತಿರುವ ಈ ಯುದ್ಧ ಜಗತ್ತಿನ ಸಾಕಷ್ಟು ಅಮಾಯಕರ ಮೇಲೆ ಪ್ರಭಾವ ಬೀರುತ್ತವೆ ಆದ್ದರಿಂದ ಈ ಬಸವಣ್ಣನ ನೆಲದಿಂದ ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಬೇಕು ಎಂಬ ಉದ್ದೇಶದಿಂದ ನಗರದಲ್ಲಿ ವಿಶ್ವಶಾಂತಿಗಾಗಿ ಶಾಂತಿಯುತ ನಡಿಗೆಯನ್ನು ಹಮ್ಮಿಕೊಳ್ಳಲಾಯಿತು. -ಬಸವರಾಜ ಧನ್ನೂರ ರೋಟೋರಿಯನ್**

ಅಪಾಯಕಾರಿಯಾಗಿದ್ದು, ಸಹಬಾಳ್ವೆಯ ಮೂಲಕವೇ ಶಾಂತಿ ಸಾಧ್ಯವೆಂದು ತಿಳಿಸಿದರು. ರೋಟರಿ ಕಲ್ಯಾಣ ವಲಯ ಡಿಸ್ಟ್ರಿಕ್ಟ್ ಗವರ್ನರ್ ಕೇಶವ ರೆಡ್ಡಿ ಅವರು ಮಾತನಾಡಿ, ಯುದ್ಧದಿಂದ ವಿನಾಶವೇ ಹೊರತು ಯಾರಿಗೂ ಲಾಭವಿಲ್ಲ. ಧರ್ಮ, ಜಾತಿ ಭೇದ ಮೀರಿದ ಮಾನವೀಯತೆ ಬೆಳೆಸಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲಿದೆ ಎಂದು ಹೇಳಿದರು. ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ ಮಾತನಾಡಿ, ಯುದ್ಧದ ದುಷ್ಪರಿಣಾಮಗಳು ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ವಿಶೇಷವಾಗಿ ಸಣ್ಣಪುಟ್ಟ ದೇಶಗಳು ಹೆಚ್ಚು ಸಂಕಷ್ಟ ಅನುಭವಿಸುತ್ತಾರೆ. ಆದ್ದರಿಂದ ಶಾಂತಿ ಮತ್ತು ಸೌಹಾರ್ದತೆ ಉಳಿಸುವುದು ಅತ್ಯಂತ ಅಗತ್ಯವೆಂದರು.

ರೋಟರಿ ಮಾಜಿ ಡಿಸ್ಟ್ರಿಕ್ಟ್ ಗವರ್ನರ್ ರವಿ ವಾದ್ರಾಮಾನಿ ಮಾತನಾಡಿ, ಯುದ್ಧಗಳಿಂದ ಅಮಾಯಕರ ಜೀವಹಾನಿಯಾಗುತ್ತದೆ. ಆರ್ಥಿಕ ಸಂಕಷ್ಟ ಹಾಗೂ ಮಾನವೀಯ ಮೌಲ್ಯಗಳ ಹಾನಿ ಸಂಭವಿಸುತ್ತದೆ. ಶಾಂತಿಯೇ ಅಭಿವೃದ್ಧಿಗೆ ಮೂಲವಾಗಿದ್ದು, ಅದನ್ನು ಕಾಪಾಡುವುದು ಎಲ್ಲರ ಕರ್ತವ್ಯವೆಂದರು.

ಈ ಶಾಂತಿ ನಡಿಗೆಯಲ್ಲಿ ಶಾಹೀನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಅಬ್ದುಲ್ ಖದೀರ್, ರೋಟರಿ ಅಸಿಸ್ಟೆಂಟ್ ಗವರ್ನರ್ ಹಾವಶೆಟ್ಟಿ ಪಾಟೀಲ್, ನಿತೀನ್ ಕರ್ಪೂರ, ಬೀದರ್ ಜಿಲ್ಲೆಯ ಎಲ್ಲಾ ರೋಟರಿ ಕ್ಲಬ್ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು, ಶಾಹೀನ್ ಶಿಕ್ಷಣ ಸಂಸ್ಥೆಯ ಹಾಗೂ ಸೈನಿಕ ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿ ಶಾಂತಿ ಸಂದೇಶ ಸಾರಿದರು.

## ಮಿನಿ ನ್ಯೂಸ್

### ಶಿಕ್ಷಣದಲ್ಲಿ ತಾಂತ್ರಿಕ ಕೌಶಲ್ಯ ಬಳಕೆ ಅವಶ್ಯಕ

• ಉದಯವಾಹಿನಿ, ಕಲಬುರಗಿ

ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನ ಬಹಳ ಮುಂದುವರೆದಿದ್ದು ಎಐ ತಾಂತ್ರಿಕ ಕೌಶಲ್ಯ ಜ್ಞಾನ ಬಹಳ ಮುಖ್ಯವಾಗಿದೆ ಎಂದು ಶರಣ ಬಸವ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ.ಲಕ್ಷ್ಮೀ ಪಾಟೀಲ ಮಾಕಾ ಹೇಳಿದರು. ನಗರದ ಗೋದುತಾಯಿ ಬಿ.ಎಡ್ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಇಂದಿನ ಡಿಜಿಟಲ್ ಯುಗದಲ್ಲಿ ಎಐ ಒಂದು ಕ್ರಾಂತಿಕಾರಿ ತಂತ್ರಜ್ಞಾನವಾಗಿ ಬೆಳೆಯುತ್ತಿದೆ. ಭವಿಷ್ಯದ ಶಿಕ್ಷಕರಾಗುವ ನೀವು ಎಐ ತಂತ್ರಜ್ಞಾನವನ್ನು ಶಿಕ್ಷಣದಲ್ಲಿ ಸಮರ್ಥವಾಗಿ ಬಳಸುವ ಕೌಶಲ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಿ. ಶಿಕ್ಷಣ ಕ್ಷೇತ್ರ ವೇಗವಾಗಿ ಬದಲಾಗುತ್ತಿದ್ದು, ಡಿಜಿಟಲ್ ತಂತ್ರಜ್ಞಾನ, ಹೊಸ ಬೋಧನಾ ವಿಧಾನಗಳು, ವಿದ್ಯಾರ್ಥಿ ಕೇಂದ್ರಿತ ಕಲಿಕೆ ಇವುಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಪೂಜ್ಯ ಡಾ.ಅಪ್ಪ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಪೂಜ್ಯ ಡಾ.ಅವ್ವಾಜಿಯವರು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಹಗಲಿರುಳು ಚಿಂತಿಸುತ್ತಾರೆ ಎಂದು ಹೇಳಿದರು.

### ಸೇತುವೆ ನಿರ್ಮಾಣ ಕಾಮಗಾರಿಗೆ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಚಾಲನೆ

• ಉದಯವಾಹಿನಿ, ಸೇಡಂ

ತಾಲ್ಲೂಕಿನ ಗಂಗಾರಾವಲಪಲ್ಲಿಯಿಂದ ಶಹಾಬಾಜಪುರ ರಸ್ತೆಗೆ 80 ಲಕ್ಷ ವೆಚ್ಚದಲ್ಲಿ ಸೇತುವೆ ನಿರ್ಮಾಣ ಹಾಗೂ ರಸ್ತೆ ಸುಧಾರಣೆಯ ಕಾಮಗಾರಿಗೆ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ್ ಊಡಗಿ ಅವರು ಭೂಮಿ ಪೂಜೆ ಸಲ್ಲಿಸಿ


ಉದಯವಾಹಿನಿ ಚಿತ್ರ

ಚಾಲನೆ ನೀಡಿ ಮಾತನಾಡಿದರು. ಈ ವೇಳೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಎಇಇ ವಿಶ್ವನಾಥ್ ಮಾವಿನಗಿಡ, ಕ್ಷೇತ್ರ ಶಿಕ್ಷಣಾಧಿಕಾರಿ ಮಾರುತಿ ಹುಜುರಾತಿ,ಇಓ ಚನ್ನಪ್ಪ ರಾಯಣ್ಣನವರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಗಂಗಾರಾವಲಪಲ್ಲಿ ಗ್ರಾಮದ ಅಭಿವೃದ್ಧಿಗೆ ಕಾರ್ಯಯೋಜನೆಯಲ್ಲಿ ಅನುದಾನವನ್ನಿರಿಸಿ ಸಾಕಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರತಿ ಮಳೆಗಾಲದಲ್ಲಿ ಗಂಗಾರಾವಲಪಲ್ಲಿಯ ಸೇತುವೆ ಸಂಚಾರಕ್ಕೆ ಸಮಸ್ಯೆಯಾಗುತ್ತಿತ್ತು, ಇದೀಗ 80 ಲಕ್ಷ ರೂಗಳ ಅನುದಾನದಲ್ಲಿ ಸೇತುವೆ ಕಾಮಗಾರಿ ಹಾಗೂ ರಸ್ತೆ ಸುಧಾರಣೆಗೆ ಅಡಿಗಲ್ಲು ಇಂದು ಹಾಕಲಾಗಿದೆ.

### ಮಾರಾಪುರದಲ್ಲಿ ಅಕ್ರಮ ಮರಳು ಸಾಗಾಣಿಕೆ ಮೇಲೆ ದಾಳಿ: ಎರಡು ವಾಹನ ಜಪ್ತಿ

• ಉದಯವಾಹಿನಿ, ರಬಕವಿ

ತಾಲ್ಲೂಕಿನ ಮಾರಾಪುರ ಗ್ರಾಮದ ವ್ಯಾಪ್ತಿಯ ಘಟಪ್ರಭಾ ನದಿ ಪಾತ್ರದಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಸಾಗಾಣಿಕೆ ವಿರುದ್ಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಮಹತ್ವದ ದಾಳಿ ನಡೆಸಿದ್ದಾರೆ. ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳ ತಂಡವು ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಎರಡು ವಾಹನಗಳನ್ನು ಜಪ್ತಿ ಮಾಡಿದೆ. ನಿಯಮಬಾಹಿರವಾಗಿ ಮರಳು ಸಾಗಣೆ ಮಾಡುತ್ತಿದ್ದ ಹಿನ್ನೆಲೆ ಒಟ್ಟು ರೂ.1,01,560 (ಒಂದು ಲಕ್ಷದ ಒಂದು ಸಾವಿರ ಐದು ನೂರು ಅರವತ್ತು ರೂಪಾಯಿ) ದಂಡ ವಿಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮುಂದುವರಿದಿದ್ದು, ಆರೋಪಿಗಳ ವಿರುದ್ಧ ಬಿ.ಎನ್.ಎಸ್.ಎಸ್. ಕಲಂ 223, ಎಂ.ಎಂ.ಆರ್.ಡಿ. ಕಾಯ್ದೆ 1957 ಹಾಗೂ ಕೆ.ಎಂ.ಎಂ.ಸಿ.ಆರ್. ನಿಯಮಗಳಡಿ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ.

ನದಿ ಮೂಲಗಳಿಂದ ನೈಸರ್ಗಿಕ ಸಂಪನ್ಮೂಲಗಳ ಲೂಟಿಯನ್ನು ತಡೆಯಲು ಕಂದಾಯ ಮತ್ತು ಗಣಿ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಅಕ್ರಮ ಗಣಿಗಾರಿಕೆ ಮತ್ತು ಮರಳು ಸಾಗಾಣಿಕೆಯಲ್ಲಿ ತೊಡಗುವವರ ವಿರುದ್ಧ ಮುಂದಿನ ದಿನಗಳಲ್ಲೂ ಇಂತಹ ದಾಳಿಗಳು ಮುಂದುವರಿಯಲಿವೆ ಎಂದು ಎಚ್ಚರಿಸಿದ್ದಾರೆ.

### ವಸತಿ ಕಾಲೇಜು ಲೋಕಾರ್ಪಣೆ ಮೇ 3ರಂದು

• ಉದಯವಾಹಿನಿ, ಕೊಪ್ಪಳ

ತಾಲ್ಲೂಕಿನ ಕೋಳೂರು-ಕಾಟ್ರಳ್ಳಿ ಬಳಿಯ 48 ಎಕರೆ ಜಮೀನಿನಲ್ಲಿ ರೂ. 60 ಕೋಟಿ ವೆಚ್ಚದಲ್ಲಿ ತಲೆಎತ್ತಿರುವ 1,500 ವಿದ್ಯಾರ್ಥಿನಿಯರ ಸಾಮರ್ಥ್ಯದ ಗವಿಸಿದ್ದೇಶ್ವರ ಗುರುಕುಲ ವಿದ್ಯಾರ್ಥಿನಿಯರ ಪದವಿಪೂರ್ವ ವಸತಿ ಕಾಲೇಜು ಮೇ 3ರಂದು ಲೋಕಾರ್ಪಣೆಗೊಳ್ಳಲಿದೆ. ವಿಜ್ಞಾನ ಮತ್ತು ಕಲಾ ವಿಭಾಗ ಪ್ರವೇಶಕ್ಕೆ ಅರ್ಜಿ ಸಲ್ಲಿಸುವವರು ಕರ್ನಾಟಕದ ನಿವಾಸಿಯಾಗಿರಬೇಕು. ವಿಜ್ಞಾನ ಕೋರ್ಸಿಗೆ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ಹಾಗೂ ಕಲಾ ವಿಭಾಗಕ್ಕೆ ಸಮಾಜ ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳಲ್ಲಿ ಕನಿಷ್ಠ 60ಕ್ಕೂ ಹೆಚ್ಚು ಅಂಕ ಪಡೆದಿರಬೇಕು. ವಿಶಾಲವಾದ ಭೋಜನಾಲಯ-ಸಭಾಂಗಣ: ಅತ್ಯುತ್ತಮವಾದ ಗಾಳಿ ಮತ್ತು ಬೆಳಕು ಹೊಂದಿದ ಭೋಜನಾಲಯವು ಏಕಕಾಲಕ್ಕೆ 1,600 ವಿದ್ಯಾರ್ಥಿಗಳು ಭೋಜನ ಮಾಡಬಹುದಾಗಿದೆ. ಬೃಹದಾಕಾರದ ಸಭಾಂಗಣ ಇದೆ. ಅತ್ಯಾಧುನಿಕ ವ್ಯವಸ್ಥೆಯ ಅಡುಗೆ ಮನೆ, ಕುಡಿಯುವ ನೀರಿನ ವ್ಯವಸ್ಥೆ, ಕೈತೊಳೆಯುವ ಸ್ಥಳ, ನಿರ್ವಹಣಾ ಕಚೇರಿ, ವೇದಿಕೆಯು ಆಕರ್ಷಕವಾಗಿದೆ. ಸ್ಟೀಮ್ ಕುಕ್ಕಿಂಗ್ ಯಂತ್ರದ ಸೌಲಭ್ಯವೂ ಇರುವುದು ಗಮನಾರ್ಹ.

### ಖಾತೆ ಬದಲಾವಣೆ ಶುಲ್ಕ ದಂಧೆ: ಕ್ರಮಕ್ಕೆ ಒತ್ತಾಯ

• ಉದಯವಾಹಿನಿ, ಶಿವಮೊಗ್ಗ


ಸರ್ಕಾರದ ಸುತ್ತೋಲೆಗಳಿಗೆ ವಿರುದ್ಧವಾಗಿ ಖಾತೆ ಬದಲಾವಣೆ ಶುಲ್ಕವನ್ನು ಹೆಚ್ಚಾಗಿ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿ ನಾಗರಿಕ ಹಿತರಕ್ಷಣಾ ವೇದಿಕೆಗಳ ಒಕ್ಕೂಟವು ಮಹಾನಗರ ಪಾಲಿಕೆಯ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಈ ಕುರಿತು ಪಾಲಿಕೆ ಆಯುಕ್ತ ಕೆ. ಮಾಯಣ್ಣಗೌಡ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. 2006ರಿಂದಲೇ ಸರ್ಕಾರ ಮುದ್ರಾಂಕ ಶುಲ್ಕದ ಮೇಲೆ ಶೇ 2ರಷ್ಟು ಮಾತ್ರ ಖಾತೆ ಬದಲಾವಣೆ ಶುಲ್ಕ ವಿಧಿಸಬೇಕು ಎಂದು ಸೂಚನೆ ನೀಡಿದ್ದರೂ, ಮಹಾನಗರ ಪಾಲಿಕೆ ಆಸ್ತಿ ಮೌಲ್ಯದ ಮೇಲೆ ಶೇ 0.5ರಷ್ಟು ಶುಲ್ಕ ವಸೂಲಿ ಮಾಡುತ್ತಿದೆ. ಇದರಿಂದ ತೆರಿಗೆದಾರರು ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ ಎಂದು ದೂರಲಾಗಿದೆ. ಹೆಚ್ಚುವರಿ ಶುಲ್ಕ ವಸೂಲಿ ತಕ್ಷಣ ನಿಲ್ಲಿಸಿ, ಈಗಾಗಲೇ ವಸೂಲಾದ ಹೆಚ್ಚುವರಿ ಹಣವನ್ನು ಹಿಂತಿರುಗಿಸಬೇಕು ಎಂದು ಆಗ್ರಹಿಸಿದ ಒಕ್ಕೂಟದ ಸದಸ್ಯರು, ನಗರದಲ್ಲಿ ಅನಧಿಕೃತ ಕಟ್ಟಡಗಳು ಹೆಚ್ಚುತ್ತಿರುವುದಕ್ಕೂ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ ಎಂದು ಆರೋಪಿಸಿದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ವಿ.ವಸಂತ್ ಕುಮಾರ್, ಸತೀಶ್ ಕುಮಾರ್ ಶೆಟ್ಟಿ, ಎಸ್.ಬಿ. ಅಶೋಕ್ ಕುಮಾರ್ ಗಾಂಧಿ, ಜನಮೇಜಿ ರಾವ್, ನಾರಾಯಣ ಮೂರ್ತಿ ಇದ್ದರು.

# ಉತ್ತರ ಪ್ರದೇಶದಲ್ಲಿ ಶೀಘ್ರವೇ ಮಾಫಿಯಾ ಸಂಪೂರ್ಣವಾಗಿ ಅಂತ್ಯವಾಗಲಿದೆ

**ಲಖನೌ:** ಉತ್ತರ ಪ್ರದೇಶದಲ್ಲಿ ಶೀಘ್ರದಲ್ಲಿಯೇ ಮಾಫಿಯಾ ಅಂತ್ಯವಾಗಲಿದೆ. ಇನ್ನು ಮುಂದೆ ಸರ್ಕಾರದ ಆಡಳಿತದ ಮೇಲೆ ಗೂಂಡಾಗಳ ಪ್ರಭಾವ ಇರುವುದಿಲ್ಲ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ಲಖನೌನ ರಿಸರ್ವ್ ಪೊಲೀಸ್ ಲೈನ್ಸ್‌ನಲ್ಲಿ 2025ರ ಬ್ಯಾಚ್ ಪೊಲೀಸ್ ಕಾನ್ಸ್‌ಟೇಬಲ್‌ಗಳ ಪಾಸಿಂಗ್ ಔಟ್ ಪರೇಡ್‌ನಲ್ಲಿ ಮಾತನಾಡಿದ ಅವರು, 2017ರ ಮೊದಲು ಸಂಕಷ್ಟದಲ್ಲಿದ್ದ ಉತ್ತರ ಪ್ರದೇಶ ಪೊಲೀಸ್ ಇದೀಗ ದೇಶದಲ್ಲಿಯೇ ಅತ್ಯುತ್ತಮ ಪಡೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ರಾಜ್ಯದಲ್ಲಿ ಈಗ ಗಲಭೆಗಳು ನಡೆಯುವುದಿಲ್ಲ, ವಸೂಲಿ ಮತ್ತು ಗೂಂಡಾ ಟ್ಯಾಕ್ಸ್ ಅಂತ್ಯಗೊಂಡಿದೆ. ಅಪರಾಧಿಗಳು ಭಯಭೀತರಾಗಿದ್ದಾರೆ ಮತ್ತು ಪೊಲೀಸರ ಮನೋಬಲ ಉನ್ನತ ಮಟ್ಟದಲ್ಲಿದೆ ಎಂದು ಹೇಳಿದರು.

ಹಿಂದಿನ ಸರ್ಕಾರಗಳನ್ನು ಟೀಕಿಸಿದ ಯೋಗಿ ಆದಿತ್ಯನಾಥ್, ಹಿಂದೆ ಮಹಿಳೆಯರು ಮತ್ತು ವ್ಯಾಪಾರಿಗಳು ಸುರಕ್ಷಿತವಾಗಿರಲಿಲ್ಲ, ರಾಜ್ಯ ಅಸ್ಥಿರತೆ ಮತ್ತು ಅರಾಜಕತೆಯ ಪ್ರತೀಕವಾಗಿತ್ತು. 2017ರ ಮೊದಲು ಗಲಭೆಗಳು ನಡೆದ ಸ್ಥಳಗಳಲ್ಲಿ ಈಗ ಪೊಲೀಸರು ಅವು ಸಂಭವಿಸುವ ಮೊದಲು ತಡೆಗಟ್ಟುತ್ತಿದ್ದಾರೆ ಎಂದು ಹೇಳಿದರು.



ಹೊಸ ನೇಮಕಾತಿಗೊಂಡ ಪೊಲೀಸರಿಗೆ ಸಂದೇಶ ನೀಡಿದ ಅವರು, ಅಪರಾಧ ಕಾನೂನು ಕಠಿಣವಾಗಿರಬೇಕು, ಆದರೆ ನಾಗರಿಕರು ಸಂವೇದನಾಶೀಲವಾಗಿರಬೇಕು ಎಂದರು. ಮಹಿಳಾ ಸಿಬ್ಬಂದಿಯನ್ನು ಅಭಿನಂದಿಸಿ, ಮಹಿಳೆಯರ ಶಕ್ತಿಯಿಂದ, ಶಿಸ್ತಿನಿಂದ ತರಬೇತಿ ಪೂರ್ಣಗೊಳಿಸಿರುವುದು ಶ್ಲಾಘನೀಯ ಎಂದು ಹೇಳಿದರು. 2025ರ ಜೂನ್ 15ರಂದು ಅಮಿತ್ ಶಾ ಅವರು 60 ಸಾವಿರಕ್ಕೂ ಹೆಚ್ಚು ಕಾನ್ಸ್‌ಟೇಬಲ್‌ಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದ್ದು, ಜುಲೈ 21ರಿಂದ ತರಬೇತಿ ಆರಂಭವಾಗಿದೆ ಎಂದು ಹೇಳಿದರು. ಕಳೆದ 9 ವರ್ಷಗಳಲ್ಲಿ 2.18 ಲಕ್ಷಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನೇಮಕವಾಗಿದ್ದು, 1 ಲಕ್ಷಕ್ಕೂ ಹೆಚ್ಚು ಮಂದಿ ಬಡ್ತಿ ಪಡೆದಿದ್ದಾರೆ. 2017ರಿಂದ ಪೊಲೀಸ್ ಬಜೆಟ್ ಮೂರರಷ್ಟು ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದರು.

ರಾಜ್ಯದಲ್ಲಿ 7 ಪೊಲೀಸ್ ಕಮಿಷನರೇಟ್‌ಗಳನ್ನು ಸ್ಥಾಪಿಸಲಾಗಿದ್ದು, ಭಯೋತ್ಪಾದನೆ ವಿರುದ್ಧ ದಳವನ್ನು ರಚಿಸಿ ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ ಮಾದರಿಯಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದರು. ಇದಲ್ಲದೆ, 75 ಜಿಲ್ಲೆಗಳಲ್ಲಿಯೂ ಸೈಬರ್ ಪೊಲೀಸ್ ಠಾಣೆಗಳು ಮತ್ತು ಫಾರೆನ್ಸಿಕ್ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಮಹಿಳಾ ಸುರಕ್ಷತೆಗೆ ಮಿಷನ್ ಶಕ್ತಿ ಯೋಜನೆ ಜಾರಿಗೆ ತಂದಿದ್ದು, ಪ್ರಸ್ತುತ ನೇಮಕಾತಿಯಲ್ಲಿ ಶೇ.20 ಮಹಿಳೆಯರು ಇದ್ದಾರೆ ಎಂದು ತಿಳಿಸಿದರು. ತರಬೇತಿಯಲ್ಲಿ ಹೆಚ್ಚು ಬೆವರು ಸುರಿಸಿದಷ್ಟು, ಮುಂದೆ ರಕ್ತಪಾತ ಕಡಿಮೆಯಾಗುತ್ತದೆ. ಪೊಲೀಸರ ಶಕ್ತಿ ಅವರ ಶಿಸ್ತಿನಲ್ಲಿದೆ ಎಂದು ಆದಿತ್ಯನಾಥ್ ಹೇಳಿದರು.

## ವಿಮಾನ ಇಂಜಿನ್‌ನಲ್ಲಿ ಬೆಂಕಿ 6 ಮಂದಿ ಪ್ರಯಾಣಿಕರಿಗೆ ಗಾಯ




**ನವದೆಹಲಿ:** ದೆಹಲಿಯಿಂದ ಸ್ವಿಡ್ಜರ್‌ಲ್ಯಾಂಡ್‌ಗೆ ತೆರಳುತ್ತಿದ್ದ ವಿಮಾನವೊಂದು ಟೇಕ್‌ಆಫ್ ಆಗುವ ವೇಳೆ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 6 ಮಂದಿ ಪ್ರಯಾಣಿಕರು ಗಾಯಗೊಂಡಿದ್ದು, ದೊಡ್ಡ ದುರಂತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ.

ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಳಿಗ್ಗೆ ಸ್ವಿಡ್ಜರ್‌ಲ್ಯಾಂಡ್ ಜ್ಯೂರಿಚ್‌ಗೆ ತೆರಳಬೇಕಿದ್ದ ಸ್ವಿಸ್ ವಿಮಾನಯಾನ ಸಂಸ್ಥೆಯ ಏರ್‌ಬಸ್ ವಿಮಾನ ಟೇಕ್‌ಆಫ್ ಆಗಲು ರನ್‌ವೇ ಮೇಲೆ ಚಲಿಸುತ್ತಿದ್ದು, ಈ ವೇಳೆ ವಿಮಾನದ ಒಂದು ಇಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿದೆ. ತಕ್ಷಣ ಎಚ್ಚೆತ್ತುಕೊಂಡ ಪೈಲಟ್ ವಿಮಾನವನ್ನು ನಿಲ್ಲಿಸಿದ್ದು, ನಂತರ ವಿಮಾನದ ಕಿಟಕಿ ಬಾಗಿಲುಗಳನ್ನು ತೆರೆದು ಸ್ಲೈಡ್‌ಗಳ ಮೂಲಕ ಪ್ರಯಾಣಿಕರನ್ನು ರನ್‌ವೇನಲ್ಲಿ ಇಳಿಸಲಾಯಿತು.

ವಿಮಾನದಿಂದ ಇಳಿಯುವಾಗ 6 ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ವಿಮಾನದಲ್ಲಿದ್ದ ಎಲ್ಲಾ 228 ಪ್ರಯಾಣಿಕರು ಹಾಗೂ ಸಿಬ್ಬಂದಿ ಪಾರಾಗಿದ್ದು, ಯಾವುದೇ ಅಪಾಯ ಸಂಭವಿಸಿಲ್ಲ. ಕೂದಲೆಳೆಯಿಂದ ದೊಡ್ಡ ದುರಂತವೊಂದು ತಪ್ಪಿದಂತಾಗಿದೆ.

ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಅಗ್ನಿಶಾಮಕ ಪಡೆಯವರು ವಿಮಾನದ ಬೆಂಕಿಯನ್ನು ನಂದಿಸಿ, ಹೆಚ್ಚಿನ ಅನಾಹುತವಾಗುವುದನ್ನು ತಡೆದಿದ್ದಾರೆ. ಈ ಘಟನೆಯ ಬಗ್ಗೆ ಸ್ವಿಸ್ ವಿಮಾನಯಾನ ಸಂಸ್ಥೆ ಪ್ರತಿಕ್ರಿಯಿಸಿದ್ದು, ಇಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ತಕ್ಷಣ ಮುನ್ನೆಚ್ಚರಿಕಾ ಕ್ರಮವಾಗಿ ವಿಮಾನವನ್ನು ನಿಲ್ಲಿಸಿ ಪ್ರಯಾಣಿಕರನ್ನು ಕೆಳಗಿಳಿಸಲಾಗಿದೆ. ಇದಕ್ಕಾಗಿ ನಾವು ವಿಶೇಷ ಟಾಸ್ಕ್‌ಫೋರ್ಸ್ ರಚಿಸಿದ್ದೇವೆ. ಪ್ರಯಾಣಿಕರ ಸುರಕ್ಷತೆ ನಮ್ಮ ಮೊದಲ ಆದ್ಯತೆ ಎಂದು ಹೇಳಿದೆ.

### ಇದು ಕೇವಲ ಪರಿಸರ ರಕ್ಷಣೆಯ ಮಾತಲ್ಲ, ಇದು ನಮ್ಮ ಭವಿಷ್ಯವನ್ನು ರಕ್ಷಿಸುವ ಕುರಿತಾಗಿದೆ

# ವಿದ್ಯುತ್ ಉಳಿತಾಯ ಮತ್ತು ಹಸಿರು ಇಂಧನ ಇಂದಿನ ಅಗತ್ಯ


**ನವದೆಹಲಿ:** ವಿದ್ಯುತ್ ಉಳಿತಾಯ ಮತ್ತು ಹಸಿರು ಇಂಧನ ಬಳಕೆ ಇಂದಿನ ಅಗತ್ಯಗಳಾಗಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ತಮ್ಮ 'ಮನ್ ಕಿ ಬಾತ್'ನಲ್ಲಿ ಭಾರತದ ಇಂಧನ ಸಾಮರ್ಥ್ಯದ ಬಗ್ಗೆ ಒತ್ತಿ ಹೇಳಿದ್ದಾರೆ.

ಭಾರತದ ಅಭಿವೃದ್ಧಿಗೆ ಸೌರಶಕ್ತಿ ಮತ್ತು ಪವನ ಶಕ್ತಿ ಅತ್ಯಗತ್ಯವಾಗಿವೆ. ಇದು ಕೇವಲ ಪರಿಸರ ರಕ್ಷಣೆಯ ಮಾತಲ್ಲ, ಇದು ನಮ್ಮ ಭವಿಷ್ಯವನ್ನು ರಕ್ಷಿಸುವ ಕುರಿತಾಗಿದೆ. ನಾವು ವಿದ್ಯುತ್ ಉಳಿತಾಯ ಮಾಡಬೇಕಿದೆ, ಶುದ್ಧ ಇಂಧನವನ್ನು ಅಳವಡಿಸಿಕೊಳ್ಳಬೇಕಿದೆ. ದೇಶದ ಪ್ರತಿಯೊಂದು ಹಂತದಲ್ಲೂ ಇಂತಹ ಪ್ರಯತ್ನಗಳು ಅವಶ್ಯಕವಾಗಿವೆ.

ದೇಶದ ಪ್ರಗತಿ ವಿಜ್ಞಾನದಿಂದ ಎಂದು ಭಾರತ ನಂಬಿದೆ. ಇದೇ ದೃಷ್ಟಿಕೋನದಿಂದ ವಿಜ್ಞಾನಿಗಳು ನಾಗರಿಕ ಪರಮಾಣು ಕಾರ್ಯಕ್ರಮವನ್ನು ಮುನ್ನಡೆಸುತ್ತಿದ್ದಾರೆ. ಅವರ ಪ್ರಯತ್ನಗಳು ರಾಷ್ಟ್ರ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುತ್ತಿವೆ. ಇದು ನಮ್ಮ ಕೈಗಾರಿಕಾ ಬೆಳವಣಿಗೆ, ಇಂಧನ ವಲಯ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಲಾಭ ದೊರೆತಿದೆ.

ಕೃಷಿಯಿಂದ ಆಧುನಿಕ ನಾವೀನ್ಯಕಾರರು ಸೇರಿದಂತೆ ಎಲ್ಲರಿಗೂ ಭಾರತದ ನಾಗರಿಕ ಪರಮಾಣು ಕಾರ್ಯಕ್ರಮವು ಸಾಕಷ್ಟು ಸಹಾಯ ಮಾಡಿದೆ. ಕೆಲವೇ ದಿನಗಳ ಹಿಂದೆ ತಮಿಳುನಾಡಿನ ಕಲ್ಪಾಕ್ಕಂನಲ್ಲಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಕ್ರಿಟಿಕಲಿಟಿಯನ್ನು ಸಾಧಿಸಿದೆ. ಅಂದರೆ ರಿಯಾಕ್ಟರ್ ಮೊದಲ ಬಾರಿಗೆ ಸ್ವಯಂ-ಸಮರ್ಥನೀಯ ಪರಮಾಣು ಸರಪಳಿ ಕ್ರಿಯೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವ ಹಂತವನ್ನು ತಲುಪಿದೆ.

**ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಲಾಭ**



ಈ ಹಂತವು ರಿಯಾಕ್ಟರ್ ಕಾರ್ಯಾಚರಣೆಯ ಹಂತವನ್ನು ಪ್ರವೇಶಿಸುವುದನ್ನು ಸೂಚಿಸುತ್ತದೆ. ಇದು ಪರಮಾಣು ಶಕ್ತಿ ಪಯಣದಲ್ಲಿ ಭಾರತಕ್ಕೆ ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಇಷ್ಟೇ ಅಲ್ಲದೆ, ಪರಮಾಣು ರಿಯಾಕ್ಟರ್ ಅನ್ನು ಸಂಪೂರ್ಣವಾಗಿ ಸ್ಥಳೀಯ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾಗಿದೆ. ಇದು ಶಕ್ತಿಯ ಉತ್ಪಾದನೆ ಜೊತೆಗೆ, ಭವಿಷ್ಯಕ್ಕಾಗಿ ಹೊಸ ಇಂಧನವನ್ನು ಉತ್ಪಾದಿಸುವ ವ್ಯವಸ್ಥೆಯಾಗಿದೆ ಎಂದಿದ್ದಾರೆ.

ಮಾರ್ಚ್ 2024 ರಲ್ಲಿ ಕಲ್ಪಾಕ್ಕಂನಲ್ಲಿ ರಿಯಾಕ್ಟರ್ ಕೋರ್ ಲೋಡಿಂಗ್ ಅನ್ನು ವೀಕ್ಷಿಸಿದ ಸಮಯವನ್ನು ನನಗೆ ಸ್ಪಷ್ಟವಾಗಿ ನೆನಪಿದೆ. ಭಾರತದ ಪರಮಾಣು ಕಾರ್ಯಕ್ರಮಕ್ಕೆ ಅಮೂಲ್ಯ ಕೊಡುಗೆ ನೀಡಿದ ಎಲ್ಲರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ದೇಶವಾಸಿಗಳ ಜೀವನವನ್ನು ಉತ್ತಮ ಮತ್ತು ಸುಲಭಗೊಳಿಸಲು ಅವರ ಪ್ರಯತ್ನಗಳು ಅತ್ಯಂತ ಶ್ಲಾಘನೀಯವಾಗಿವೆ. ಇದರಿಂದ ಅಭಿವೃದ್ಧಿ ಹೊಂದಿದ ಭಾರತದ ನಮ್ಮ ಸಂಕಲ್ಪಕ್ಕೆ ಮತ್ತಷ್ಟು ಚೈತನ್ಯ ದೊರೆಯುತ್ತದೆ. ಇಂದು ತಾವು ಅದೃಶ್ಯವಾದ ಒಂದು ಶಕ್ತಿಯ ಬಗ್ಗೆ ಮಾತನಾಡಲು ಬಯಸುತ್ತೇನೆ. ಅದಿಲ್ಲದೆ ನಮ್ಮ ಜೀವನ ಒಂದು ಕ್ಷಣವೂ ಉಳಿಯಲಾರದು. ಈ ಶಕ್ತಿ ಭಾರತವನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ. ಅದೇ ನಮ್ಮ ಪವನ ಶಕ್ತಿ. ನಮ್ಮ ಪ್ರಾಚೀನ ಗ್ರಂಥಗಳಲ್ಲಿ 'ವಾಯುರ್ವಾ ಇತಿ ವ್ಯಷ್ಟಿಃ, ವಾಯುರೇವ ಸಮಷ್ಟಿಃ . ಅಂದರೆ ಗಾಳಿಯು ಕೇವಲ ಒಂದು ಅಂಶವಲ್ಲ, ಅದು ಜೀವನದ ಶಕ್ತಿ, ಅದು ಬ್ರಹ್ಮಾಂಡದ ಶಕ್ತಿ ಎಂದು ಉಲ್ಲೇಖಿಸಲಾಗಿದೆ. ಈ ಪವನ ಶಕ್ತಿಯೇ ಭಾರತದ ಅಭಿವೃದ್ಧಿಯ ಹೊಸ ಗಾಥೆಯನ್ನು ಬರೆಯುತ್ತಿದೆ. ಭಾರತ ಇತ್ತೀಚೆಗೆ ಪವನ ಶಕ್ತಿಯಲ್ಲಿ ಪ್ರಮುಖ ಮೈಲಿಗಲ್ಲು ಸಾಧಿಸಿದೆ.

**ಉದ್ಯೋಗಕ್ಕಾಗಿ ಹೊಸ ಮಾರ್ಗಗಳು ತೆರೆದುಕೊಳ್ಳುತ್ತಿವೆ**

**ಹಿಂದೆ ಮರುಭೂಮಿಗಳು ಮಾತ್ರ ಗೋಚರಿಸುತ್ತಿದ್ದಂತಹ ಗುಜರಾತ್‌ನ ಕಚ್, ಪಾಠಣ್ ಮತ್ತು ಬನಾಸ್ ಕಾಂತಾದಂತಹ ಪ್ರದೇಶಗಳು ಈಗ ದೊಡ್ಡ ನವೀಕರಿಸಬಹುದಾದ ಇಂಧನ ಉದ್ಯಾನವನಗಳಿಗೆ ನೆಲೆಯಾಗಿವೆ. ಯುವಕರು ಇದರಿಂದ ಪ್ರಯೋಜನ ಪಡೆಯುತ್ತಿದ್ದಾರೆ, ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದ್ದಾರೆ, ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ ಮತ್ತು ಉದ್ಯೋಗಕ್ಕಾಗಿ ಹೊಸ ಮಾರ್ಗಗಳು ತೆರೆದುಕೊಳ್ಳುತ್ತಿವೆ ಎಂದು ವಿವರಿಸಿದ್ದಾರೆ.**

**ಜಗತ್ತು ನಮ್ಮ ಕಡೆಗೆ ದೃಷ್ಟಿ ನೆಟ್ಟಿದೆ**

**ಭಾರತದ ಪವನ ಶಕ್ತಿ ಉತ್ಪಾದನಾ ಸಾಮರ್ಥ್ಯವು ಈಗ 56 ಗಿಗಾ ವ್ಯಾಟ್‌ಗಳನ್ನು ಮೀರಿದೆ. ಕಳೆದ ಒಂದು ವರ್ಷದಲ್ಲಿ ಸುಮಾರು 6 ಗಿಗಾ ವ್ಯಾಟ್‌ಗಳಷ್ಟು ಸಾಮರ್ಥ್ಯವನ್ನು ಹೊಸದಾಗಿ ಸೇರಿಸಲಾಗಿದೆ. ಪವನ ಶಕ್ತಿಯಲ್ಲಿ ಭಾರತ ವೇಗವಾಗಿ ಪ್ರಗತಿ ಸಾಧಿಸುತ್ತಿದೆ ಮತ್ತು ಜಗತ್ತು ನಮ್ಮ ಕಡೆಗೆ ದೃಷ್ಟಿ ನೆಟ್ಟಿದೆ ಎಂದಿದ್ದಾರೆ. ಭಾರತ ಪವನ ಶಕ್ತಿ ಸಾಮರ್ಥ್ಯದಲ್ಲಿ ವಿಶ್ವದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಗುಜರಾತ್, ತಮಿಳುನಾಡು, ಮಹಾರಾಷ್ಟ್ರ ಮತ್ತು ರಾಜಸ್ಥಾನ ಸೇರಿದಂತೆ ದೇಶದ ಹಲವು ರಾಜ್ಯಗಳು ಈ ವಲಯದಲ್ಲಿ ಸಾಧನೆಯನ್ನು ಮೆರೆದಿವೆ.**

## ಕೊಲಂಬಿಯಾದಲ್ಲಿ ಬಸ್‌ನಲ್ಲಿ ಬಾಂಬ್ ಸ್ಫೋಟ : 13 ಮಂದಿ ಸಾವು

**ಬೊಗೋಟಾ:** ಕೊಲಂಬಿಯಾದಲ್ಲಿ ಸಂಭವಿಸಿದ ಭೀಕರ ಬಾಂಬ್ ಸ್ಫೋಟದಲ್ಲಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ 13 ಮಂದಿ ಸಾವನ್ನಪ್ಪಿದ್ದು, ಕನಿಷ್ಠ 38 ಮಂದಿ ಗಾಯಗೊಂಡಿದ್ದಾರೆ. ಈ ದಾಳಿ ಹೆಚ್ಚುತ್ತಿರುವ ಮಾದಕ ವಸ್ತುಗಳ ಕಳ್ಳಸಾಗಣೆ ಸಂಬಂಧಿತ ಹಿಂಸಾಚಾರದ ಭಾಗವಾಗಿದ್ದು, ದೇಶದ ಸೇನಾ ಮುಖ್ಯಸ್ಥರು ಇದನ್ನು ಭಯೋತ್ಪಾದಕ ಕೃತ್ಯವೆಂದು ಬಣ್ಣಿಸಿದ್ದಾರೆ. ಕೌಕಾ ಪ್ರಾಂತ್ಯದ ಗವರ್ನರ್ ಆಕ್ಟಾವಿಯೊ ಗುಜ್‌ಮನ್ ಅವರು ಎಕ್ಸ್‌ನಲ್ಲಿ ತಿಳಿಸಿದಂತೆ, ಕಾಜಿಬಿಯೊ ಪಟ್ಟಣದ ಪಾನ್-ಅಮೆರಿಕನ್ ಹೆದ್ದಾರಿಯಲ್ಲಿ ಸಾಗುತ್ತಿದ್ದ ಬಸ್ ಮೇಲೆ ಸ್ಫೋಟಕ ಸಾಧನವನ್ನು ಸಿಡಿಸಲಾಗಿದೆ ಎಂದು ತಿಳಿಸಲಾಗಿದೆ. ಗಾಯಗೊಂಡವರಲ್ಲಿ ಐದು ಮಕ್ಕಳು ಸೇರಿದ್ದಾರೆ ಎಂದು ಕೌಕಾ ಆರೋಗ್ಯ ಕಾರ್ಯದರ್ಶಿ ಕ್ಯಾರೋಲಿನಾ ಕಾಮಾಗೊ ಸ್ಥಳೀಯ ಟಿವಿ ಚಾನೆಲ್‌ಗೆ ತಿಳಿಸಿದ್ದಾರೆ.

ಕೊಲಂಬಿಯಾದ ಸಶಸ್ತ್ರ ಪಡೆಗಳ ಕಮಾಂಡರ್ ಜನರಲ್ ಹುಗೋ ಲೋಪೆಜ್ ಅವರು ಈ ದಾಳಿಗೆ ಇವಾನ್ ಮೊರ್ದಿಸ್ಕೊ ಎಂಬ ಅತಿ ದೊಡ್ಡ ಅಪರಾಧಿಯ



ನೆಟ್‌ವರ್ಕ್ ಹಾಗೂ ಜೈಮೆ ಮಾರ್ಟಿನೆಜ್ ಘಟಕ ಹೊಣೆ ಎಂದು ಆರೋಪಿಸಿದ್ದಾರೆ. ಈ ಗುಂಪುಗಳು 2016ರಲ್ಲಿ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡ ನಂತರವೂ ಶಾಂತಿ ಒಪ್ಪಂದವನ್ನು ಪಾಲಿಸದ ಫಾರ್ಕ್ ಸಂಘಟನೆಯ ಭಿನ್ನಮತೀಯ ಗುಂಪುಗಳಾಗಿವೆ.

ಇವುಗಳಲ್ಲಿ ಜಮುಂಡಿ ಗ್ರಾಮೀಣ ಪ್ರದೇಶದ ಪೊಲೀಸ್ ಠಾಣೆಯ ಮೇಲೆ ಗುಂಡಿನ ದಾಳಿ ಮತ್ತು ಎಲ್ ಟಾಂಬೊದಲ್ಲಿನ ನಾಗರಿಕ ವಿಮಾನಯಾನ ರೇಡಾರ್ ಕೇಂದ್ರದ ಮೇಲೆ ದಾಳಿ ಸೇರಿವೆ. ಅಲ್ಲದೆ, ಸ್ಫೋಟಕಗಳಿಂದ ತುಂಬಿದ್ದ 3 ಡ್ರೋನ್‌ಗಳನ್ನು ಭದ್ರತಾ ಪಡೆಗಳು ನಿಷ್ಕ್ರಿಯಗೊಳಿಸಿದ್ದವು. ಈ ಪ್ರದೇಶದಲ್ಲಿ ಹಿಂಸಾಚಾರ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಕ್ಷಣಾ ಸಚಿವ ಪೆಡ್ರೊ ಸ್ಯಾಂಚೆಜ್ ನೇತೃತ್ವದಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಸಭೆ ನಡೆಸುತ್ತಿದ್ದರು. ಇದೇ ವೇಳೆ ಈ ಭೀಕರ ಸ್ಫೋಟ ಸಂಭವಿಸಿತು. ವ್ಯಾಲ್ಲೆ ಡೆಲ್ ಕೌಕಾ ಪ್ರಾಂತ್ಯದ ಗವರ್ನರ್ ಫ್ರಾನ್ಸಿಸ್ಕಾ ಟೊರೊ ತಕ್ಷಣದ ಭದ್ರತಾ ನೆರವು ನೀಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.


> **ರಾಷ್ಟ್ರಪತಿ ಗುಸ್ಟಾವೊ ಪೆಟ್ರೋ ಅವರು ದಾಳಿಯನ್ನು ಖಂಡಿಸಿ, ಈ ದಾಳಿಗೆ ಕಾರಣರಾದವರು ಭಯೋತ್ಪಾದಕರು, ಫಾಸಿಸ್ಟ್‌ಗಳು ಹಾಗೂ ಮಾದಕ ವಸ್ತು ವ್ಯಾಪಾರಿಗಳು ಎಂದು ಹೇಳಿದ್ದಾರೆ. ಈ ದಾಳಿ ಇತ್ತೀಚೆಗೆ ಆ ಪ್ರದೇಶದಲ್ಲಿ ನಡೆದ ಸರಣಿ ಸ್ಫೋಟಗಳ ಭಾಗವಾಗಿದೆ. ಕಳೆದ ಎರಡು ದಿನಗಳಲ್ಲಿ ಕನಿಷ್ಠ 26 ಘಟನೆಗಳು ನಡೆದಿದ್ದು, ಅವು ಸಾಮಾನ್ಯ ನಾಗರಿಕರನ್ನು ಗುರಿಯಾಗಿಸಿಕೊಂಡಿವೆ.** -ಅಧಿಕಾರಿಗಳು

## ಹುಟ್ಟುಹಬ್ಬದ ಪಾರ್ಟಿ, ಗುಂಡು ಹಾರಿಸಿ ಮೂವರ ಹತ್ಯೆ

**ಬುಲಂದ್‌ಶಹರ್:** ಹುಟ್ಟುಹಬ್ಬದ ಆಚರಿಸುತ್ತಿದ್ದ ಸ್ನೇಹಿತರ ನಡುವಿನ ಸಣ್ಣ ಭಿನ್ನಾಭಿಪ್ರಾಯಕ್ಕೆ ಗುಂಡಿನ ಚಕಮಕಿ ನಡೆದು ಘರ್ಷಣೆ ಉಂಟಾಗಿ ದಾಳಿಯಲ್ಲಿ ಮೂವರು ಯುವಕರು ಸಾವನ್ನಪ್ಪಿರುವ ಘಟನೆ ಉತ್ತರಪ್ರದೇಶದ ಬುಲಂದ್‌ಶಹರ್ ಜಿಲ್ಲೆಯ ಖುರ್ಜಾ ನಗರ ಪ್ರದೇಶದಲ್ಲಿ ನಡೆದಿದೆ.

ಘರ್ಷಣೆಯಲ್ಲಿ ಮನೀಶ್ ಸೈನಿ, ಆಕಾಶ್ ಸೈನಿ ಮತ್ತು ಅಮರದೀಪ್ ಸಾವನ್ನಪ್ಪಿರುವ ದುರ್ದೈವಿಗಳು. ನೆಹರೂಪುರ ಚುಂಗಿಯ ಸುಭಾಷ್ ರಸ್ತೆಯಲ್ಲಿರುವ ಜಿಮ್‌ನಲ್ಲಿ ಈ ಘಟನೆ ನಡೆದಿದ್ದು, ಜಿತು ಎಂಬ ಯುವಕ ಸ್ನೇಹಿತರೊಂದಿಗೆ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದ. ಆದಾಗ್ಯೂ, ಜಿತು ಮುಖಕ್ಕೆ ಕೇಕ್ ಹಚ್ಚಿದಾಗ ಪರಿಸ್ಥಿತಿ ನಾಟಕೀಯವಾಗಿ ಬದಲಾಗಿದೆ.

ಸ್ನೇಹಿತರ ನಡುವೆ ಮಾತಿನ ಚಕಮಕಿ ನಡೆದು ಹಿಂಸಾತ್ಮಕ ಘರ್ಷಣೆಗೆ ತಿರುಗಿದೆ. ಈ ನಡುವೆ ಕೆಲವರು ಮೂವರು ಯುವಕರನ್ನು ಗುರಿಯಾಗಿಸಿಕೊಂಡು ಅವರ ತಲೆಗೆ ಗುಂಡು ಹಾರಿಸಿದ್ದಾರೆ. ಗುಂಡೇಟು ತಿಂದ ಮನೀಶ್ ಸೈನಿ, ಆಕಾಶ್ ಸೈನಿ ಮತ್ತು ಅಮರದೀಪ್ ಕುಸಿದು ಬಿದ್ದು,



ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.ಸುದ್ದಿ ತಿಳಿದು ಸ್ಥಳೀಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಘಟನಾ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಯಾಗಿದ್ದು, ಗ್ರಾಮೀಣ ಎಸ್ಪಿ ಆಂಟ್ರಿಕ್ ಜೈನ್ ಸೇರಿದಂತೆ ಹಿರಿಯ ಅಧಿಕಾರಿಗಳು ಸ್ಥಳದಲ್ಲಿ ಪೊಲೀಸ್ ಭದ್ರತೆಯನ್ನು ನಿಯೋಜಿಸಿದ್ದಾರೆ.

ವಿಧಿವಿಜ್ಞಾನ ತಂಡಗಳು ಸ್ಥಳದಿಂದ ಪುರಾವೆಗಳನ್ನು ಸಂಗ್ರಹಿಸಿವೆ. ಪರಿಸ್ಥಿತಿಯ ಗಂಭೀರತೆಯ ಹಿನ್ನೆಲೆಯಲ್ಲಿ, ಶಂಕಿತರನ್ನು ಬಂಧಿಸಲು ತಂಡಗಳನ್ನು ರಚಿಸಲಾಗಿದ್ದು, ಶೀಘ್ರದಲ್ಲೇ ಬಂಧಿಸುವ ನಿರೀಕ್ಷೆಯಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

## ಇರಾನ್ ದಾಳಿಯಲ್ಲಿ ಅಮೆರಿಕದ ನೆಲೆಗಳಿಗೆ ಭಾರಿ ಹಾನಿ: ದುರಸ್ತಿಗೆ ಬೇಕು ಶತಕೋಟಿ ಡಾಲರ್

**ಟೆಹ್ರಾನ್:** ಇತ್ತೀಚೆಗೆ ಇರಾನ್ ನಡೆಸಿದ ದಾಳಿಯಿಂದ ಪರ್ಷಿಯನ್ ಕೊಲ್ಲಿಯಲ್ಲಿರುವ ಅಮೆರಿಕದ ಸೇನಾ ನೆಲೆಗಳು ಮತ್ತು ಉಪಕರಣಗಳು ಹೆಚ್ಚು ಹಾನಿಗೊಳಗಾಗಿವೆ. ಇಲ್ಲಿಯವರೆಗೆ ಆಗಿರುವ ನಷ್ಟದ ಪ್ರಮಾಣವು ತುಂಬಾ ಹೆಚ್ಚಾಗಿದೆ. ದುರಸ್ತಿಗೆ ಶತಕೋಟಿ ಡಾಲರ್ ವೆಚ್ಚವಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಫೆಬ್ರವರಿ 28 ರಂದು ಯುದ್ಧ ಪ್ರಾರಂಭವಾದಾಗಿನಿಂದ ಇರಾನ್ ಈ ಪ್ರದೇಶದ ಹಲವಾರು ದೇಶಗಳಲ್ಲಿ ದಾಳಿ ನಡೆಸಿದೆ. ಈ ದಾಳಿಗಳು ಕನಿಷ್ಠ ಏಳು ದೇಶಗಳಲ್ಲಿನ ಪ್ರಮುಖ ಮಿಲಿಟರಿ ತಾಣಗಳ ಮೇಲೆ ಪರಿಣಾಮ ಬೀರಿವೆ. ಅವುಗಳಲ್ಲಿ ಶೇಖರಣಾ ಗೋದಾಮುಗಳು, ಕಾರ್ಯಾಚರಣೆಗಳನ್ನು ನಿರ್ವಹಿಸುವ ಕಮಾಂಡ್ ಕೇಂದ್ರಗಳು, ವಿಮಾನ ಹ್ಯಾಂಗರ್‌ಗಳು ಮತ್ತು ಉಪಗ್ರಹ ಸಂವಹನಕ್ಕಾಗಿ ಬಳಸುವ ಸಿಸ್ಟಮ್‌ಗಳು ಸೇರಿವೆ.

ಇರಾನ್ ದಾಳಿಯಿಂದ ರನ್‌ವೇಗಳು, ರಾಡಾರ್ ಸಿಸ್ಟಮ್‌ಗಳು ಮತ್ತು ಕೆಲವು ವಿಮಾನಗಳು ಸಹ ಹಾನಿಗೊಳಗಾಗಿವೆ. ಇವೆಲ್ಲವೂ ಮಿಲಿಟರಿ




ಚಲನೆ , ಕಣ್ಗಾವಲಿಗೆ ನಿರ್ಣಾಯಕವಾಗಿವೆ. ಒಂದು ಸಂದರ್ಭದಲ್ಲಿ, ಹಳೆಯ ಇರಾನಿನ ಈ-5 ಫೈಟರ್ ಜೆಟ್, ಅಮೆರಿಕದ ಪ್ರಬಲ ಏರ್ ಡಿಫೆನ್ಸ್ ಸಿಸ್ಟಮ್ ಭೇದಿಸಿ ದಾಳಿ ನಡೆಸಲು ಸಾಧ್ಯವಾಯಿತು. ಇರಾನಿನ ದಾಳಿಯಿಂದ ನಿಜವಾಗಿ ಎಷ್ಟು ಹಾನಿಯಾಗಿದೆ ಎಂಬುದರ ಕುರಿತು ಅಮೆರಿಕದ ರಕ್ಷಣಾ ಇಲಾಖೆ ಸಂಪೂರ್ಣ ವಿವರಗಳನ್ನು ಹಂಚಿಕೊಂಡಿಲ್ಲ. ಆ ಪ್ರದೇಶದಲ್ಲಿ ಮಿಲಿಟರಿ ಕಾರ್ಯಾಚರಣೆಗಳನ್ನು ನಿರ್ವಹಿಸುವ ಅಮೆರಿಕದ ಕೇಂದ್ರೀಯ ಕಮಾಂಡ್ ಕೂಡ ಹಾನಿಯ ವ್ಯಾಪ್ತಿಯ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ. ಯುದ್ಧ ಪ್ರಾರಂಭವಾಗುವ ಮೊದಲು, ಟ್ರಂಪ್ 1.5 ಟ್ರಿಲಿಯನ್ ಡಾಲರ್ ರಕ್ಷಣಾ ಬಜೆಟ್ ಘೋಷಿಸಿದ್ದರು. ಇದು ಹಿಂದಿನ ವರ್ಷಕ್ಕಿಂತ ಶೇಕಡಾ 50 ಕ್ಕಿಂತ ಹೆಚ್ಚು. ಯುಎಸ್ ಕಾಂಗ್ರೆಸ್ ಈಗಾಗಲೇ 2026 ಕ್ಕೆ 838.5 ಬಿಲಿಯನ್ ಡಾಲರ್ ರಕ್ಷಣಾ ಬಜೆಟ್ ಅನ್ನು ಅನುಮೋದಿಸಿದೆ.

# ಮತ್ತಷ್ಟು ಭೀಕರತೆ ಪಡೆದುಕೊಳ್ಳುತ್ತಿದೆ ಮಧ್ಯ ಪ್ರಾಚ್ಯ ಸಂಘರ್ಷ

### ಟೆಹರಾನ್ ಬೆಂಬಲಿತ ಹೌತಿ ಬಂಡುಕೋರರು 2014ರಿಂದ ಯೆಮನ್ ರಾಜಧಾನಿ ಸನಾ ನಗರವನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾರೆ

**ದುಬೈ:** ಇರಾನ್ ಪ್ರದೇಶ ಯೆಮನ್‌ನಿಂದ ಇದೇ ಮೊದಲ ಬಾರಿಗೆ ನೇರವಾಗಿ ಇಸ್ರೇಲ್ ಮೇಲೆ ನೇರ ಕ್ಷಿಪಣಿ ದಾಳಿ ನಡೆದಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಈ ನಡುವೆ ಇಸ್ರೇಲ್ ಅಣುಸ್ಥಾವರಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ, ಅತ್ತ ಅಮೆರಿಕಾ ಪಡೆಗಳು ಇರಾನ್ ಮೇಲೆ ದಾಳಿ ಮುಂದುವರೆಸಿವೆ. ಪ್ರತಿಕಾರವಾಗಿ ಇರಾನ್ ಸೌದಿ ಅರೇಬಿಯಾದಲ್ಲಿರುವ ಅಮೆರಿಕಾ ಸೇನಾ ನೆಲೆಯ ಮೇಲೆ ಕ್ಷಿಪ್ಪಣಿಗಳನ್ನು ಅಪ್ಪಳಿಸಿದೆ. 29ನೇ ದಿನದ ಯುದ್ಧ ಮತ್ತಷ್ಟು ಭೀಕರತೆ ಪಡೆದುಕೊಳ್ಳುತ್ತಿದೆ.

ಇರಾನ್ ಹಾಗೂ ಹಿಜ್ಬುಲ್ಲಾ ದಾಳಿಗಳು ಮುಂದುವರಿದ ಹಿನ್ನೆಲೆಯಲ್ಲಿ ಶುಕ್ರವಾರ ರಾತ್ರಿ ಶನಿವಾರ ಬೆಳಗ್ಗಿನವರೆಗೆ ಬೆರ್ ಶೆಬಾ, ಜೆರೂಸಲೇಮ್, ತೆಲ್ ಅವೀವ್ ಹಾಗೂ ವೆಸ್ಟ್ ಬ್ಯಾಂಕ್ ಪ್ರದೇಶಗಳಲ್ಲಿ ಹಾಗೂ ಇಸ್ರೇಲ್‌ನ ಪ್ರಮುಖ ಅಣು ಸಂಶೋಧನಾ ಕೇಂದ್ರದ ಸುತ್ತಮುತ್ತ ಸೈರನ್‌ಗಳು ಮೂರನೇ ಬಾರಿ ಮೊಳಗಿದವು.

ಟೆಹರಾನ್ ಬೆಂಬಲಿತ ಹೌತಿ ಬಂಡುಕೋರರು 2014ರಿಂದ ಯೆಮನ್ ರಾಜಧಾನಿ ಸನಾ ನಗರವನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಇಸ್ರೇಲ್ ಮೇಲಿನ ದಾಳಿಯ ಹೊಣೆಗಾರಿಕೆಯನ್ನು ಅವರು ತಕ್ಷಣ ಸ್ವೀಕರಿಸಿಲ್ಲ.ಸೌದಿ ಅರೇಬಿಯಾದೊಂದಿಗೆ ಹಲವು



**ಯುದ್ಧ ಭೂಮಿಗೆ ಹೌತಿಗಳ ಎಂಟ್ರಿ**

ವರ್ಷಗಳಿಂದ ನಾಜೂಕಿನ ಯುದ್ಧ ವಿರಾಮ ಇರುವ ಕಾರಣ, ಇದುವರೆಗೆ ಹೌತಿಗಳು ಯುದ್ಧದಲ್ಲಿ ನೇರವಾಗಿ ಭಾಗಿಯಾಗಿರಲಿಲ್ಲ.

ಇರಾನ್ ಬೆಂಬಲಿತ ಹೌತಿ ಸೇನಾ ವಕ್ತಾರ ಯಹ್ಯಾ ಸರೀ, ಅಮೆರಿಕ ಮತ್ತು ಇಸ್ರೇಲ್ ಮಿತ್ರ ರಾಷ್ಟ್ರಗಳು ಯುದ್ಧದಲ್ಲಿ ಭಾಗಿಯಾದರೆ ಅಥವಾ ಇರಾನ್ ವಿರುದ್ಧ ದಾಳಿ ಮುಂದುವರೆದರೆ ನೇರ ಸೈನಿಕ ಹಸ್ತಕ್ಷೇಪ ಸಾಧ್ಯ ಎಂದು ಎಚ್ಚರಿಸಿದ್ದಾರೆ.

ಮಧ್ಯಪ್ರಾಚ್ಯ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ಅಮೆರಿಕ ಮತ್ತು ಇರಾಕ್ ಉಗ್ರ ದಾಳಿಗಳನ್ನು ತಡೆಯಲು ಸಹಕಾರ ಹೆಚ್ಚಿಸುವ ನಿರ್ಧಾರ ಕೈಗೊಂಡಿವೆ. ಇರಾನ್ ಬೆಂಬಲಿತ ಮಿಲಿಷಿಯಾ ಗುಂಪುಗಳು ಅಮೆರಿಕ ನೆಲೆಗಳ ಮೇಲೆ ಹಲವು ದಾಳಿಗಳನ್ನು ನಡೆಸಿವೆ.

**ಕೆಂಪು ಸಮುದ್ರ ಸಾಗಾಟಕ್ಕೆ ಮತ್ತೆ ಆತಂಕ:** ಇಸ್ರೇಲ್‌ಹಮಾಸ್ ಯುದ್ಧದ ವೇಳೆ ಹೌತಿ ದಾಳಿಗಳಿಂದ ಕೆಂಪು ಸಮುದ್ರ ಮಾರ್ಗದ ವ್ಯಾಪಾರ ಈಗಾಗಲೇ ಅಸವ್ಯಸ್ತಗೊಂಡಿದೆ. ವರ್ಷಕ್ಕೆ ಸುಮಾರು 1 ಟ್ರಿಲಿಯನ್ ಡಾಲರ್ ಮೌಲ್ಯದ ವಸ್ತುಗಳು ಈ ಮಾರ್ಗದ ಮೂಲಕ ಸಾಗುತ್ತಿದ್ದವು. 2023 ನವೆಂಬರ್‌ನಿಂದ 2025 ಜನವರಿವರೆಗೆ ಹೌತಿಗಳು 100ಕ್ಕೂ ಹೆಚ್ಚು ವಾಣಿಜ್ಯ ಹಡಗುಗಳ ಮೇಲೆ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದ್ದು, ಎರಡು ಹಡಗುಗಳು ಮುಳುಗಿ ನಾಲ್ವರು ನಾವಿಕರು ಮೃತಪಟ್ಟಿದ್ದರು.

ಹೌತಿಗಳು ಯುದ್ಧಕ್ಕೆ ಪ್ರವೇಶಿಸಿದರೆ ಜಾಗತಿಕ ಸಾಗಾಟ ವ್ಯವಸ್ಥೆಗೆ ಮತ್ತಷ್ಟು ಹೊಡೆತ ಬೀಳುವ ಸಾಧ್ಯತೆ ಇದೆ. ಈಗಾಗಲೇ ಹೋರ್ಮುಜ್ ಸಮುದ್ರ ಸಂಕುಲದ ಮೇಲೆ ಇರಾನ್ ನಿಯಂತ್ರಣ ಜಾಗತಿಕ ತೈಲ ಸರಬರಾಜಿಗೆ ಒತ್ತಡ ತಂದಿದೆ.

ಇಸ್ರೇಲ್ ಸೇನೆ ಈ ದಾಳಿ ಇರಾನ್‌ನ ಅಣು ಯೋಜನೆಗೆ ದೊಡ್ಡ ಹೊಡೆತ ಎಂದು ಹೇಳಿದೆ. ಇದಕ್ಕೆ ಪ್ರತೀಕಾರವಾಗಿ ಇಸ್ರೇಲ್ ದೊಡ್ಡ ಬೆಲೆ ತೆತ್ತಲೇಬೇಕಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಎಚ್ಚರಿಕೆ ನೀಡಿದ್ದಾರೆ.

**ಇಸ್ರೇಲ್ ನಗರಗಳಲ್ಲಿ ಸ್ಫೋಟಗಳು:** ಟೆಲ್ ಅವೀವ್ ಸೇರಿದಂತೆ ಹಲವು ನಗರಗಳಲ್ಲಿ ಬೆಳಗ್ಗೆ ಭಾರೀ ಸ್ಫೋಟಗಳು ಕೇಳಿಬಂದಿವೆ. ಅಗ್ನಿಶಾಮಕ ದಳ 11 ದಾಳಿ ಸ್ಥಳಗಳಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ಇರಾನ್ ಕ್ಷಿಪಣಿ ದಾಳಿಯಲ್ಲಿ ಈಗಾಗಲೇ 52 ವರ್ಷದ ವ್ಯಕ್ತಿ ಮೃತಪಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

**ಟ್ರಂಪ್‌ನಿಂದ ಇಸ್ರೇಲ್‌ಸೌದಿ ಸಂಬಂಧಗಳಿಗೆ ಕರೆ:** ಮಿಯಾಮಿ ಕಾರ್ಯಕ್ರಮದಲ್ಲಿ ಮಾತನಾಡಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಯುದ್ಧ ಅಂತ್ಯವಾದ ಬಳಿಕ ಇಸ್ರೇಲ್ ಮತ್ತು ಸೌದಿ ಅರೇಬಿಯಾ ನಡುವೆ ಸಂಬಂಧ ಸಾಮಾನ್ಯವಾಗಿ ಮುಂದುವರೆಯುವ ಅಗತ್ಯವಿದೆ ಎಂದು ಹೇಳಿದ್ದಾರೆ.ಆದರೆ ಪ್ಯಾಲೆಸ್ತೀನ್ ರಾಷ್ಟ್ರ ಸ್ಥಾಪನೆಗೆ ಸ್ಪಷ್ಟ ಮಾರ್ಗಸೂಚಿ ಬೇಕು ಎಂಬ ಸೌದಿ ಅರೇಬಿಯಾದ ನಿಲುವು ಇದಕ್ಕೆ ಅಡೆತಡೆಯಾಗಿದೆ.

**ಯುದ್ಧ ನಿಲ್ಲಿಸಲು ರಾಜತಾಂತ್ರಿಕ ಪ್ರಯತ್ನ**

**ಅಮೆರಿಕ 15 ಅಂಶಗಳ ಯುದ್ಧ ವಿರಾಮ ಪ್ರಸ್ತಾವವನ್ನು ಇರಾನ್‌ಗೆ ನೀಡಿದ್ದು, ಪಾಕಿಸ್ತಾನ ಮಧ್ಯವರ್ತಿತ್ವ ವಹಿಸಿದೆ. ಆದರೆ ಇರಾನ್ ಅದನ್ನು ತಿರಸ್ಕರಿಸಿ ತನ್ನ ಐದು ಅಂಶಗಳ ಪ್ರಸ್ತಾವವನ್ನು ಮುಂದಿಟ್ಟಿದೆ. ಏಪ್ರಿಲ್ 6ರೊಳಗೆ ಹೋರ್ಮುಜ್ ಮಾರ್ಗವನ್ನು ಸಂಪೂರ್ಣ ತೆರೆಯದಿದ್ದರೆ ಇರಾನ್ ಇಂಧನ ಘಟಕಗಳನ್ನು ಧ್ವಂಸ ಮಾಡುವ ಎಚ್ಚರಿಕೆಯನ್ನು ಟ್ರಂಪ್ ನೀಡಿದ್ದಾರೆ. ಯುದ್ಧದ ಪರಿಣಾಮವಾಗಿ ಅಮೆರಿಕ ಷೇರು ಮಾರುಕಟ್ಟೆ ಕುಸಿದಿದ್ದು, ತೈಲ ಬೆಲೆ ಏರಿಕೆಯಾಗುತ್ತಿದೆ.**

**ಅಮೆರಿಕಾ ನೆಲೆಗಳ ಮೇಲೆ ದಾಳಿ**

**ಇರಾನ್ ಶುಕ್ರವಾರವೂ ಇಸ್ರೇಲ್ ಹಾಗೂ ಗಲ್ಫ್ ಅರಬ್ ರಾಷ್ಟ್ರಗಳ ಮೇಲೆ ಕ್ಷಿಪಣಿ ದಾಳಿಗಳನ್ನು ಮುಂದುವರಿಸಿದ್ದು, ಸೌದಿ ಅರೇಬಿಯಾದಲ್ಲಿರುವ ಅಮೆರಿಕಾ ಸೈನಿಕ ನೆಲೆಯ ಮೇಲಿನ ದಾಳಿಯಲ್ಲಿ ಕನಿಷ್ಠ 10 ಅಮೆರಿಕ ಸೈನಿಕರು ಗಾಯಗೊಂಡಿದ್ದಾರೆ ಎಂದು ಅಮೆರಿಕ ಅಧಿಕಾರಿಗಳು ತಿಳಿಸಿದ್ದಾರೆ. ಇವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ.ಪ್ರಿನ್ಸ್ ಸುಲ್ತಾನ್ ಏರ್‌ಬೇಸ್ ಮೇಲೆ ನಡೆದ ದಾಳಿಯಿಂದ ಅಮೆರಿಕದ ಇಂಧನ ತುಂಬುವ ವಿಮಾನಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.**

## ಮಿನಿ ನ್ಯೂಸ್

### ಮಗ್ಗಿ ಬಾರದ ವರನನ್ನು ನಿರಾಕರಿಸಿದ ವಧು

**ಲಖನೌ:** ಮಗ್ಗಿ ಬಾರದ ವರನನ್ನು ನಿರಾಕರಿಸಿದ ವಧು ಮದುವೆಯನ್ನೇ ರದ್ದುಗೊಳಿಸಿರುವ ಘಟನೆ ಉತ್ತರ ಪ್ರದೇಶದ ಮಹೋಬಾ ಜಿಲ್ಲೆಯಲ್ಲಿ ನಡೆದಿದೆ. ಮದುವೆ ಸಮಾರಂಭದ ಸಮಯದಲ್ಲಿ ವರ ಕೆಲವು ವಿಚಿತ್ರ ನಡವಳಿಕೆಯನ್ನು ಪ್ರದರ್ಶಿಸಿದ್ದ. ಅದು ವಧುವಿನ ಮನಸ್ಸಿನಲ್ಲಿ ಅನುಮಾನಗಳನ್ನು ಹುಟ್ಟುಹಾಕಿದ್ದರಿಂದ ಆಕೆ ಅವನಿಗೆ ಗುಣಾಕಾರ ಮಗ್ಗಿ ಬಗ್ಗೆ ನೇರ ಪ್ರಶ್ನೆ ಮಾಡಿ, ಎರಡರ ಮಗ್ಗಿ ಹೇಳುವಂತೆ ಒತ್ತಡ ಹಾಕಿದ್ದಳು. ವರ ತಡವರಿಸಿದಾಗ ತಕ್ಷಣವೇ ಆತನನ್ನು ತಿರಸ್ಕರಿಸಿ ಮದುವೆ ಬೇಡ ಎಂದು ಹಠ ಹಿಡಿದಿದ್ದಾಳೆ.

ರಾತ್ರಿಯಿಡೀ ಕುಟುಂಬ ಸದಸ್ಯರು ವಧುವಿನ ಮನವೊಲಿಸಲು ಪ್ರಯತ್ನಿಸಿದರೂ, ತನ್ನ ನಿರ್ಧಾರದಿಂದ ಹಿಂದೆ ಸರಿದಿಲ್ಲ. ಪರಿಸ್ಥಿತಿ ಉಲ್ಬಣಗೊಂಡು ಪೊಲೀಸರ ಮಧ್ಯಪ್ರವೇಶಕ್ಕೆ ಕಾರಣವಾಗಿದೆ.

ಕೊನೆಗೆ ಎರಡೂ ಕುಟುಂಬಗಳು ಮದುವೆಗೆ ಮಾಡಿದ ವೆಚ್ಚಗಳಿಗೆ ಮರುಪಾವತಿಗೆ ಒತ್ತಾಯ ಮಾಡಿವೆ. ಅಂತಿಮವಾಗಿ ಎರಡೂ ಕಡೆಯವರು ಮದುವೆಗೆ ನೀಡಿದ್ದ ಆಭರಣಗಳು ಮತ್ತು ಉಡುಗೊರೆಗಳನ್ನು ಪರಸ್ಪರ ಹಿಂಪಡೆದುಕೊಂಡಿದ್ದಾರೆ.ಎರಡೂ ಕಡೆಯವರು ಒಪ್ಪಂದಕ್ಕೆ ಬಂದ ಕಾರಣ ಯಾವುದೇ ಔಪಚಾರಿಕ ಪ್ರಕರಣ ದಾಖಲಾಗಿಲ್ಲ.

### ಕೇಸ್ ಹಾಕುವುದಾಗಿ ಮಮತಾ ಬ್ಯಾನರ್ಜಿ ಬೆದರಿಕೆ; ಅಮಿತ್ ಶಾ ತಿರುಗೇಟು

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿಶ್ವಾಸ ವ್ಯಕ್ತಪಡಿಸಿದ್ದು, ಮಮತಾ ಬ್ಯಾನರ್ಜಿ ಸರ್ಕಾರ ಮತ್ತೆ ಆಯ್ಕೆಯಾಗುವುದಿಲ್ಲ ಎಂದು ಹೇಳಿದ್ದಾರೆ. ಪ್ರತಿಯೊಂದು ಪಕ್ಷವೂ ತನ್ನದೇ ಆದ ಮಾತನ್ನು ಹೇಳುತ್ತದೆ. ರಾಹುಲ್ ಗಾಂಧಿ ಕೂಡ ಅದನ್ನೇ ಮಾಡುತ್ತಿದ್ದಾರೆ. ಆದರೆ, ಈ ಬಾರಿ ಮಮತಾ ಬ್ಯಾನರ್ಜಿ ಆಯ್ಕೆಯಾಗುವುದಿಲ್ಲ ಎಂದು ನಾನು ಸ್ಪಷ್ಟವಾ ಹೇಳುತ್ತಿದ್ದೇನೆ ಎಂದು ಟಾಲಿಗಂಜ್‌ನಲ್ಲಿ ನಡೆದ ರೋಡ್ ಶೋ ಸಂದರ್ಭದಲ್ಲಿ ವಿಶೇಷ ಸಂವಾದದಲ್ಲಿ ಶಾ ಹೇಳಿದರು. ಹಿಂಸಾತ್ಮಕ ಹೇಳಿಕೆಗಳ ಬಗ್ಗೆ ತಮ್ಮ ವಿರುದ್ಧ ಕಾನೂನು ಪ್ರಕರಣ ಹೂಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೀಡಿದ ಹೇಳಿಕೆಯನ್ನು ಸಚಿವರು ಟೀಕಿಸಿದರು ಮತ್ತು ಮಮತಾ ಬ್ಯಾನರ್ಜಿ ಮಾತನಾಡುತ್ತಲೇ ಇರುತ್ತಾರೆ. ಅವರು ನ್ಯಾಯಾಲಯದಲ್ಲಿ ಸೋಲುತ್ತಲೇ ಇರುತ್ತಾರೆ. ಅವರು ಅದನ್ನೇ ಮುಂದುವರಿಸುತ್ತಾರೆ. ನಾವು ಸಾರ್ವಜನಿಕರ ನಡುವೆ ಇದ್ದೇವೆ, ಮತ್ತು ಬಂಗಾಳದ ಜನರು 29 ರಂದು ನಿರ್ಧರಿಸಬೇಕಾಗುತ್ತದೆ ಎಂದು ಹೇಳಿದರು.

### ರೈಲು ಹತ್ತಲು ಹೋಗಿ ಮಹಿಳೆ ಧಾರುಣ ಸಾವು, ನವಜಾತ ಅವಳಿ ಶಿಶುಗಳು ಅನಾಥ

**ರಾಂಚಿ:** 24 ವರ್ಷದ ಮಹಿಳೆಯೊಬ್ಬರು ಚಲಿಸುತ್ತಿದ್ದ ರೈಲು ಹತ್ತಲು ಹೋಗಿ ರೈಲಿನಡಿ ಸಿಲುಕಿ ಪ್ರಾಣಬಿಟ್ಟಿರುವ ಘಟನೆ ಜಾರ್ಖಂಡ್‌ನ ಕೊಡೆರ್ಮಾ ರೈಲ್ವೆ ನಿಲ್ದಾಣದಲ್ಲಿ ನಡೆದಿದೆ. ಜಾರ್ಖಂಡ್ ನ ಕೊಡರ್ಮಾ ರೈಲು ನಿಲ್ದಾಣದಲ್ಲಿ ಈ ಹೃದಯವಿದ್ರಾವಕ ಅಪಘಾತ ಸಂಭವಿಸಿದ್ದು, ಈ ದುರ್ಘಟನೆಯಲ್ಲಿ 24 ವರ್ಷದ ಮಹಿಳೆ ಸಾವನ್ನಪ್ಪಿದ್ದಾರೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಮಹಿಳೆ ಮುಸ್ಕನ್ ಮಾಸಿ, ಪತಿ ತಪನ್ ಮಾಸಿ ಎಂಬುವವರು ರಂಬಂಧ್, ಪೊಲೀಸ್ ಠಾಣೆ ಹಿರಾಪುರ, ವರ್ಧನ್, ಪಶ್ಚಿಮ ಬಂಗಾಳದ, ಸೀಲ್ದಾ-ಜಲಿಯನ್ ವಾಲಾಬಾಗ್ ಎಕ್ಸ್ ಪ್ರೆಸ್ ನಿವಾಸಿ (ರೈಲು ಸಂಖ್ಯೆ 12379) ನಲ್ಲಿ ಪ್ರಯಾಣಿಸುತ್ತಿದ್ದರು. ಈ ವೇಳೆ ರೈಲು ನಿಲ್ದಾಣದಿಂದ ಹೊರಡಲು ಪ್ರಾರಂಭಿಸಿದಾಗ ಮಹಿಳೆ ತನ್ನಿಬ್ಬರು ಮಕ್ಕಳೊಂದಿಗೆ ರೈಲನ್ನು ಹತ್ತಲು ಪ್ರಯತ್ನಿಸಿದ್ದಾರೆ. ಆದರೆ, ಸಮತೋಲನ ತಪ್ಪಿದ ಅವರು ಪ್ಲಾಟ್‌ಫಾರ್ಮ್ ಮತ್ತು ರೈಲಿನ ನಡುವಲ್ಲಿ ಬಿದ್ದಿದ್ದಾರೆ. ಅಲ್ಲಿದ್ದ ಪ್ರಯಾಣಿಕರು ಕಿರುಚಾಡುವಷ್ಟರಲ್ಲೇ ರೈಲಿನ ಚಕ್ರಗಳು ಆಕೆಯ ಮೇಲೆ ಹರಿದು ಆಕೆಯ ಪ್ರಾಣಪಕ್ಷಿ ಹಾರಿ ಹೋಗಿದೆ.

### ಟಿಎಂಸಿ ಕಾರ್ಯಕರ್ತನ ಮನೆಯಲ್ಲಿ 100 ಕಚ್ಚಾ ಬಾಂಬ್‌ಗಳು ಪತ್ತೆ

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಎರಡನೇ ಹಂತದ ಮತದಾನಕ್ಕೆ ಕೆಲವು ದಿನಗಳ ಬಾಕಿ ಇರುವಾಗ ಆಘಾತಕಾರಿ ಘಟನೆ ಬೆಳಕಿಗೆ ಬಂದಿದ್ದು, ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗರ್‌ನಲ್ಲಿ ಟಿಎಂಸಿ ಕಾರ್ಯಕರ್ತ ಎಂದು ಹೇಳಲಾದ ವ್ಯಕ್ತಿಯ ಮನೆಯಲ್ಲಿ 100 ಕಚ್ಚಾ ಬಾಂಬ್‌ಗಳು ಪತ್ತೆಯಾಗಿವೆ.

ಪೊಲೀಸರು ಭಾನುವಾರ ಸುಮಾರು 100 ಕಚ್ಚಾ ಬಾಂಬ್‌ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ ರಫಿಕುಲ್ ಇಸ್ಲಾಂ ಅವರ ನಿವಾಸದಲ್ಲಿ ನಡೆದ ಶೋಧ ಕಾರ್ಯಾಚರಣೆಯ ಸಮಯದಲ್ಲಿ ಈ ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ. ಬಂಗಾಳದಲ್ಲಿ ಲಕ್ಷಾಂತರ ಕೇಂದ್ರ ಪಡೆಗಳಿದ್ದರೂ ಹಿಂಸಾಚಾರ ಚುನಾವಣಾ ಆಯೋಗದ ವೈಫಲ್ಯವನ್ನು ಬಿಂಬಿಸುತ್ತದೆ.

ಅಂತಹ ಯಾವುದೇ ಸ್ಫೋಟಕ ಕಂಡುಬಂದರೆ ಅಥವಾ ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಯಾರಾದರೂ ಬೆದರಿಕೆ ತಂತ್ರಗಳನ್ನು ಬಳಸಿದರೆ, ಸಂಬಂಧಪಟ್ಟ ಅಧಿಕಾರಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಕೋಲ್ಕತ್ತಾ ಪೊಲೀಸ್ ಆಯುಕ್ತರು, ಎಲ್ಲಾ ಡಿಸಿಪಿ, ಎಸ್‌ಪಿಗಳು ಮತ್ತು ಒಸಿ ಹಾಗೂ ಐಸಿ ದರ್ಜೆಯ ಅಧಿಕಾರಿಗಳಿಗೆ ಕಠಿಣ ಸಂದೇಶ ನೀಡಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿ ಹೇಳಿದ್ದಾರೆ.

ಅಯ್ಯರ್ ಬ್ರಾಹ್ಮಣರ ಹುಡುಗಿ ತ್ರಿಶಾ ಕಾರಲ್ಲಿ ಯಾಕೆ ಶಿಲುಬೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದರಾ ವಿಜಯ್‌ಗಾಗಿನಾ ಇದೆಲ್ಲಾ ಬಹುಭಾಷಾ ನಟಿ ತ್ರಿಶಾ ಅವರು ಇತ್ತೀಚೆಗೆ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ವೋಟ್ ಮಾಡಿದ್ದರು. ವೋಟಿಂಗ್ ಮಾಡಿದ ನಂತರ ನಟಿ ಶಾಯಿ ಗುರುತಿನ ತಮ್ಮ ಕೈ ಬೆರಳು ತೋರಿಸಿ ಪೋಸ್ ಕೂಡಾ ಕೊಟ್ಟಿದ್ದಾರೆ. ಈ ಫೋಟೋ ತಕ್ಷಣ ವೈರಲ್ ಆಗಿದೆ. ಆದರೆ ಇಲ್ಲಿ ನೆಟ್ಟಿಗರು ಒಂದು ವಿಚಾರವನ್ನು ಗಮನಿಸಿದ್ದಾರೆ. ತ್ರಿಶಾ ಅವರ ಕಾರಿನಲ್ಲಿ ಶಿಲುಬೆ ಇತ್ತು. ಅಯ್ಯರ್ ಬ್ರಾಹ್ಮಣರಾಗಿರುವ ತ್ರಿಶಾ ಕಾರಿನಲ್ಲಿ ಗಣಪತಿಯೋ, ಲಕ್ಷ್ಮಿಯೋ, ಶಿವನೋ ಇದ್ದರೆ ಸರಿ. ಶಿಲುಬೆ ಯಾಕೆ ಅಂತ ಕೇಳ್ತಾ ಇದ್ದಾರೆ ನೆಟ್ಟಿಗರು. ಇದು ಅಚಾನಕ್ ಆಗಿ ಫೋಟೋದಲ್ಲಿ ಸೆರೆಯಾಗಿದೆ. ಆದರೆ ನೆಟ್ಟಿಗರು ಇದನ್ನು ಗಮನಿಸಿದ್ದು ನಟಿ ಏನಾದ್ರೂ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತವಾದರಾ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಅಥವಾ ರಹಸ್ಯವಾಗಿ ವಿಜಯ್ ಅವರನ್ನು ಮದುವೆಯಾಗಿದ್ದಾರಾ ಎಂದು ಪ್ರಶ್ನಿಸ್ತಿದ್ದಾರೆ.

## ತ್ರಿಶಾ ಕಾರಲ್ಲಿ ಶಿಲುಬೆ!



ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ವಿಜಯ್ ಅವರು ಕ್ರಿಶ್ಚಿಯನ್ ಆಗಿದ್ದಾರೆ. ಅವರ ಹೆಸರು ಜೋಸೆಫ್ ವಿಜಯ್. ಅವರ ಮಗನ ಹೆಸರು ಜೇಸನ್ ಸಂಜಯ್, ಮಗಳ ಹೆಸರು ದಿವ್ಯಾ ಸಶಾ. ವಿಜಯ್ ಅವರು ಕ್ರಿಶ್ಚಿಯನ್ ಎನ್ನುವುದು ಎಲ್ಲರಿಗೂ ಗೊತ್ತು. ನಟಿ ತ್ರಿಶಾ ಅವರು ಈಗಾಗಲೇ ವಿಜಯ್ ಅವರ ಜೊತೆ ಮ್ಯಾಚಿಂಗ್ ಉಡುಪಿನಲ್ಲಿ ಮದುವೆ ರಿಸೆಪ್ಶನ್‌ನಲ್ಲಿ ಕಾಣಿಸಿಕೊಂಡು ಭಾರೀ ಸುದ್ದಿಯಾದರು. ವಿಜಯ್ ಅವರು ತ್ರಿಶಾ ಜೊತೆ ಮದುವೆ ಕಾರ್ಯಕ್ರಮಕ್ಕೆ ಬಂದಿದ್ದು ಭಾರೀ ದೊಡ್ಡ ಸುದ್ದಿಯಾಗಿತ್ತು. ಇದೀಗ ಮದುವೆಗೆ ಮೊದಲೇ ತ್ರಿಶಾ ವಿಜಯ್ ಧರ್ಮವನ್ನು ಸ್ವೀಕರಿಸಿದ್ದಾರಾ ಎನ್ನುವ ಮಾತು ಜೋರಾಗಿದೆ. ತ್ರಿಶಾ ಅವರು ಲಿಯೋ ಸಿನಿಮಾದಲ್ಲಿ ವಿಜಯ್ ಜೊತೆ ನಟಿಸಿದ್ದರು.

## ರಿಯಾಗೆ ರಿಲೀಫ್!

### ಬ್ಯಾಂಕ್ ಅಕೌಂಟ್ ಡಿಫ್ರೀಜ್

ರಿಯಾ ಚಕ್ರವರ್ತಿಗೆ ಸುಶಾಂತ್ ಸಿಂಗ್ ಕೇಸ್‌ಗೆ ಸಂಬಂಧಿಸಿ ರಿಲೀಫ್ ಸಿಕ್ಕಿದೆ. ರಿಯಾ ಚಕ್ರವರ್ತಿ ಅವರ ಬ್ಯಾಂಕ್ ಅಕೌಂಟ್ ಫ್ರೀಜ್ ಮಾಡಲಾಗಿತ್ತು. 2020 ರಲ್ಲಿ ಸುಶಾಂತ್ ಸಿಂಗ್ ರಜಪೂತ್ ಅವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪ ರಿಯಾ ಚಕ್ರವರ್ತಿ ಅವರ ಮೇಲಿತ್ತು. ಸುಶಾಂತ್‌ಗೆ ಡ್ರಗ್ಸ್ ಪೂರೈಸಿದ ಆರೋಪ ಅವರ ಮೇಲಿತ್ತು. ಅವರು ಸುಮಾರು ಒಂದು ತಿಂಗಳ ಕಾಲ ಬಂಧನದಲ್ಲಿದ್ದರು. ನ್ಯಾಯಾಲಯವು ಅವರಿಗೆ ಎಲ್ಲಾ ಆರೋಪಗಳಿಂದ ಬಿಡುಗಡೆ ನೀಡಿತು. ಆದಾಗ್ಯೂ, ಅವರ ಬ್ಯಾಂಕ್ ಖಾತೆಗಳು ಸ್ಥಗಿತಗೊಂಡಿದ್ದು, ಅವರು ಬ್ಯಾಂಕ್ ವಹಿವಾಟುಗಳನ್ನು ಮಾಡದಂತೆ ತಡೆಯಲಾಗಿತ್ತು. ರಿಯಾ ಚಕ್ರವರ್ತಿ ಅವರ ಬ್ಯಾಂಕ್ ಖಾತೆಗಳನ್ನು ಮತ್ತೆ ತೆರೆಯಲು ಆದೇಶಿಸಿದ ವಿಶೇಷ ಎನ್‌ಡಿಪಿಎಸ್ ನ್ಯಾಯಾಲಯದಿಂದ ಈಗ ಅವರಿಗೆ ಪರಿಹಾರ ಸಿಕ್ಕಿದೆ. ಸಂಸ್ಥೆಯು ಅಗತ್ಯ ಕಾನೂನು ಪ್ರಕ್ರಿಯೆಯನ್ನು ಅನುಸರಿಸಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಎನ್‌ಡಿಪಿಎಸ್ ನ್ಯಾಯಾಲಯವು ರಿಯಾ ಚಕ್ರವರ್ತಿ ಮತ್ತು ಅವರ ಸಹೋದರ ಶೋಯಿಕ್ ಚಕ್ರವರ್ತಿ ಅವರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಆದೇಶಿಸಿದೆ. ಸುಶಾಂತ್ ಸಿಂಗ್ ರಜಪೂತ್ ಅವರ ಸಾವಿನ ತನಿಖೆಯ ಸಮಯದಲ್ಲಿ ಹೊರಹೊಮ್ಮಿದ ಡ್ರಗ್ಸ್ ಪ್ರಕರಣದ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ತನಿಖೆಯ ಸಮಯದಲ್ಲಿ ರಿಯಾ ಚಕ್ರವರ್ತಿ ಮತ್ತು ಅವರ ಸಹೋದರ ಶೋಯಿಕ್ ಅವರ ಬ್ಯಾಂಕ್ ಖಾತೆಗಳನ್ನು 2020 ರಲ್ಲಿ ಫ್ರೀಜ್ ಮಾಡಲಾಗಿತ್ತು. ನ್ಯಾಯಾಲಯದ ನಿರ್ಧಾರವು ಪ್ರಮುಖ ಕಾರ್ಯವಿಧಾನದ ವಿಷಯದ ಮೇಲೆ ಕೇಂದ್ರೀಕರಿಸಿದೆ.



## ಮೇರಾ ಲಿಯಾರಿ ಸಿನಿಮಾ ಮಾಡಿದ ಪಾಕಿಸ್ತಾನ

'ಧುರಂಧರ್' ಸಿನಿಮಾದಲ್ಲಿ ಲಿಯಾರಿ ಪಟ್ಟಣವನ್ನು ತೋರಿಸಿದ ರೀತಿ ಬಗ್ಗೆ ಪಾಕಿಸ್ತಾನಕ್ಕೆ ಅಸಮಾಧಾನ ಇದೆ. ಹಾಗಾಗಿ 'ಮೇರಾ ಲಿಯಾರಿ' ಎಂಬ ಹೊಸ ಸಿನಿಮಾ ಮಾಡಿ ತಿರುಗೇಟು ನೀಡಲು ಪಾಕ್ ಸಜ್ಜಾಗಿದೆ. ಈ ಸಿನಿಮಾ ಮೇ 8 ರಂದು ಬಿಡುಗಡೆ ಆಗಲಿದೆ. ಜನರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ತಿಳಿಯುವ ಕೌತುಕ ಮೂಡಿದೆ.

ಬಾಲಿವುಡ್ ನಟ ರಣವೀರ್ ಸಿಂಗ್ ಅಭಿನಯದ, ಆದಿತ್ಯ ಧರ್ ನಿರ್ದೇಶನದ 'ಧುರಂಧರ್' ಫ್ರಾಂಚೈಸಿ ಎರಡು ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ 3000 ಕೋಟಿ ರೂಪಾಯಿಗೂ ಅಧಿಕ ಹಣ ಲೂಟಿ ಮಾಡಿ ದಾಖಲೆ ಬರೆದಿವೆ. ಆದರೆ, ಈ ಚಿತ್ರದಲ್ಲಿ ತೋರಿಸಲಾದ ಪಾಕಿಸ್ತಾನದ ಲಿಯಾರಿ ಪಟ್ಟಣದ ಚಿತ್ರಣ ಈಗ ಎರಡು ದೇಶಗಳ ನಡುವೆ ಸಿನಿಮಾ ಸಮರಕ್ಕೆ ನಾಂದಿ ಹಾಡಿದೆ. 'ಧುರಂಧರ್' ಸಿನಿಮಾಗೆ ತಿರುಗೇಟು ನೀಡಲು ಪಾಕಿಸ್ತಾನದಲ್ಲಿ 'ಮೇರಾ ಲಿಯಾರಿ' ಎಂಬ ಹೊಸ ಸಿನಿಮಾ ಮಾಡಲಾಗಿದೆ.



ನಿರ್ದೇಶಕ ಆದಿತ್ಯ ಧರ್ ಅವರ ಈ ಸ್ಪೈ ಥ್ರಿಲ್ಲರ್‌ನಲ್ಲಿ ರಣವೀರ್ ಸಿಂಗ್ ಅವರು ಭಾರತೀಯ ಗೂಢಚಾರನಾಗಿ ಕಾಣಿಸಿಕೊಂಡಿದ್ದಾರೆ. 2005ರಿಂದ 2022ರ ಕಾಲಘಟ್ಟದಲ್ಲಿ ಲಿಯಾರಿಯಲ್ಲಿ ನಡೆದ ಗ್ಯಾಂಗ್ ವಾರ್, ಭೂಗತ ಲೋಕದ ಚಟುವಟಿಕೆಗಳು ಮತ್ತು ಉಗ್ರರ ಜಾಲವನ್ನು ಧ್ವಂಸ ಮಾಡುವ ಕಥೆಯನ್ನು ಈ ಸಿನಿಮಾ ಒಳಗೊಂಡಿದೆ. ರೆಹಮಾನ್ ಬಲೋಚ್, ಉಜೈರ್ ಬಲೋಚ್ ಮತ್ತು ದಾವೂದ್ ಇಬ್ರಾಹಿಂ ಮುಂತಾದ ನೈಜ ಪಾತ್ರಗಳನ್ನು ಆಧರಿಸಿದ ಈ ಚಿತ್ರವು ಭಾರತದಲ್ಲಿ ಭರ್ಜರಿ ಯಶಸ್ಸು ಕಂಡಿದೆ. ಆದರೆ ಈ ಕಥೆ ಬಗ್ಗೆ ಪಾಕಿಸ್ತಾನಕ್ಕೆ ಅಸಮಾಧಾನ ಇದೆ.

ಲಿಯಾರಿ ಪಟ್ಟಣವನ್ನು ಕೇವಲ ಅಪರಾಧದ ತಾಣವಾಗಿ, ಅರಾಜಕತೆಯಿಂದ ಕೂಡಿದ ಪ್ರದೇಶವಾಗಿ ಭಾರತೀಯ ಸಿನಿಮಾಗಳು ಬಿಂಬಿಸುತ್ತಿವೆ ಎಂದು ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸಿದೆ. ಸಿಂಧ್ ಪ್ರಾಂತ್ಯದ ಮಾಹಿತಿ ಸಚಿವ ಶರ್ಜೀಲ್ ಮೆಮನ್, 'ಧುರಂಧರ್ ಸಿನಿಮಾವು ಪಾಕಿಸ್ತಾನದ ವಿರುದ್ಧ ಭಾರತ ಮಾಡುತ್ತಿರುವ ಅಪಪ್ರಚಾರ. ಇದಕ್ಕೆ ನಾವು ಸಿನಿಮಾ ಮೂಲಕವೇ ಉತ್ತರ ನೀಡುತ್ತೇವೆ' ಎಂದು ಗುಡುಗಿದ್ದಾರೆ.

**'ಧುರಂಧರ್' ಚಿತ್ರಕ್ಕೆ ತಿರುಗೇಟು**

ಭಾರತದ 'ಧುರಂಧರ್' ಸಿನಿಮಾಗೆ ತಿರುಗೇಟು ನೀಡಲು ಪಾಕಿಸ್ತಾನ ಈಗ 'ಮೇರಾ ಲಿಯಾರಿ' ಸಿನಿಮಾವನ್ನು ಸಿದ್ಧಪಡಿಸಿದೆ. ಅಬು ಅಲೀಹಾ ನಿರ್ದೇಶನದ ಈ ಚಿತ್ರವು ಕ್ರೀಡಾ ಆಧಾರಿತ ಸಿನಿಮಾವಾಗಿದ್ದು, ಲಿಯಾರಿಯ ಹೆಣ್ಣುಮಕ್ಕಳ ಫುಟ್‌ಬಾಲ್ ಕ್ರೇಜ್ ಹೇಗಿದೆ ಎಂಬುದನ್ನು ತೋರಿಸಲಿದೆ. ಆಯೆಷಾ ಒಮರ್, ದನಾನೀರ್ ಮೊಬೀನ್ ಮುಂತಾದವರು ಇದರಲ್ಲಿ ಮುಖ್ಯ ಭೂಮಿಕೆ ನಿಭಾಯಿಸಿದ್ದಾರೆ. 'ಮೇರಾ ಲಿಯಾರಿ' ಚಿತ್ರವು ಮೊದಲು ಯುಕೆ ಏಷ್ಯನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಪ್ರದರ್ಶನಗೊಳ್ಳಲಿದ್ದು, ಮೇ 8 ರಂದು ಪಾಕಿಸ್ತಾನದಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಒಟ್ಟಿನಲ್ಲಿ ಸಿನಿಮಾದ ಮೂಲಕ ಶುರುವಾದ ಈ ಲಿಯಾರಿ ಸಂಘರ್ಷ ಈಗ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ.

## ಡ್ರಗ್ ಪ್ರಕರಣದಲ್ಲಿ ಶ್ರದ್ಧಾಗೆ ಬಿಗ್ ರಿಲೀಫ್

ಬಾಲಿವುಡ್ ನಟಿಯರಾದ ಶ್ರದ್ಧಾ ಕಪೂರ್ ಮತ್ತು ನೋರಾ ಫತೇಹಿ ಅವರಿಗೆ ಬಹುದಿನಗಳ ಕಾಲ ತಲೆನೋವಾಗಿದ್ದ 2022ರ ಡ್ರಗ್ಸ್ ಪ್ರಕರಣದಲ್ಲಿ ಬಿಗ್ ರಿಲೀಫ್ ಸಿಕ್ಕಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಾಗಿಲ್ಲ ಎನ್ನಲಾಗುತ್ತಿದೆ. ಮುಂಬೈ ಪೊಲೀಸರು ಸಿದ್ಧಪಡಿಸುತ್ತಿರುವ ಪೂರಕ ದೋಷಾರೋಪ ಪಟ್ಟಿಯಲ್ಲಿ ಕೇವಲ ನಟಿಯರಷ್ಟೇ ಅಲ್ಲದೆ, ಸೋಷಿಯಲ್ ಮೀಡಿಯಾ ಸ್ಟಾರ್ ಓರಿ, ನಟ ಸಿದ್ದಾಂತ್ ಕಪೂರ್ ಮತ್ತು ರಾಜಕಾರಣಿ ಜೀಶನ್ ಸಿದ್ದಿಕಿ ಅವರಿಗೂ ಕ್ಲೀನ್ ಚಿಟ್ ಸಿಗುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. 2022ರ ಆಗಸ್ಟ್ ತಿಂಗಳಲ್ಲಿ ಮುಂಬೈ ಪೊಲೀಸರ ಡ್ರಗ್ಸ್ ವಿರೋಧಿ ದಳವು ಮೊಹಮ್ಮದ್ ಸಲೀಂ ಶೇಖ್ ಎಂಬ ಡ್ರಗ್ ಪೆಡ್ಲರ್‌ನನ್ನು ಬಂಧಿಸಿ, ಆತನಿಂದ 1.19 ಲಕ್ಷ ರೂಪಾಯಿ ಮೌಲ್ಯದ ಮೆಫೆಡ್ರೋನ್ ವಶಪಡಿಸಿಕೊಂಡಿತ್ತು. ವಿಚಾರಣೆ ವೇಳೆ ಶೇಖ್, ತಾನು ಬಾಲಿವುಡ್‌ನ ಹಲವು ಗಣ್ಯರು ಭಾಗವಹಿಸುವ ಪಾರ್ಟಿಗಳಿಗೆ ಡ್ರಗ್ಸ್ ಪೂರೈಕೆ ಮಾಡಿದ್ದಾಗಿ ಹೇಳಿಕೆ ನೀಡಿದ್ದ.

ಈ ಹೇಳಿಕೆಯ ಆಧಾರದ ಮೇಲೆ ಹಲವು ಪ್ರಮುಖರ ಹೆಸರುಗಳು ಹೊರಬಂದಿದ್ದವು. ಈ ತನಿಖೆಯ ಭಾಗವಾಗಿ 2025ರಲ್ಲಿ ಶ್ರದ್ಧಾ ಕಪೂರ್ ಮತ್ತು ನೋರಾ ಫತೇಹಿ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಖ್ಯಾತ ಸೆಲೆಬ್ರಿಟಿಗಳ ಹೆಸರು ತಳುಕು ಹಾಕಿಕೊಂಡಿದ್ದರಿಂದ ಈ ಪ್ರಕರಣವು ಭಾರಿ ಸುದ್ದಿ ಆಗಿತ್ತು. ಬಾಲಿವುಡ್ ಮಂದಿಗೆ ಚಿಂತೆ ಶುರುವಾಗಿತ್ತು. ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ, ತನಿಖಾಧಿಕಾರಿಗಳು ಈ ಗಣ್ಯರಿಗೂ ಮತ್ತು ಡ್ರಗ್ಸ್ ಪೂರೈಕೆ ಜಾಲಕ್ಕೂ ನೇರ ಸಂಬಂಧವಿರುವ ಯಾವುದೇ ಸಾಕ್ಷ್ಯಗಳನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. 'ನಾವು ಈಗಾಗಲೇ ಮೂವರ ವಿರುದ್ಧ ಪ್ರಾಥಮಿಕ ಚಾರ್ಜ್‌ಶೀಟ್ ಸಲ್ಲಿಸಿದ್ದೇವೆ. ಈಗ ಬಂಧಿತರಾಗಿರುವ ಇತರ ಆರೋಪಿಗಳ ವಿರುದ್ಧ ಪೂರಕ ಚಾರ್ಜ್‌ಶೀಟ್ ಸಲ್ಲಿಸಲಾಗುವುದು. ಸೆಲೆಬ್ರಿಟಿಗಳನ್ನು ಈ ಪ್ರಕರಣಕ್ಕೆ ಲಿಂಕ್ ಮಾಡಲು ನಮ್ಮ ಬಳಿ ಸಾಕಷ್ಟು ಪುರಾವೆಗಳಿಲ್ಲ' ಎಂದು ವರದಿ ಆಗಿದೆ.



## ಬಯೋಪಿಕ್ ಸಿನಿಮಾ ರುಕ್ಮಿಣಿ ಪಾಲು

ರುಕ್ಮಿಣಿ ವಸಂತ್, ಸೌಂದರ್ಯ, ನಟನಾ ಪ್ರತಿಭೆ, ಸುಂದರ ವ್ಯಕ್ತಿತ್ವ, ಗಾಂಭೀರ್ಯ ಎಲ್ಲವೂ ಸಮನಾಗಿ ಉಳ್ಳ ಕೆಲವೇ ನಟಿಯರಲ್ಲಿ ಒಬ್ಬರು. 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಭಾರಿ ಯಶಸ್ವಿನ ಬಳಿಕ ರುಕ್ಮಿಣಿ ವಸಂತ್ ಅವರಿಗೆ ಪರಭಾಷೆಗಳಲ್ಲಿ ಬೇಡಿಕೆ ಹೆಚ್ಚಾಗಿದೆ. ಈಗಂತೂ ರುಕ್ಮಿಣಿ ವಸಂತ್ ಬಾಲಿವುಡ್‌ನ ನಿರ್ಮಾಣ ಸಂಸ್ಥೆಯೊಂದರ ಜೊತೆಗೂ ಕೆಲಸ ಮಾಡುತ್ತಿದ್ದಾರೆ ಎನ್ನಲಾಗುತ್ತಿದೆ. ಇವುಗಳ ನಡುವೆ, ಖ್ಯಾತ ನಟಿ ಸಾಯಿ ಪಲ್ಲವಿ ನಟಿಸಬೇಕಿದ್ದ ಪ್ರಮುಖ ಸಿನಿಮಾ ಒಂದು ಈಗ ರುಕ್ಮಿಣಿ ವಸಂತ್ ಪಾಲಾಗಿದೆ ಎನ್ನಲಾಗುತ್ತಿದೆ.

ರುಕ್ಮಿಣಿ ವಸಂತ್, ಸೌಂದರ್ಯ, ನಟನಾ ಪ್ರತಿಭೆ, ಸುಂದರ ವ್ಯಕ್ತಿತ್ವ, ಗಾಂಭೀರ್ಯ ಎಲ್ಲವೂ ಸಮನಾಗಿ ಉಳ್ಳ ಕೆಲವೇ ನಟಿಯರಲ್ಲಿ ಒಬ್ಬರು. 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಭಾರಿ ಯಶಸ್ವಿನ ಬಳಿಕ ರುಕ್ಮಿಣಿ ವಸಂತ್ ಅವರಿಗೆ ಪರಭಾಷೆಗಳಲ್ಲಿ ಬೇಡಿಕೆ ಹೆಚ್ಚಾಗಿದೆ. ಈಗಂತೂ ರುಕ್ಮಿಣಿ ವಸಂತ್ ಬಾಲಿವುಡ್‌ನ ನಿರ್ಮಾಣ ಸಂಸ್ಥೆಯೊಂದರ ಜೊತೆಗೂ ಕೆಲಸ ಮಾಡುತ್ತಿದ್ದಾರೆ ಎನ್ನಲಾಗುತ್ತಿದೆ. ಇವುಗಳ ನಡುವೆ, ಖ್ಯಾತ ನಟಿ ಸಾಯಿ ಪಲ್ಲವಿ ನಟಿಸಬೇಕಿದ್ದ ಪ್ರಮುಖ ಸಿನಿಮಾ ಒಂದು ಈಗ ರುಕ್ಮಿಣಿ ವಸಂತ್ ಪಾಲಾಗಿದೆ ಎನ್ನಲಾಗುತ್ತಿದೆ. ಸಾಯಿ ಪಲ್ಲವಿ ಪ್ರಸ್ತುತ ಹಲವಾರು ಬಿಗ್ ಬಜೆಟ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಅಮೀರ್ ಖಾನ್ ಪುತ್ರ ಜುನೈದ್ ಖಾನ್ ಜೊತೆಗಿನ ಚಿತ್ರ, ರಣಬೀರ್ ಕಪೂರ್ ಅಭಿನಯದ 'ರಾಮಾಯಣ' ಸೇರಿದಂತೆ ಸಾಲು ಸಾಲು ಚಿತ್ರಗಳು ಅವರ ಕೈಯಲ್ಲಿವೆ. ಇವುಗಳ ಜೊತೆಗೆ ಮಣಿರತ್ನಂ ಅವರ ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ. ತೆಲುಗಿನಲ್ಲಿ ಒಂದು ಹೊಸ ಸಿನಿಮಾನಲ್ಲಿ ನಟಿಸಲಿದ್ದಾರೆ. ಶಿವಕಾರ್ತಿಕೇಯನ್ ಜೊತೆಗೊಂದು ಸಿನಿಮಾಕ್ಕೂ ಓಕೆ ಹೇಳಿದ್ದಾರೆ. ಈ ಸಿನಿಮಾಗಳ ಜೊತೆಗೆ ಖ್ಯಾತ ಗಾಯಕಿ ಎಂಎಸ್ ಸುಬ್ಬಲಕ್ಷ್ಮಿ ಜೀವನ ಆಧರಿಸಿದ ಸಿನಿಮಾನಲ್ಲೂ ಸಾಯಿ ಪಲ್ಲವಿ ನಟಿಸುತ್ತಾರೆ ಎನ್ನಲಾಗಿತ್ತು. ಆದರೆ ಈಗ ಹೊರಬಿದ್ದಿರುವ ಕೆಲವು ಸುದ್ದಿಗಳ ಪ್ರಕಾರ, ಸಾಯಿ ಪಲ್ಲವಿ ಅವರು ನಟಿಸಬೇಕಿದ್ದ ಎಂಎಸ್ ಸುಬ್ಬಲಕ್ಷ್ಮಿ ಅವರ ಪಾತ್ರದಲ್ಲಿ ರುಕ್ಮಿಣಿ ವಸಂತ್ ಅವರು ನಟಿಸಲಿದ್ದಾರೆ ಎನ್ನಲಾಗುತ್ತಿದೆ.



ಸಾಯಿ ಪಲ್ಲವಿ ಅವರು ಡೇಟ್ಸ್ ಸಮಸ್ಯೆಯಿಂದಾಗಿ ಆ ಸಿನಿಮಾನಿಂದ ಹೊರ ನಡೆದಿದ್ದು, ಆ ಪಾತ್ರ ಈಗ ರುಕ್ಮಿಣಿ ವಸಂತ್ ಅವರ ಪಾಲಾಗಿದೆ ಎನ್ನಲಾಗುತ್ತಿದೆ.

## ಅಭಿಷೇಕ್ ಶರ್ಮಾ ಕೈ ಹಿಡಿದು ಎಳೆದ ಯುವತಿ!



ಐಪಿಎಲ್‌ನ 36ನೇ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ್ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 228 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ ತಂಡವು 18.3 ಓವರ್‌ಗಳಲ್ಲಿ 229 ರನ್‌ಗಳಿಸಿ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಐಪಿಎಲ್ ಕ್ರೇಝ್ ಎಷ್ಟೋ ಬಾರಿ ಅಭಿಮಾನದ ಗಡಿ ಮೀರಿ ಅತಿರೇಕಕ್ಕೆ ಸಾಕ್ಷಿಯಾಗುತ್ತದೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ಎಂಬಂತೆ, ಸನ್ ರೈಸರ್ಸ್ ಹೈದರಾಬಾದ್ ತಂಡದ ಸ್ಟಾರ್ ಆಲ್ ರೌಂಡರ್ ಅಭಿಷೇಕ್ ಶರ್ಮಾ ಅವರು ಜೈಪುರದ ಹೋಟೆಲ್‌ನಲ್ಲಿ ಅಭಿಮಾನಿಯೊಬ್ಬರ ಅನಿರೀಕ್ಷಿತ ವರ್ತನೆಯಿಂದ ಮುಜುಗರಕ್ಕೆ ಒಳಗಾಗಿದ್ದಾರೆ.

ರಾಜಸ್ಥಾನ್ ರಾಯಲ್ಸ್ ವಿರುದ್ಧದ ಪಂದ್ಯಕ್ಕೂ ಮುನ್ನ ನಡೆದ ಈ ಘಟನೆ ಈಗ ಕ್ರಿಕೆಟ್ ವಲಯದಲ್ಲಿ ಆಟಗಾರರ ಭದ್ರತೆಯ ಬಗ್ಗೆ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಏಪ್ರಿಲ್ 25ರಂದು ಸವಾಯಿ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ರಾಜಸ್ಥಾನ್ ರಾಯಲ್ಸ್ ಹಾಗೂ ಸನ್ ರೈಸರ್ಸ್ ಹೈದರಾಬಾದ್ ನಡುವಣ ಪಂದ್ಯವಿತ್ತು. ಈ ಪಂದ್ಯಕ್ಕಾಗಿ ತಂಡದ ಹೋಟೆಲ್‌ನಿಂದ ಮೈದಾನಕ್ಕೆ ಹೊರಡಲು ಅಭಿಷೇಕ್ ಶರ್ಮಾ ಅವರು ಲಾಬಿಗೆ ಬಂದಾಗ, ಅಲ್ಲಿದ್ದ ಅಭಿಮಾನಿಗಳು ಅವರ ಹೆಸರನ್ನು ಕೂಗುತ್ತಾ ಸಂಭ್ರಮಿಸುತ್ತಿದ್ದರು. ಈ ನಡುವೆ, ಹಠಾತ್ತಾಗಿ ಬಂದ ಯುವತಿಯೊಬ್ಬರು ಅಭಿಷೇಕ್ ಅವರ ಕೈಯನ್ನು ಬಲವಾಗಿ ಹಿಡಿದು ಎಳೆದಿದ್ದಾರೆ.

ಈ ಅನಿರೀಕ್ಷಿತ ಘಟನೆಯಿಂದ ಅಭಿಷೇಕ್ ಶರ್ಮಾ ಒಂದು ಕ್ಷಣ ಗಾಬರಿಯಾದರು. ತಕ್ಷಣವೇ ಕಾರ್ಯಪ್ರವೃತ್ತರಾದ ಭದ್ರತಾ ಸಿಬ್ಬಂದಿ ಆ ಯುವತಿಯನ್ನು ದೂರ ಸರಿಸಿ, ಅಭಿಷೇಕ್ ಅವರನ್ನು ಸುರಕ್ಷಿತವಾಗಿ ತಂಡದ ಬಸ್‌ನತ್ತ ಕರೆದೊಯ್ದರು. ಈ ವಿಡಿಯೋ ಸದ್ಯ ಇಂಟರ್ನೆಟ್‌ನಲ್ಲಿ ವೈರಲ್ ಆಗಿದ್ದು, ಆಟಗಾರರ ಖಾಸಗಿತನ ಮತ್ತು ಸುರಕ್ಷತೆಯ ಬಗ್ಗೆ ಆತಂಕ ವ್ಯಕ್ತವಾಗಿದೆ.

**ವಿಡಿಯೋ ವೈರಲ್ ಮತ್ತು ಆಕ್ರೋಶ:**

ಈ ವಿಡಿಯೋ ವೈರಲ್ ಆದ ಬೆನ್ನಲ್ಲೇ ಸೋಷಿಯಲ್ ಮೀಡಿಯಾದಲ್ಲಿ ಹೊಸ ಚರ್ಚೆ ಶುರುವಾಗಿದೆ. ಅಭಿಮಾನಿಗಳು ಆಟಗಾರರನ್ನು ಪ್ರೀತಿಸುವುದು ಸರಿ, ಆದರೆ ಅವರ ವೈಯಕ್ತಿಕ ಘನತೆಯನ್ನು ಗೌರವಿಸಬೇಕು ಎಂದು ನೆಟ್ಟಿಗರು ಈ ಘಟನೆಯನ್ನು ಖಂಡಿಸಿದ್ದಾರೆ. ಕ್ರಿಕೆಟಿಗರು ಎಷ್ಟೇ ಜನಪ್ರಿಯರಾಗಿದ್ದರೂ, ಅವರ ಅನುಮತಿಯಿಲ್ಲದೆ ಅವರನ್ನು ಮುಟ್ಟುವುದು ಅಥವಾ ಎಳೆಯುವುದು ಸರಿಯಲ್ಲ ಎಂಬ ಅಭಿಪ್ರಾಯಗಳು ಕೂಡ ಸೋಷಿಯಲ್ ಮೀಡಿಯಾದಲ್ಲಿ ಕೇಳಿಬರುತ್ತಿವೆ.

**ಗೆದ್ದು ಬೀಗಿದ ಸನ್‌ರೈಸರ್ಸ್ ಹೈದರಾಬಾದ್:**

ಈ ಕಹಿ ಘಟನೆಯ ಹೊರತಾಗಿಯೂ ಮೈದಾನದಲ್ಲಿ ಅಭಿಷೇಕ್ ಶರ್ಮಾ ತಮ್ಮ ಏಕಾಗ್ರತೆ ಕಳೆದುಕೊಳ್ಳಲಿಲ್ಲ. ರಾಜಸ್ಥಾನ್ ರಾಯಲ್ಸ್ ನೀಡಿದ್ದ 229 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಿದ ಹೈದರಾಬಾದ್ ತಂಡಕ್ಕೆ ಅಭಿಷೇಕ್ ಭರ್ಜರಿ ಆರಂಭ ನೀಡಿದರು. ಕೇವಲ 29 ಎಸೆತಗಳಲ್ಲಿ 57 ರನ್ ಸಿಡಿಸುವ ಮೂಲಕ ಎಸ್‌ಆರ್‌ಹೆಚ್ ತಂಡಕ್ಕೆ ಅದ್ಭುತ ಆರಂಭ ಒದಗಿಸಿದ್ದರು.

## ಚೆನ್ನೈ ವಿರುದ್ಧ ಟೈಟಾನ್ಸ್‌ಗೆ 8 ವಿಕೆಟ್ ಗೆಲುವು

ಎಡಗೈ ಬ್ಯಾಟರ್ ಸಾಯಿ ಸುದರ್ಶನ್ (87) ಅವರ ಅರ್ಧಶತಕದ ನೆರವಿನಿಂದ ಗುಜರಾತ್ ಟೈಟಾನ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದೆ. 159 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಜಿಟಿ ಕೇವಲ 16.4 ಓವರ್‌ಗಳಲ್ಲೇ ಗೆಲುವಿನ ನಗೆ ಬೀರಿತು.

ಇಲ್ಲಿನ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ 7 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು.



**ಅರ್ಧಶತಕ ಗಳಿಸಿದ ಸುದರ್ಶನ್**

ಬಳಿಕ ಟಾರ್ಗೆಟ್ ಬೆನ್ನಟ್ಟಿದ ಟೈಟಾನ್ಸ್‌ಗೆ ನಾಯಕ ಶುಭ್ಮನ್ ಗಿಲ್ (33) ಹಾಗೂ ಸಾಯಿ ಸುದರ್ಶನ್ ಉತ್ತಮ ಆರಂಭ (58 ರನ್ ಜೊತೆಯಾಟ) ಒದಗಿಸಿದರು. ನೂರ್ ಅಹ್ಮದ್ ಬೌಲಿಂಗ್‌ನಲ್ಲಿ ಸ್ಟಂಪ್ ಔಟ್ ಆಗುವ ಮೂಲಕ ಗಿಲ್ ಪೆವಿಲಿಯನ್‌ಗೆ ಮರಳಿದರು. ಬಳಿಕ ಕ್ರೀಸ್‌ಗೆ ಬಂದ ಜೋಸ್ ಬಟ್ಲರ್ (39★) ಸಂದರ್ಭಾನುಸಾರ ಬ್ಯಾಟಿಂಗ್ ತೋರಿ, ಸಿಕ್ಸರ್ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಸೂಪರ್ ಕಿಂಗ್ಸ್ ಪರ ನೂರ್ ಹಾಗೂ ಅಕೇಲ್ ಹೊಸ್ಸೈನ್ ತಲಾ ಒಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನ, ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ನಾಯಕ ರುತುರಾಜ್ ಗಾಯಕ್ವಾಡ್ ಅವರ ಏಕಾಂಗಿ ಹೋರಾಟದ ಬಲದಿಂದ ಗುಜರಾತ್ ಟೈಟಾನ್ಸ್‌ಗೆ 159 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಸಿಎಸ್‌ಕೆ ಇನ್ನಿಂಗ್ಸ್ ಆರಂಭದಿಂದಲೂ ವಿಕೆಟ್ ಕಳೆದುಕೊಳ್ಳುತ್ತ ಸಾಗಿತು. 37 ರನ್‌ಗಳಿಗೆ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡಕ್ಕೆ ಸಿಲುಕಿತ್ತು. ಈ ಹಂತದಲ್ಲಿ ಸಮಯೋಚಿತ ಬ್ಯಾಟಿಂಗ್ ಮಾಡಿದ ಗಾಯಕ್ವಾಡ್ ಅಜೇಯ ಅರ್ಧಶತಕ (74, 60 ಎಸೆತ)ದ ಮೂಲಕ ತಂಡಕ್ಕೆ ನೆರವಾದರು. ಇನ್ನುಳಿದಂತೆ, ಸಂಜು ಸ್ಯಾಮ್ಸನ್ 11, ಶಿವಂ ದುಬೆ 22, ಕಾರ್ತಿಕ್ ಶರ್ಮಾ 15 ಹಾಗೂ ಜೆಮಿ ಓವರ್ಟನ್ 18 ರನ್ ಗಳಿಸಿ ತಂಡಕ್ಕೆ ಕಾಣಿಕೆ ನೀಡಿದರು. ಉಳಿದ ಯಾವೊಬ್ಬ ಬ್ಯಾಟರ್‌ಗಳೂ ಕೂಡ ಎರಡಂಕಿ ಮೊತ್ತ ತಲುಪಲಿಲ್ಲ. ಹಲವರು ದೊಡ್ಡ ಹೊಡೆತಕ್ಕೆ ಯತ್ನಿಸಿ ವಿಕೆಟ್‌ಗಳನ್ನು ಒಪ್ಪಿಸಿದರು. ಸಿಎಸ್‌ಕೆ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ಟೈಟಾನ್ಸ್ ಪರ ಕಗಿಸೋ ರಬಾಡ 3, ಅರ್ಷದ್ ಖಾನ್ 2 ಹಾಗೂ ಮೊಹಮದ್ ಸಿರಾಜ್ ಮತ್ತು ಮನವ್ ಸುಥರ್ ತಲಾ ಒಂದು ವಿಕೆಟ್ ಪಡೆದರು. ಚೆನ್ನೈ ಸೂಪರ್ ಕಿಂಗ್ಸ್ ತಂಡ ಟೂರ್ನಿಯ 8 ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದು, ಐದು ಸೋಲುಗಳನ್ನು ಕಂಡಿದೆ. ಇದರಿಂದ ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಜಾರಿದೆ. ಹಾಗೆಯೇ, ಗುಜರಾತ್ ಟೈಟಾನ್ಸ್ ಕೂಡ 8 ಪಂದ್ಯಗಳಲ್ಲಿ ನಾಲ್ಕು ಗೆಲುವು ಕಂಡರೆ, ನಾಲ್ಕು ಸಲ ಪರಾಭವಗೊಂಡಿದೆ. 8 ಅಂಕಗಳೊಂದಿಗೆ 5ನೇ ಸ್ಥಾನಕ್ಕೆ ತಲುಪಿದೆ.

## ಒಂದು ಶತಕಕ್ಕೆ ವೈಭವ್‌ನ 8 ದಾಖಲೆಗಳು ಉಡೀಸ್

ಸನ್ ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ವೈಭವ್ ಅವರ ಬ್ಯಾಟಿಂಗ್ ಎಷ್ಟು ಆಕ್ರಮಣಕಾರಿಯಾಗಿತ್ತೆಂದರೆ, ಮೊದಲ ಓವರ್‌ನಲ್ಲೇ ಪ್ರಫುಲ್ ಹಿಂಗೆ ಬೌಲಿಂಗ್‌ನಲ್ಲಿ 4 ಭರ್ಜರಿ ಸಿಕ್ಸರ್ ಸಿಡಿಸಿದ್ದರು. ಅಲ್ಲದೆ ಒಟ್ಟು 12 ಸಿಕ್ಸರ್ ಬಾರಿಸುವ ಮೂಲಕ ಐಪಿಎಲ್ ಇನ್ನಿಂಗ್ಸ್ ಒಂದರಲ್ಲಿ ಅತಿ ಹೆಚ್ಚು ಸಿಕ್ಸರ್ ಸಿಡಿಸಿದ ಭಾರತೀಯ ಎಂಬ ದಾಖಲೆಯನ್ನು ನಿರ್ಮಿಸಿದ್ದಾರೆ.

ಐಪಿಎಲ್ ಇತಿಹಾಸದಲ್ಲೇ 36 ಅಥವಾ ಅದಕ್ಕಿಂತ ಕಡಿಮೆ ಎಸೆತಗಳಲ್ಲಿ 2 ಶತಕ ಸಿಡಿಸಿದ ಮೊದಲ ಬ್ಯಾಟರ್ ಎಂಬ ಭರ್ಜರಿ ದಾಖಲೆಯನ್ನು ವೈಭವ್ ತಮ್ಮದಾಗಿಸಿಕೊಂಡಿದ್ದಾರೆ.

ಕಳೆದ ಸೀಸನ್‌ನಲ್ಲಿ 35 ಎಸೆತಗಳಲ್ಲಿ ಸೆಂಚುರಿ ಸಿಡಿಸಿದ್ದ ಯುವ ದಾಂಡಿಗ ಇದೀಗ 36 ಎಸೆತಗಳಲ್ಲಿ ಶತಕ ಪೂರೈಸಿ ಈ ದಾಖಲೆ ಬರೆದಿದ್ದಾರೆ. ಟಿ20 ಕ್ರಿಕೆಟ್ ಇತಿಹಾಸದಲ್ಲಿ ಕೇವಲ 15 ವರ್ಷ 29 ದಿನಗಳ ವಯಸ್ಸಿನಲ್ಲಿ 1000 ರನ್ ಪೂರೈಸಿದ ಮೊದಲ ಆಟಗಾರ ಎಂಬ ವಿಶ್ವ ದಾಖಲೆಯನ್ನು ಕೂಡ ವೈಭವ್ ಸೂರ್ಯವಂಶಿ ತಮ್ಮದಾಗಿಸಿಕೊಂಡಿದ್ದಾರೆ.

4 ಟಿ20 ಶತಕಗಳನ್ನು ಬಾರಿಸಿ ಉಸ್ಮಾನ್ ಖಾನ್ (33) ಅವರ ವಿಶ್ವ ದಾಖಲೆಯನ್ನು ಕೂಡ ವೈಭವ್ ಸೂರ್ಯವಂಶಿ ಅಳಿಸಿ ಹಾಕಿದ್ದಾರೆ. ವೈಭವ್ ಕೇವಲ 26 ಇನಿಂಗ್ಸ್‌ಗಳ ಮೂಲಕ ಈ ಸಾಧನೆ ಮಾಡಿದ್ದಾರೆ. ಕೇವಲ 15 ಇನ್ನಿಂಗ್ಸ್‌ಗಳಲ್ಲಿ 50 ಐಪಿಎಲ್ ಸಿಕ್ಸರ್ ಪೂರೈಸುವ ಮೂಲಕ ವೈಭವ್ ಸೂರ್ಯವಂಶಿ ಕ್ರಿಸ್ ಗೇಲ್ (21 ಇನ್ನಿಂಗ್ಸ್) ಅವರ ಭರ್ಜರಿ ದಾಖಲೆಯನ್ನು ಮುರಿದಿದ್ದಾರೆ.


**ಅತೀ ವೇಗದ ಅರ್ಧಶತಕ:** ವೈಭವ್ ಸೂರ್ಯವಂಶಿ ಈ ಪಂದ್ಯದಲ್ಲಿ ಕೇವಲ 15 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ್ದರು. ಇದು ಈ ಸೀಸನ್‌ನ ಜಂಟಿ ವೇಗದ ಅರ್ಧಶತಕವಾಗಿದೆ. ಈ ಪಟ್ಟಿಯಲ್ಲಿ ವೈಭವ್ ಜೊತೆ 15 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ ಭಿಷೇಕ್ ಶರ್ಮಾ ಅಗ್ರಸ್ಥಾನದಲ್ಲಿದ್ದಾರೆ.



**ಮೂರನೇ ಅತಿ ವೇಗದ ಶತಕ:** ವೈಭವ್ ಸೂರ್ಯವಂಶಿ ಕೇವಲ 36 ಎಸೆತಗಳಲ್ಲಿ ಶತಕ ಗಳಿಸಿದ್ದಾರೆ. ಇದು ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದಲ್ಲಿ ಮೂರನೇ ಅತ್ಯಂತ ವೇಗದ ಶತಕವಾಗಿದೆ. ಕ್ರಿಸ್ ಗೇಲ್ 30 ಎಸೆತಗಳಲ್ಲಿ 100 ರನ್ ಗಳಿಸುವ ಮೂಲಕ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ವೈಭವ್ ಸೂರ್ಯವಂಶಿ ತಮ್ಮದಾಗಿಸಿಕೊಂಡಿದ್ದಾರೆ.

**ವೇಗದ ಸಾವಿರ ರನ್:** ವೈಭವ್ ಸೂರ್ಯವಂಶಿ ಕೇವಲ 473 ಎಸೆತಗಳಲ್ಲಿ ಟಿ20 ಕ್ರಿಕೆಟ್‌ನಲ್ಲಿ 1000 ರನ್ ಕಲೆಹಾಕಿದ್ದಾರೆ. ಈ ಮೂಲಕ ಆಸ್ಟ್ರೇಲಿಯಾದ ಮಿಚೆಲ್ ಓವನ್ (533 ಎಸೆತಗಳು) ದಾಖಲೆಯನ್ನು ಮುರಿದಿದ್ದಾರೆ.

## ಆರ್‌ಸಿಬಿ ಮುಂದಿನ ಪಂದ್ಯಕ್ಕೆ ಇಬ್ಬರು ಅಲಭ್ಯ



ಇಂಡಿಯನ್ ಪ್ರೀಮಿಯರ್ ಲೀಗ್‌ನ 39ನೇ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಲಿದೆ. ಸೋಮವಾರ ದೆಹಲಿಯ ಅರುಣ್ ಜೇಟ್ಲಿ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಪಂದ್ಯಕ್ಕೆ ಆರ್‌ಸಿಬಿ ತಂಡದ ಇಬ್ಬರು ಆಟಗಾರರು ಅಲಭ್ಯರಾಗಲಿದ್ದಾರೆ ಎಂದು ವರದಿಯಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸ್ಫೋಟಕ ದಾಂಡಿಗ ಫಿಲ್ ಸಾಲ್ಟ್ ಅಭ್ಯಾಸದ ವೇಳೆ ಗಾಯಗೊಂಡಿದ್ದರು. ಹೀಗಾಗಿ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಿಂದ ಹೊರಗುಳಿದಿದ್ದರು. ಇದೇ ಕಾರಣದಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಿಂದ ಹೊರಗುಳಿಯಲಿದ್ದಾರೆ ಎಂದು ವರದಿಯಾಗಿದೆ. ಮತ್ತೊಂದೆಡೆ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿದಿದ್ದ ಯುವ ವೇಗಿ ರಾಸಿಖ್ ಸಲಾಂ ದಾರ್ ಕೂಡ ಫಿಟ್‌ನೆಸ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕಳೆದ ಮ್ಯಾಚ್‌ನಲ್ಲಿ ಸ್ನಾಯು ಸೆಳೆತಕ್ಕೆ ಒಳಗಾಗಿ ಅರ್ಧದಲ್ಲೇ ಮೈದಾನ ತೊರೆದಿದ್ದ ರಾಸಿಖ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕೆ ಅಲಭ್ಯರಾಗಲಿದ್ದಾರೆ ಎಂದು ತಿಳಿದು ಬಂದಿದೆ. ಇತ್ತ ಫಿಲ್ ಸಾಲ್ಟ್ ಹೊರಗುಳಿದರೆ ಆರ್‌ಸಿಬಿ ಪರ ಆರಂಭಿಕನಾಗಿ ಜೇಕಬ್ ಬೆಥೆಲ್ ಕಣಕ್ಕಿಳಿಯಲಿದ್ದಾರೆ. ಅತ್ತ ರಾಸಿಖ್ ಸಲಾಂ ದಾರ್ ಬದಲಿಗೆ ಬಲಗೈ ವೇಗಿ ಅಭಿನಂದನ್ ಸಿಂಗ್‌ಗೆ ಚಾನ್ಸ್ ಸಿಗುವ ಸಾಧ್ಯತೆಯಿದೆ. ಹೀಗಾಗಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ ಪ್ಲೇಯಿಂಗ್ ಇಲೆವೆನ್‌ನಲ್ಲಿ ಬದಲಾವಣೆ ನಿರೀಕ್ಷಿಸಬಹುದು.

**ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ:** ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹೇಝಲ್‌ವುಡ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ಯಶ್ ದಯಾಳ್, ರಾಸಿಖ್ ಸಲಾಂ, ವೆಂಕಟೇಶ್ ಅಯ್ಯರ್, ಅಭಿನಂದನ್ ಸಿಂಗ್, ಸುಯಶ್ ಶರ್ಮಾ, ಜೇಕಬ್ ಡಫಿ, ಸಾತ್ವಿಕ್ ದೇಸ್ವಾಲ್, ಮಂಗೇಶ್ ಯಾದವ್, ಜೋರ್ಡನ್ ಕಾಕ್ಸ್, ವಿಕಿ ಒಸ್ತ್ವಾಲ್, ವಿಹಾನ್ ಮಲ್ಹೋತ್ರಾ, ಕಾನಿಷ್ಕ್ ಚೌಹಾನ್, ಯಶ್ ದಯಾಲ್ (ಅಲಭ್ಯ).



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966